ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ

ಸ್ವಾತಂತ್ರ್ಯ ಹೋರಾಟದ ಸಂದರ್ಭ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್ ಅಂಶಿಕ ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕ

ಹಿರೇಬಿದ್ರಿ ಹೊಳಿಬಸಪ್ಪ

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೪ - ೦೫.

103 A

105

ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ
ಸ್ವಾತಂತ್ರ್ಯ ಹೋರಾಟದ ಸಂದರ್ಭ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕ
ಹಿರೇಬಿದ್ರಿ ಹೊಳಿಬಸಪ್ಪ

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೪-೦೫

ಮಾರ್ಗದರ್ಶಕರ ಪ್ರಮಾಣಪತ್ರ

"ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ :ಸ್ವಾತಂತ್ರ್ಯ ಹೋರಾಟದ ಸಂದರ್ಭ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಹಿರೇಬಿದ್ರಿ ಹೊಳಿಬಸಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 17.08.07

(ಡಾ. ಕೆ. ಮೋಹನ್‌ಕೃಷ್ಣ ರೈ)
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಸಂಶೋಧಕನ ಪ್ರಮಾಣ ಪತ್ರ

"ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ :ಸ್ವಾತಂತ್ರ್ಯ ಹೋರಾಟದ ಸಂದರ್ಭ" ಎಂಬ ಶೀರ್ಷಿಕೆಯ ಸಂಶೋಧನ ನಿಬಂಧವನ್ನು ಡಾ. ಕೆ. ಮೋಹನ್‌ಕೃಷ್ಣ ರೈ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೫-೪-೦೫

(ಹಿರೇಬಿದ್ರಿ ಹೊಳಿಬಸಪ್ಪ)
ಸಂಶೋಧಕ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

"ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ : ಸ್ವಾತಂತ್ರ್ಯ ಹೋರಾಟದ ಸಂದರ್ಭ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಒಪ್ಪಿಸಲು ಅವಕಾಶ ಕಲ್ಪಿಸಿಕೊಟ್ಟ ಅಂದಿನ ಕುಲಪತಿಗಳಾದ ಡಾ. ಕೆ.ವಿ. ನಾರಾಯಣ ಹಾಗೂ ಇಂದಿನ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಹಾಗೂ ಕುಲಸಚಿವರಾದ ಡಾ. ಕರೀಗೌಡ ಬಿಚನಳ್ಳಿ ಅವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುವೆ.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಸಲಹೆ, ಸಹಕಾರ ನೀಡಿದ ಮಾನ್ಯ ಅಧ್ಯಯನಾಂಗದ ನಿರ್ದೇಶಕರಾದ ಡಾ. ಟಿ.ಆರ್. ಚಂದ್ರಶೇಖರ ಹಾಗೂ ಚರಿತ್ರೆ ವಿಭಾಗದ ಅಂದಿನ ಮುಖ್ಯಸ್ಥರಾದ ಡಾ. ತಂಬಂಡ್ ವಿಜಯ್ ಪೂಣಚ್ಚ ಹಾಗೂ ಈಗಿನ ಮುಖ್ಯಸ್ಥರಾದ ಡಾ. ಸಿ.ಆರ್. ಗೋವಿಂದರಾಜು ಅವರುಗಳಿಗೆ ಅನಂತ ಧನ್ಯವಾದಗಳನ್ನು ಸಲ್ಲಿಸುವುದು ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ನನಗೆ ನಿಬಂಧದ ವಿಷಯ ಸೂಚಿಸಿ ಅಧ್ಯಯನದ ಕ್ರಮವನ್ನು ಭೋದಿಸಿ, ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ, ಸಹಕಾರ ಪ್ರೇರಣೆಗಳನ್ನು ನೀಡಿ ಅತ್ಯಂತ ಆತ್ಮೀಯವಾಗಿ ಮಾರ್ಗದರ್ಶನ ನೀಡಿದ ಡಾ. ಕೆ. ಮೋಹನ್‌ಕೃಷ್ಣ ರೈ ಅವರಿಗೆ ನನ್ನ ಮನಃಪೂರ್ವಕ ಧನ್ಯವಾದಗಳು. ಮತ್ತು ನನ್ನ ಅಧ್ಯಯನದ ಸಂದರ್ಭದಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರುಗಳಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುವೆ.

ಅಧ್ಯಯನದ ಸಂದರ್ಭದಲ್ಲಿ ಹಲವು ಸೂಕ್ತ ಸಲಹೆಗಳನ್ನು ನೀಡಿದ ಶ್ರೀಮತಿ ಸಿದ್ದಗಂಗಮ್ಮ, ಹರಿಶ್ಚಂದ್ರ ದಿಗ್ಸಂಗಿಕರ್, ಡಾ. ಹನುಮಣ್ಣ ನಾಯಕ ದೊರೆ, ಡಾ. ಚಲುವರಾಜು, ಎ.ಎಸ್. ಪ್ರಭಾಕರ್ ಹಾಗೂ ಕ್ಷೇತ್ರಕಾರ್ಯದ ಸಮಯದಲ್ಲಿ ಮಾಹಿತಿ ನೀಡಿ ಸಹಕರಿಸಿದ ಟಿ. ಗಿರಿಜ, ಬಿ.ಪಿ. ಕುಮಾರ್, ಆರ್.ವೈ. ನಾಯಕ್, ಪ್ರೊ. ರಾಜಪ್ಪ, ಡಾ. ಎಸ್.ಎಸ್. ಹಿರೇಮಠ, ಜಿ. ಬಸವಂತಪ್ಪ, ಹೆಚ್.ಬಿ. ಮಂಜುನಾಥ, ಕುಂ.ಬಾ. ಸದಾಶಿವಪ್ಪ ಹಾಗೂ ಅಧ್ಯಯನಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಿಕೊಟ್ಟ ಸ್ವಾತಂತ್ರ್ಯ ಹೋರಾಟಗಾರರಿಗೂ ನನ್ನ ಅನಂತ ಧನ್ಯವಾದಗಳು.

ಮಗನ ಓದನ್ನು ಮತ್ತು ಏಳ್ಗೆಯನ್ನು ಬಯಸುತ್ತಿರುವ ತಂದೆ-ತಾಯಿಗಳಿಗೆ ಪ್ರಣಾಮಗಳು. ನನ್ನ ಓದಿಗೆ ಸೂಕ್ತ ಪ್ರೇರಣೆ, ಸಹಕಾರ, ಪ್ರೋತ್ಸಾಹ, ಶ್ರೇಯಸ್ಸನ ಬಯಸುತ್ತಿರುವ ಮಾವನವರಾದ ಟಿ.ಎಸ್. ಕೆಂಚಪ್ಪ. ಅಕ್ಕನವರಾದ ಟಿ. ಮಂಜಮ್ಮ ಹಾಗೂ ತಂಗಿಯರಾದ ಕೆಂಚಮ್ಮ, ಯೋಗೀಶ್ವರಿ ಇವರಿಗೆ ನನ್ನ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಪುಸ್ತಕ ಸೌಲಭ್ಯವನ್ನು ಒದಗಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಅಧಿಕಾರಿಗಳಾದ ಡಾ. ರಾಧಕೃಷ್ಣನ್, ಡಾ. ಎಚ್. ನಾಗವೇಣಿ ಮತ್ತು ಇತರ ಸಿಬ್ಬಂದಿ ವರ್ಗದವರ ಸಹಕಾರವನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಸ್ನೇಹಿತರಾಗಿ, ಹಿತೈಷಿಗಳಾಗಿ ಯಾವತ್ತು ನನ್ನ ಏಳ್ಗೆಯನ್ನು ಬಯಸುತ್ತಿರುವ ಹೆಚ್. ಬುಳ್ಳಪ್ಪ, ಉದಗಟ್ಟಿ, ವೆಂಕಟೇಶ, ಸುರೇಶ, ಭೀಮಪ್ಪ, ಗುಡ್ಡಪ್ಪ, ಹುಲಗಪ್ಪ, ಷಣ್ಮುಖಪ್ಪ ಬೊದುರ, ಜಗದೀಶಕುಮಾರ್, ಅಜ್ಜಯ್ಯ, ಲೋಕರಾಜ, ನಾಗಪ್ಪ, ಗಾದೆಪ್ಪ, ಅರುಣ್‌ಕುಮಾರ್, ಡಿ. ಓಬಯ್ಯ, ದೇವರಾಜ, ಬಿದ್ರಿ ಸುನೀಲಕುಮಾರ್, ಅನಿಲಕುಮಾರ್, ಬಿ. ನಾಗರಾಜ, ಬಿ. ಮುನಿರಾಜ, ಬಿ. ಕೆಂಚಪ್ಪ, ಹನುಮಂತರಾಯ, ಮಹೇಶಕುಮಾರ್, ವೆಂಕಟೇಶ, ಸತೀಶ್, ಸೋಮನಾಥ, ಶಿವಾನಂದ, ಎಸ್. ಮಂಜುನಾಥ ಹಾಗೂ ನನ್ನ ಅಧ್ಯಯನಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರೇರಣೆ ನೀಡಿದ ಎಲ್ಲ ಗೆಳೆಯರಿಗೂ ಹಿತೈಷಿಗಳಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಚರಿತ್ರೆ ವಿಭಾಗದ ಬೋಧಕೇತರ ಸಿಬ್ಬಂದಿಯವರಾದ ಶ್ರೀ ಗಾದಿಲಿಂಗಪ್ಪ, ಸೋಮಶೇಖರ ಕಣಿವಿ, ಗಂಗಾಧರ ಇವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಪ್ರೀತಿಯಿಂದ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಮತಿ ಎ.ನಾಗವೇಣಿಯವರಿಗೆ ಕೃತಜ್ಞತೆಗಳು.

ಹೆಚ್. ಹೊಳಿಬಸಪ್ಪ

ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ

ಸ್ವಾತಂತ್ರ್ಯ ಹೋರಾಟದ ಸಂದರ್ಭ

ಪರಿವಿಡಿ

ಕರ್ನಾಟಕದಲ್ಲಿ ದಾವಣಗೆರೆ ಜಿಲ್ಲೆ



ಆಧಾರ : ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೧-೨೦೦೨

ದಾವಣಗೆರೆ ಜಿಲ್ಲೆ



ಆಧಾರ : ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ 2001 - 200

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ನಡೆದ ವಿವಿಧ ಸ್ವರೂಪದ ಹೋರಾಟಗಳಲ್ಲಿ ಸ್ವದೇಶಿ ಚಳವಳಿ ಪ್ರಮುಖವಾದದ್ದು. ಸ್ವದೇಶಿ ಚಳವಳಿಯ ಮುಖ್ಯ ಉದ್ದೇಶ ಬ್ರಿಟಿಷ್ ಅರ್ಥವ್ಯವಸ್ಥೆಯನ್ನು ಪ್ರಶ್ನಿಸುವುದು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಡಿಪಾಯ ಅದರ ಅರ್ಥವ್ಯವಸ್ಥೆಯಾಗಿತ್ತು. ಅದನ್ನು ಬಲಯುತಗೊಳಿಸಲು ಬ್ರಿಟಿಷ್ ಸರಕಾರ ನಾನಾ ರೀತಿಯ ಪ್ರಯೋಗಗಳನ್ನು ಮಾಡಿತು. ಅದನ್ನು ಮನಗಂಡ ಗಾಂಧೀಜಿ ಸ್ವದೇಶಿ ಚಳವಳಿಯೆನ್ನುವ ಪ್ರತಿತಂತ್ರವನ್ನು ಹೂಡಿದರು. ಇದು ಜನರನ್ನು ಅತಿ ಸುಲಭವಾಗಿ ತಲುಪಬಲ್ಲ ಚಳವಳಿಯಾಗಿತ್ತು. ಪರದೇಶಿ ಸರಕುಗಳನ್ನು ಧಿಕ್ಕರಿಸುವುದು, ಪಶ್ಚಿಮದ ತಂತ್ರಜ್ಞಾನ ಆಧಾರಿತ ಉತ್ಪಾದನೆ, ಅದು ಹುಟ್ಟು ಹಾಕಬಹುದಾದ ಸಮಾಜ, ಮೌಲ್ಯಗಳು ಮುಂತಾದವುಗಳನ್ನು ವಿರೋಧಿಸುವುದು ಗಾಂಧೀಜಿಯವರ ಸ್ವದೇಶೀಯ ಕಾರ್ಯಕ್ರಮಗಳಾಗಿದ್ದವು. ಅವರ ಪ್ರಕಾರ ಭಾರತದ ಅರ್ಥವ್ಯವಸ್ಥೆಯ ಅಡಿಪಾಯ ಇಲ್ಲಿನ ಗ್ರಾಮೀಣ ಉದ್ದಿಮೆಗಳು, ಗುಡಿಕೈಗಾರಿಕೆಗಳು ಮತ್ತು ಸಾಂಪ್ರದಾಯಿಕ ಕಸುಬುಗಳು. ಬ್ರಿಟಿಷ್ ಸರಕಾರ ಇವುಗಳನ್ನು ನಾಶ ಮಾಡಿ ತನ್ನ ಮಾರುಕಟ್ಟೆ ಕೇಂದ್ರಿತ ಹಾಗೂ ಬಂಡವಾಳಶಾಹಿ ಪ್ರಾಧಾನ್ಯದ ವ್ಯವಸ್ಥೆಯೊಂದನ್ನು ಹುಟ್ಟುಹಾಕಿತು.

ಬ್ರಿಟಿಷ್ ವಾಣಿಜ್ಯ ನೀತಿಯಿಂದ ಹಾಳಾಗಿದ್ದ ಭಾರತದ ಉದ್ಯಮಗಳನ್ನು ಪುನಶ್ಚೇತನ ಗೊಳಿಸುವುದಕ್ಕೆ ಬಹಿಷ್ಕಾರವನ್ನು ಒಂದು ಅಸ್ತ್ರವನ್ನಾಗಿ ಬಳಸಬೇಕೆಂಬ ಸಲಹೆಯನ್ನು ಮಾಡಲಾಗಿತ್ತು. ಬೊಂಬಾಯಿಯಲ್ಲಿ ಹೊಸದಾಗಿ ಆರಂಭಿಸಲ್ಪಟ್ಟ ಗಿರಣಿಗಳ ಮೇಲಿನ ಮ್ಯಾಂಚೆಸ್ಟರ್‌ನ ವಿರೋಧದಿಂದಾಗಿ, ಮ್ಯಾಂಚೆಸ್ಟರ್‌ನಲ್ಲಿ ತಯಾರಾದ ಬಟ್ಟೆಯನ್ನು ಬಹಿಷ್ಕರಿಸಬೇಕೆಂದು ಕರೆ ನೀಡಲಾಗಿತ್ತು. ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನು ಬೋಧಿಸಿದುದೇ ಅಲ್ಲದೆ ಅದನ್ನು ಸ್ವಲ್ಪಮಟ್ಟಿಗೆ ಆಚರಣೆಗೂ ತಂದಿದ್ದರು. ಆದರೆ ಈ ಯೋಜನೆಗಳನ್ನು ಗಂಭೀರವಾಗಿ ಮುಂದೆ ೧೯೦೫ರಲ್ಲಿ ಚೀನಿ ವಲಸೆಗಾರರನ್ನು ಅಮೇರಿಕ ಸಂಯುಕ್ತ ಸಂಸ್ಥಾನದಿಂದ ಹೊರದೂಡಿದ್ದುದರ ವಿರುದ್ಧ ಚೀನೀಯರು ಅಮೇರಿಕದ ವಸ್ತುಗಳ ವಿರುದ್ಧ ಬಹಿಷ್ಕಾರವನ್ನು ನಡೆಸಿದ್ದರು.

ಬಾರಿಸಾಲ್ ಹಿತೈಷಿ ಎನ್ನುವ ಪತ್ರಿಕೆಯಲ್ಲಿ 'ಬಂಗಾಳಿಗಳು ಚೀನೀ ಮಾರ್ಗವನ್ನು ಅನುಸರಿಸಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು' ಎಂಬುದಾಗಿ ಹೇಳಲಾಗಿತ್ತು. ಕಲ್ಕತ್ತದ 'ಸಂಜೀವಿನಿ' ಎನ್ನುವ ಬಂಗಾಳಿ ವಾರಪತ್ರಿಕೆ ಮೊದಲ ಬಾರಿಗೆ ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನು ತಿಳಿಸಿತು. 'ಹಿತಬಂಧು' ಪತ್ರಿಕೆ ಈ ರೀತಿ ಬರೆಯಿತು, "ಇಂಗ್ಲೆಂಡನ್ನು ವ್ಯಾಪಾರಿಗಳು ಆಳುತ್ತಿದ್ದಾರೆಂಬುದು ನಮಗೆ ಗೊತ್ತು. ಒಂದೇ ಒಂದು ಸಾರಿ ಮ್ಯಾಂಚೆಸ್ಟರ್‌ನ ನೇಯ್ಗೆಯವರನ್ನು ಕದರಿಸುವ ಹಾಗೆ ಮಾಡಿದರೆ ಅವರು

ಒಂದು ದೊಡ್ಡ ಕೆಲಸವನ್ನು ಮಾಡುತ್ತಾರೆ. ನಾವು ಏನು ಮಾಡಬೇಕೆಂದರೆ ಮ್ಯಾಂಚೆಸ್ಟರ್‌ನ ಪದಾರ್ಥಗಳನ್ನು ಕೊಂಡುಕೊಳ್ಳುವುದಿಲ್ಲವೆಂಬ ನಿರ್ಧಾರವನ್ನು ಕೈಗೊಳ್ಳುವುದು ಮತ್ತು ಈ ನಿರ್ಧಾರವನ್ನು ಕಾರ್ಯಗತಗೊಳಿಸುವುದು." ದೇಶಾದ್ಯಂತ ಒಂದು ರೀತಿಯ ಹೊಸ ಉತ್ಸಾಹ ಕಂಡುಬಂದಿತು. ಇವರಲ್ಲಿ ದೇಶಪ್ರೇಮದ ಉತ್ಸಾಹ ಮತ್ತು ವಂದೇಮಾತರಂನಲ್ಲಿ ಸಂಕೇತಗೊಂಡ ತಾಯಿನಾಡನ್ನು ಕುರಿತಾದ ಧಾರ್ಮಿಕ ಭಕ್ತಿ ಕಂಡುಬಂದಿತು. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳು ವಿದೇಶಿ ಸಕ್ಕರೆ ಮತ್ತು ಉಪ್ಪು ಖರೀದಿಸಿ ಅವನ್ನು ನಾಶಪಡಿಸಿದರು. ವಿಶೇಷವಾಗಿ ಭೂಮಾಲೀಕರು ಮತ್ತು ಶ್ರೀಮಂತರ ಸಹಾಯದಿಂದ ಬಹಿಷ್ಕಾರಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು ಎಂಬುದಾಗಿ ವರದಿಗಳು ತಿಳಿಸುತ್ತವೆ. ಆದರೆ ಕೆಳವರ್ಗದ ಜನರು ಸಹ ಬಹಿಷ್ಕಾರದ ಚಳವಳಿಯಲ್ಲಿ ಭಾಗವಹಿಸಿದರು ಎನ್ನುವುದನ್ನು ಮರೆಯುವಂತಿಲ್ಲ. ಬ್ರಿಟಿಷ್ ಪಾದರಕ್ಷೆಗಳನ್ನು ರೀಪೇರಿ ಮಾಡುವುದನ್ನು ಚಮ್ಮಾರರು ಒಟ್ಟುಗೂಡಿ ತಿರಸ್ಕರಿಸಿದರು. ಅಡಿಗೆಯವರು ಮತ್ತು ಸೇವಕರು ಸಭೆ ನಡೆಸಿ ವಿದೇಶಿ ವಸ್ತುಗಳನ್ನು ಬಳಸುವವರ ಮನೆಯಲ್ಲಿ ಕೆಲಸ ಮಾಡುವುದಿಲ್ಲವೆಂಬ ನಿರ್ಣಯವನ್ನು ಕೈಗೊಂಡರು. ಅಗಸರು ಸಭೆ ಸೇರಿ ವಿದೇಶಿ ಬಟ್ಟೆಗಳನ್ನು ಒಗೆಯುವುದಿಲ್ಲವೆಂದು ನಿರ್ಣಯ ಮಾಡಿದರು. ವಿದೇಶಿ ಬಟ್ಟೆಗಳನ್ನು ಉಪಯೋಗಿಸುವವರ ಮನೆಯಲ್ಲಿ ಮದುವೆ ಮಾಡಿಸುವುದನ್ನು ಪುರೋಹಿತರು ನಿಲ್ಲಿಸಿದರು. ಉತ್ತರ ಪತ್ರಿಕೆಗಳು ವಿದೇಶಿ ಕಾಗದದಿಂದ ತಯಾರಿಸಿದವು ಎಂದು ಹೇಳಿ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಲಿಲ್ಲ. ಈ ರೀತಿಯಾಗಿ ಸ್ವದೇಶಿ ಸಂದೇಶವು ಭಾರತದ ಉದ್ದಗಲಕ್ಕೂ ತಲುಪುವಂತಾಯಿತು.

ಓ ತಾಯಿಯೇ ಈ ಪವಿತ್ರದಿನದಂದು ಈ ಪವಿತ್ರ ಸ್ಥಳದಲ್ಲಿ ನಿನ್ನ ಮುಂದೆ ನಿಂತು ನನ್ನ ತಿಳುವಳಿಕೆ ಗೋಚರಿಸುವವರೆಗೆ ನಾನು ವಿದೇಶಿ ವಸ್ತುಗಳನ್ನು ಬಳಸುವುದಿಲ್ಲ, ನಮ್ಮ ಅಂಗಡಿಗಳಲ್ಲೇ ದೊರೆಯುವ ವಸ್ತುಗಳನ್ನು ಉಪಯೋಗಿಸುತ್ತೇನೆ. ವಿದೇಶಿ ಅಂಗಡಿಗಳಿಂದ ಕೊಳ್ಳುವುದಿಲ್ಲ ಹಾಗೂ ನಮ್ಮ ಜನಗಳೇ ಮಾಡಬಹುದಾದ ಕೆಲಸಗಳಿಗೆ ವಿದೇಶಿಯರನ್ನು ನೇಮಕ ಮಾಡಿಕೊಳ್ಳುವುದಿಲ್ಲ ಎನ್ನುವ ದೃಢ ಪ್ರತಿಜ್ಞೆಯೇ ಬ್ರಿಟಿಷರ ವಿರುದ್ಧ ಸಾರಿದ ಮೊದಲ ಕ್ರಾಂತಿಯ ಕಹಳೆ.[೧]

ಬ್ರಿಟಿಷ್ ಆಳ್ವಿಕೆಯ ಫಲವಾಗಿ ೨೦ನೆಯ ಶತಮಾನದ ಕೊನೆಯ ವೇಳೆಗೆ ಭಾರತವು ಒಂದು ಪಕ್ಕಾ ವಸಾಹತಾಗಿ ಪರಿವರ್ತನೆಗೊಂಡಿತು. ಅದು ಬ್ರಿಟಿಷ್ ಸಿದ್ಧವಸ್ತುಗಳಿಗೆ ಪ್ರಮುಖವಾದ ಮಾರುಕಟ್ಟೆಯಾಗಿ, ಕಚ್ಚಾವಸ್ತುಗಳು ಮತ್ತು ಆಹಾರ ಪದಾರ್ಥಗಳ ಮುಖ್ಯ ಮೂಲವಾಗಿ ಮತ್ತು ಬ್ರಿಟಿಷ್ ಬಂಡವಾಳವನ್ನು ಹೂಡಲು ಮುಖ್ಯವಾದ ಕ್ಷೇತ್ರವಾಗಿ ಪರಿವರ್ತನೆಗೊಂಡಿತು. ಪ್ರಭುತ್ವದ ಪ್ರಯೋಜನೆಗಳಿಗಾಗಿ ಇಲ್ಲಿನ ಕೃಷಿಗೆ ವಿಪರೀತವಾಗಿ ತೆರಿಗೆ ಹಾಕಲಾಗುತ್ತಿತ್ತು. ಬಹುಮಟ್ಟಿನ ಸಾರಿಗೆ ವ್ಯವಸ್ಥೆ, ಆಧುನಿಕ ಗಣಿಗಳು ಮತ್ತು ಕೈಗಾರಿಕೆಗಳು, ವಿದೇಶಿ ವ್ಯಾಪಾರ, ಕರಾವಳಿ ಮತ್ತು ಅಂತರ್ ರಾಷ್ಟ್ರೀಯ ಹಡಗು ವ್ಯಾಪಾರ, ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳು ಎಲ್ಲವೂ ವಿದೇಶಿ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಸಾವಿರಾರು ಸಂಖ್ಯೆಯ ಮಧ್ಯಮವರ್ಗದ ಇಂಗ್ಲಿಷ್ ಜನರಿಗೆ ಭಾರತವು ವೃತ್ತಿಯನ್ನು ಒದಗಿಸಿತು. ಭಾರತೀಯ ಅರ್ಥವ್ಯವಸ್ಥೆ ಮತ್ತು ಸಾಮಾಜಿಕ ಬೆಳವಣಿಗೆಗಳು

ಸಂಪೂರ್ಣವಾಗಿ ಬ್ರಿಟಿಷ್ ಅರ್ಥವ್ಯವಸ್ಥೆ ಮತ್ತು ಸಾಮಾಜಿಕ ಬೆಳವಣಿಗೆಗಳಿಗೆ ಅಧೀನವಾದವು. ಭಾರತದ ಅರ್ಥವ್ಯವಸ್ಥೆಯೂ ಜಗತ್ತಿನ ಬಂಡವಾಳಶಾಹಿ ಅರ್ಥವ್ಯವಸ್ಥೆಯೊಂದಿಗೆ ಒಂದು ಅಧೀನ ನಿಲುವಿನಲ್ಲಿ ಸೇರಿಕೊಳ್ಳಬೇಕಾಯಿತು. ಬ್ರಿಟನ್ ಮತ್ತು ಭಾರತದ ನಡುವಿನ ಆರ್ಥಿಕ ಸಂಬಂಧಗಳ ಇಡೀ ರಚನೆಯೇ ಭಾರತದ ವಸಾಹತು ಅಧೀನತ್ವವನ್ನು, ಅನಭಿವೃದ್ಧಿಯನ್ನು ಒಂದೇ ಸಮನೆ ಹೆಚ್ಚು ಮಾಡುತ್ತಲೇ ಹೋಯಿತು. ಬ್ರಿಟಿಷ್ ಆಡಳಿತ ಮತ್ತು ಭಾರತದ ಮೇಲಿನ ಅವರ ಪ್ರಭಾವ ಪ್ರಬಲವಾದ ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಯ ಉದಯಕ್ಕೆ ಕಾರಣವಾಯಿತಲ್ಲದೆ, ಭಾರತದ ಜನತೆ ಒಂದು ರಾಷ್ಟ್ರವಾಗಿ ಒಂದುಗೂಡುವಲ್ಲಿ ನೆರವಾಯಿತು. ಭಾರತದಲ್ಲಿನ ಬ್ರಿಟಿಷ್ ಆಡಳಿತಗಾರರು ಅನುಸರಿಸಿದ ಸ್ವಾರ್ಥನೀತಿಗಳು ಭಾರತದ ಬೇಸಾಯ, ಕೃಷಿಕ ವರ್ಗ, ವಾಣಿಜ್ಯ ಮತ್ತು ಕೈಗಾರಿಕೆಗಳ ಮೇಲೆ ಬಹುವಾಗಿ ದುಷ್ಪರಿಣಾಮ ಬೀರಿದವು. ಬ್ರಿಟಿಷರು ಭಾರತದ ಕೃಷಿ ಅರ್ಥವ್ಯವಸ್ಥೆಯಲ್ಲಿ ಅತಿಮುಖ್ಯವಾದ ಒಂದು ಪರಿವರ್ತನೆಯನ್ನು ಉಂಟುಮಾಡಿದರು. ಅದು ಭಾರತದ ಬೇಸಾಯ ಪದ್ಧತಿಯನ್ನು ಉತ್ತಮಪಡಿಸಿ, ಉತ್ಪಾದನೆಯನ್ನು ಹೆಚ್ಚು ಮಾಡಿ, ಅದರಲ್ಲಿ ತೊಡಗಿದ್ದ ಭಾರತೀಯರ ಯೋಗಕ್ಷೇಮ ಮತ್ತು ಅಭಿವೃದ್ಧಿಯನ್ನು ಅಧಿಕಗೊಳಿಸುವ ಉದ್ದೇಶದಿಂದಲ್ಲ. ಕೃಷಿಯನ್ನು ವಾಣಿಜ್ಯೀಕರಿಸುವುದರ ಮೂಲಕ ಲಾಭವನ್ನು ಪಡೆಯುವುದು ಬ್ರಿಟಿಷರ ಉದ್ದೇಶವಾಗಿತ್ತು. ಕೃಷಿಯಲ್ಲಿ ಅಧಿಕವಾಗಿ ಬಂದುದನ್ನೆಲ್ಲ ಭೂಕಂದಾಯದ ರೂಪದಲ್ಲಿ ವಸೂಲು ಮಾಡಲಾಗುತ್ತಿತ್ತು. ತಮಗೆ ಅನುಕೂಲಕರವಾದ ಹೊಸ ಕೃಷಿ ಸಂಬಂಧಗಳನ್ನು ಹುಟ್ಟುಹಾಕಲಾಯಿತು. ವಸಾಹತುಶಾಹಿಗಳ ಸುಲಿಗೆಯ ಹೊಡೆತವನ್ನು ಬಹಳ ಉಗ್ರವಾಗಿ ಅನುಭವಿಸಿದವರು ಭಾರತದ ಕೃಷಿಕವರ್ಗದ ಜನರು. ಆದ್ದರಿಂದ ಅವರು ಪ್ರತಿ ಹೆಜ್ಜೆಗೂ ಸರಿಯಾದ ಹೋರಾಟವನ್ನೇ ಕೈಗೊಂಡರು. ಅನೇಕ ವೇಳೆ ಜಮೀನ್ದಾರರು ಮತ್ತು ಚಿಕ್ಕಪುಟ್ಟ ನಾಯಕರ ಮುಂದಾಳತ್ವದಲ್ಲಿ ನಡೆಸುತ್ತಿದ್ದ ಪ್ರತಿಭಟನೆಗಳಿಗೆ ಕೃಷಿಕರು ಬೆನ್ನೆಲುಬಾಗಿರುತ್ತಿದ್ದರು.

ಭಾರತದ ಬಹುವಿಸ್ತಾರವಾದ ಭಾಗದಲ್ಲಿ ಹರಡಿದ ಪ್ರಾಚೀನ ಬುಡಕಟ್ಟುಗಳ ಜನರು ನೂರಾರು ಹೋರಾಟಗಳಲ್ಲಿ ಭಾಗವಹಿಸಿದ್ದರು. ಬ್ರಿಟಿಷರ ಸಾಮ್ರಾಜ್ಯ ವಿಸ್ತರಣಾ ನೀತಿ ಮತ್ತು ಅನವಶ್ಯಕ ಮಧ್ಯ ಪ್ರವೇಶಗಳು ಅವರಿಗೆ ತೀವ್ರ ಅಸಮಾಧಾನವುಂಟು ಮಾಡಿದವು. ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ಸರಳವೂ, ಸುರಕ್ಷಿತವೂ ಆದ ಬದುಕಿಗೆ ಹಣವನ್ನು ಸಾಲಕೊಡುವ ಶ್ರೀಮಂತರು, ವ್ಯಾಪಾರಿಗಳು ಮತ್ತು ಕಂದಾಯ ವಸೂಲಿಗಾರರು ಪ್ರವೇಶಿಸಿದ್ದು ಅವರಿಗೆ ಸಹಿಸಲಾಗಲಿಲ್ಲ. ಈ ಆದಿವಾಸಿಗಳನ್ನು ವಸಾಹತುಶಾಹಿ ಅರ್ಥವ್ಯವಸ್ಥೆ ಹಾಗೂ ಸುಲಿಗೆಗಳ ಪ್ರಭಾವಕ್ಕೆ ಒಳಪಡಿಸುವಲ್ಲಿ ಮಧ್ಯವರ್ತಿಗಳು ಬ್ರಿಟಿಷರ ಕೈಯ ಉಪಕರಣಗಳಾಗಿ ವರ್ತಿಸುತ್ತಿದ್ದರು. ಬುಡಕಟ್ಟು ಜನರ ಹೋರಾಟಗಳ ವಿಶಿಷ್ಟ ಲಕ್ಷಣವೆಂದರೆ, ತಾವು ಪರಂಪರಾಗತವಾಗಿ ಬಳಸುತ್ತಿದ್ದ ಕೊಡಲಿ ಅಥವಾ ಬಿಲ್ಲು-ಬಾಣಗಳ ಮೂಲಕವೇ ವ್ಯವಸ್ಥಿತವಾದ ಮತ್ತು ಶಸ್ತ್ರಸಜ್ಜಿತವಾದ ಬ್ರಿಟಿಷ್ ಸೇನೆಯನ್ನು ಎದುರಿಸಿದ್ದುದು. ಬುಡಕಟ್ಟು ಜನರು ತಮ್ಮ ಪರಿಸರದಲ್ಲೇ ನಿರ್ಮಾಣಗೊಳ್ಳುತ್ತಿದ್ದ ಆಯುಧಗಳ ಬಗ್ಗೆ ಪವಿತ್ರ ಮತ್ತು ಗೌರವಭಾವನೆಯನ್ನು ಹೊಂದಿದ್ದರು. ಅದನ್ನೇ ಬ್ರಿಟಿಷರು ತಮ್ಮ ಲಾಭಕ್ಕೆ

ಬಳಸಿಕೊಂಡರು. ಈ ರೀತಿಯಾಗಿ ಬ್ರಿಟಿಷರ ದಬ್ಬಾಳಿಕೆಯ ಆಳ್ವಿಕೆಯನ್ನು ಬುಡಕಟ್ಟು ಜನರು, ರೈತರು ಮತ್ತು ಮಹಿಳೆಯರು ಅನುಭವಿಸುತ್ತಲೇ ಜೀವನ ನಡೆಸಬೇಕಾಗಿತ್ತು. ದಾದಾಬಾಯಿ ನವರೋಜಿ ಹೀಗೆ ಹೇಳಿದ್ದಾರೆ, "ಭಾರತೀಯರು ಜೀತಗಾರರಾಗಿದ್ದಾರೆ. ಅವರು ಅಮೇರಿಕನ್ ಗುಲಾಮಗಿರಿಗಿಂತ ನೀಚ ಸ್ಥಿತಿಯಲ್ಲಿದ್ದಾರೆ. ಏಕೆಂದರೆ ಕೊನೆಯ ಪಕ್ಷ ಗುಲಾಮರನ್ನು ಅವರ ಒಡೆಯರು ತಮ್ಮ ಆಸ್ತಿ ಎಂಬುದರಿಂದಾಗಿಯಾದರೂ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಬ್ರಿಟಿಷ್ ಆಡಳಿತವು ಶಾಶ್ವತವಾದ, ಹೆಚ್ಚುತ್ತಲಿರುವ, ದಿನದಿನವೂ ಅಧಿಕವಾಗುತ್ತಿರುವ ವಿದೇಶಿ ಆಕ್ರಮಣ, ಅದು ದೇಶವನ್ನು ನಿಧಾನವಾಗಿದ್ದರೂ ಸಂಪೂರ್ಣವಾಗಿ ನಾಶಮಾಡುತ್ತದೆ."[೨]

ಬ್ರಿಟಿಷ್ ಸರಕಾರದ ವಿರುದ್ಧ ಆರಂಭಗೊಂಡ ಈ ಸ್ವದೇಶಿ ಚಳವಳಿ ಭಾರತದಾದ್ಯಂತ ಅತಿ ಬೇಗ ಹರಡಿಕೊಂಡಿತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಭಾಗವಾಗಿದ್ದ ದಾವಣಗೆರೆಯಲ್ಲಿ ನಡೆದ ಸ್ವದೇಶಿ ಚಳವಳಿ ಅಲ್ಲಿನ ಹತ್ತಿ ಉತ್ಪಾದನೆಯಿಂದಾಗಿ ಕರ್ನಾಟಕದಲ್ಲಿಯೇ ಅತ್ಯಂತ ಮಹತ್ವದ್ದಾಗಿ ಕಂಡುಬಂತು. ದಾವಣಗೆರೆಯನ್ನು ಕರ್ನಾಟಕದ 'ಮ್ಯಾಂಚೆಸ್ಟರ್' ನಗರವೆಂಬುದಾಗಿ ಕರೆಯಲಾಗುತ್ತಿತ್ತು. ದಾವಣಗೆರೆಯೂ ಹತ್ತಿ ಉತ್ಪಾದನೆಗೆ ಪ್ರಸಿದ್ಧಿಯಾಗಿತ್ತು. ಅಲ್ಲಿ ಆರಂಭಗೊಂಡ ಹತ್ತಿಗಿರಣಿಗಳು ಹೊಸ ಕೈಗಾರಿಕಾ ವಾತಾವರಣವೊಂದನ್ನು ಹುಟ್ಟುಹಾಕಿದವು. ಸ್ವದೇಶಿ ಚಳವಳಿಯಲ್ಲಿ ಹತ್ತಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಹತ್ತಿ ಬೆಳೆಯುವ ಪ್ರದೇಶಗಳಲ್ಲೆಲ್ಲ ಸ್ವದೇಶಿ ಚಳವಳಿ ಅತ್ಯಂತ ಚುರುಕಿನಿಂದ ಕೂಡಿತ್ತು. ಖಾದಿ ಉದ್ಯಮವು ಬ್ರಿಟಿಷ್ ವಸಾಹತು ನೀತಿಗೆ ಒಡ್ಡಿದ ಪ್ರಬಲ ಪ್ರತಿರೋಧವಾಗಿತ್ತು. ದಾವಣಗೆರೆಯಲ್ಲಿ ಈ ರೀತಿಯ ಪ್ರಯತ್ನಗಳು ನಡೆದವು. ಖಾದಿ ಪ್ರಚಾರದ ಬಗ್ಗೆ ಹೋರಾಡಿದ ನಾಯಕರಲ್ಲಿ ಖಾದಿ ಸಿದ್ಧಪ್ಪ, ಕಾಸಲ ಶ್ರೀನಿವಾಸಶೆಟ್ಟಿ, ಇಟಗಿ ವೇದಮೂರ್ತಿ, ಕೊಟಿಗೆ ಸಿದ್ದಲಿಂಗಪ್ಪ, ಬಳ್ಳಾರಿ ಸಿದ್ದಮ್ಮ, ಭಾಸ್ಕರಪ್ಪ, ಬೆಳ್ಳುಳಿ ಚನ್ನಬಸಪ್ಪ, ಪದ್ಮಜ್ಜಿ, ಸಿದ್ದಪ್ಪ, ಕೆ.ಟಿ. ಜಂಬಣ್ಣ ಮತ್ತು ಎನ್.ಎಸ್. ಹರ್ಡೀಕರ್ ಮೊದಲಾದವರು ಪ್ರಮುಖರು.

ಸ್ವದೇಶಿ ಚಳವಳಿಯಲ್ಲಿ ಕೇವಲ ಮೇಲ್‌ವರ್ಗದ ಜನರಷ್ಟೇ ಅಲ್ಲದೆ ಕೆಳವರ್ಗದ ಜನರೂ ಸಹ ಭಾಗವಹಿಸಿದರು. ಆದರೆ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಮೇಲ್‌ವರ್ಗದ ಅಥವಾ ಜಾತಿಯ ಹೋರಾಟವನ್ನಾಗಿ ಚಿತ್ರಿಸಲಾಗಿದೆ. ಸಮಾಜದಲ್ಲಿ ಅಲಕ್ಷಿತವಾಗಿದ್ದ ಅದೆಷ್ಟೋ ಸಮುದಾಯಗಳು ಬ್ರಿಟಿಷರ ವಿರುದ್ಧ ಹೋರಾಟ ಮಾಡಿವೆ. ಆದರೆ ಬ್ರಿಟಿಷರೊಂದಿಗೆ ಒಡಂಬಡಿಕೆ ಏರ್ಪಡಿಸಿಕೊಂಡಿದ್ದ ಸ್ಥಳೀಯ ಶ್ರೀಮಂತ ಜಮೀನ್ದಾರರು ಮತ್ತು ಶ್ರೀಮಂತ ವರ್ತಕರು ದುಡಿಯುವ ವರ್ಗಗಳ ಹಿತಾಸಕ್ತಿಗಳಿಗೆ ಅನೇಕ ಸಂದರ್ಭಗಳಲ್ಲಿ ವಿರುದ್ಧವಾಗಿಯೇ ಇದ್ದರು. ಪ್ರಬಲ ವರ್ಗಗಳು ಸಬಾಲ್ಟರ್ನ್ ವರ್ಗಗಳನ್ನು ಶೋಷಣೆ ಮಾಡುವುದರ ಬಗೆಗಳನ್ನು ಇಟಲಿಯ ಮಾರ್ಕಿಸ್ಟನಾದ ಆ್ಯಂಟೋನಿಗ್ರಾಂಸಿಯು 'ಹೆಜಮನಿ' ಎನ್ನುವ ಪರಿಕಲ್ಪನೆಯ ಮೂಲಕ ತಿಳಿಸಿದ್ದಾನೆ. ಅಲಕ್ಷಿತ ಅಥವಾ ಕೆಳವರ್ಗಗಳನ್ನು ಆತ ಸಬಾಲ್ಟರ್ನ್ ವರ್ಗ ಎಂದು ಗುರುತಿಸಿದ್ದಾನೆ. ಅಧಿಕಾರ ಮತ್ತು ಸಂಪತ್ತುಗಳೆರಡರಿಂದಲೂ ದೂರ ತಳ್ಳಲ್ಪಟ್ಟ ಬುಡಕಟ್ಟು, ಆದಿವಾಸಿ, ಕಾರ್ಮಿಕ, ರೈತ ಇತ್ಯಾದಿ ಗುಂಪುಗಳು ಅಲಕ್ಷಿತ ವರ್ಗದಲ್ಲಿ

ಬರುತ್ತವೆ. ಆ್ಯಂಟೋನಿಗ್ರಾಂಸಿಯು ಈ ಅಲಕ್ಷಿತ ವರ್ಗಗಳ ಚರಿತ್ರೆ ರಚನೆಗೆ ಪ್ರಾಮುಖ್ಯತೆ ನೀಡಿ, ಅವೂ ಚರಿತ್ರೆಗೆ ಪ್ರವೇಶ ಪಡೆಯುವಂತೆ ಮಾಡಿದನು. ಅಲ್ಲಿಂದ ಈ ಸಬಾಲ್ಟರ್ನ್ ಚರಿತ್ರೆ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು.[೩] ಅಲಕ್ಷಿತ ವರ್ಗಗಳ ಕುರಿತು ಅಧ್ಯಯನ ನಡೆಸಿರುವ ರಣಜಿತ್‌ಗುಹಾ ಅವರ ಪ್ರಕಾರ, "ಭಾರತದ ರಾಷ್ಟ್ರೀಯ ಹೋರಾಟವೆಂದರೆ ಅದು ಕೇವಲ ಪ್ರಬಲವರ್ಗಗಳ ಹೋರಾಟವಷ್ಟೇ ಅಲ್ಲ. ಸಮಾಜದ ಅಂಚಿಗೆ ತಳ್ಳಲ್ಪಟ್ಟ ಜನ-ಸಮುದಾಯಗಳು ನಡೆಸಿದ ಹೋರಾಟ ಬಹುಮುಖ್ಯವಾದದ್ದು. ಸ್ವದೇಶಿ ಎನ್ನುವ ಕಲ್ಪನೆ ಬಲವಾಗಿದ್ದದ್ದೇ ಅವರಲ್ಲಿ. ಅವರದ್ದು ಸ್ವಾರ್ಥಗಳಿಲ್ಲದ ಹೋರಾಟ. ಆದರೆ ಶ್ರೇಣೀಕೃತ ಸಮಾಜ ರಚನೆಯಲ್ಲಿ ಅವರು ಏನೇ ಮಾಡಿದರೂ ಅದು ಕೀಳುಮಟ್ಟದ್ದು ಅಥವಾ ಅನಾಗರಿಕವಾದದ್ದು ಎಂಬ ನಂಬಿಕೆಯಿದೆ. ಇದರಿಂದ ಹೊರ ಬಂದಾಗ ಮಾತ್ರ ಅವರು ನಡೆಸಿದ ಹೋರಾಟಗಳ ಪ್ರಾಮುಖ್ಯತೆ ತಿಳಿದುಬರಲು ಸಾಧ್ಯ." ಶಾಹಿದ್ ಅಮಿನ್, ಗುಡೆನ್ ರಾಮ್‌ಪಾ, ಡೇವಿಡ್ ಅರ್ನಾಲ್ಡ್, ಗ್ಯಾನಪಾಂಡೆ, ದೀಪೇಶ ಚಕ್ರವರ್ತಿ, ಸುಮಿತ್ ಸರ್ಕಾರ ಮತ್ತು ಡೇವಿಡ್ ಹಾರ್ಡಿಮನ್ ಇನ್ನು ಮುಂತಾದವರು ಈ ಹಿನ್ನೆಲೆಯಲ್ಲಿಯೇ ತಮ್ಮ ವಿಚಾರಗಳನ್ನು ಮಂಡಿಸಿದರು.[೪]

ಕರ್ನಾಟಕದ ಚರಿತ್ರೆ ಬರವಣಿಗೆಯು ಹೆಚ್ಚು ಕಡಿಮೆ ರಾಷ್ಟ್ರೀಯವಾದಿ ಮತ್ತು ಸಾಮ್ರಾಜ್ಯಶಾಹಿ ಪಂಥಗಳ ವಾದ-ಪ್ರತಿವಾದಗಳಿಗೆ ಸೀಮಿತವಾಗಿದ್ದು, ವೈಭವೀಕೃತ, ರಾಜಕೀಯ ಕೇಂದ್ರೀಕೃತ, ಜಾತಿ ಪ್ರಧಾನ ಬರವಣಿಗೆಗಳಿಗಷ್ಟೇ ಸೀಮಿತಗೊಂಡಿದೆ. ಮಾರ್ಕ್ಸ್‌ವಾದಿ ಮತ್ತು ಸಬಾಲ್ಟರ್ನ್ ಹಿನ್ನೆಲೆಯ ಬರವಣಿಗೆಗಳು ಮತ್ತು ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಕುರಿತು ಬಂದಿರುವ ಪುಸ್ತಕಗಳಲ್ಲಿ ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಕುರಿತು, ಅದರಲ್ಲೂ ಸ್ವದೇಶಿ ಚಳವಳಿಯ ಕುರಿತು ಅಲ್ಲೊಂದು ಇಲ್ಲೊಂದು ವಿವರಗಳಷ್ಟೇ ಸಿಗುತ್ತವೆ. ಭಾರತದ ಸಂದರ್ಭದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕುರಿತು, ಅದರಲ್ಲೂ ಸ್ವದೇಶಿ ಚಳವಳಿಯ ಕುರಿತು ಅನೇಕ ಕೃತಿಗಳು ಬಂದಿವೆ. ಬಿಪನ್‌ಚಂದ್ರ ಮತ್ತಿತರರು ಸೇರಿ ಬರೆದಿರುವ "ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್"[೫] ಮತ್ತು "ಫ್ರೀಡಮ್ ಸ್ಟ್ರಗಲ್",[೬] ಸುಮಿತ್ ಸರ್ಕಾರ್ ಅವರ "ಮಾಡರ್ನ್ ಇಂಡಿಯಾ"[೭] ಮತ್ತು "ದಿ ಸ್ವದೇಶಿ ಮೂವ್‌ಮೆಂಟ್ ಇನ್ ಬೆಂಗಾಲ್"[೮] ಇವು ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕೆಲವು ಕೃತಿಗಳು. ಕರ್ನಾಟಕದಲ್ಲಿ, ಅದರಲ್ಲೂ ದಾವಣಗೆರೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದ ಸ್ವದೇಶಿ ಚಳವಳಿಗಳ ಕುರಿತು ಮಾಹಿತಿ ನೀಡುವ ಕೆಲವು ಕೃತಿಗಳು ಲಭ್ಯವಿವೆ. ಡಾ. ಸೂರ್ಯನಾಥ ಕಾಮತ್ ಅವರ "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು", ಸಂ.೧,೨,೩,[೯] ಹೆಚ್.ವಿ. ಶ್ರೀನಿವಾಸಮೂರ್ತಿ, ಆರ್. ರಾಮಕೃಷ್ಣನ್‌ರವರ "ಸಮಗ್ರ ಕರ್ನಾಟಕ ಚರಿತ್ರೆ",[೧೦] ಸಿದ್ದವ್ವನಹಳ್ಳಿ ಕೃಷ್ಣಶರ್ಮರವರ "ಗಾಂಧೀ ಮತ್ತು ಕರ್ನಾಟಕ",[೧೧] ಡಿ.ಜಿ. ತೆಂಡುಲ್ಕರವರ "ಮಹಾತ್ಮ",[೧೨] ಎಸ್. ಚಂದ್ರಶೇಖರ್‌ರವರ "ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ",[೧೩] ಎಂ.ಪಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿರವರ "ಚಂದ್ರವಳ್ಳಿ",[೧೪] ಎಸ್. ಚಂದ್ರಶೇಖರರವರ "ಕರ್ನಾಟಕ ಚರಿತ್ರೆ ಸಂಪುಟ-2",[೧೫] ವಿ.ಎಸ್. ನಾರಾಯಣರಾವ್‌ರವರ "ಕರ್ನಾಟಕದಲ್ಲಿ ಗಾಂಧೀಜಿ

ಪ್ರಭಾವ",[16] ಟಿ. ಗಿರಿಜರವರ "ದಾವಣಗೆರೆ ಇದು ನಮ್ಮ ಜಿಲ್ಲೆ",[17] ಎಂ.ಜಿ. ಈಶ್ವರಪ್ಪ ಅವರ "ಶತಮಾನದ ದಾವಣಗೆರೆ",[18] ಜಿ.ಆರ್. ರಂಗಸ್ವಾಮಯ್ಯರವರ "ಕರ್ನಾಟಕದ ಸಂಕ್ಷಿಪ್ತ ಚರಿತ್ರೆ",[19] ಎಸ್.ಪಿ. ಶಂಕರನಾರಾಯಣರಾವ್ ಅವರ "ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು"[20] ಮುಂತಾದವು ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕೆಲವು ಕೃತಿಗಳು. ಈ ಕೃತಿಗಳ ಜೊತೆಗೆ ಇನ್ನು ಹಲವಾರು ಆಕರಗಳನ್ನು ಪ್ರಸ್ತುತ ಅಧ್ಯಯನಕ್ಕೆ ಉಪಯೋಗಿಸಿಕೊಳ್ಳಲಾಗಿದೆ. ಅವುಗಳೆಂದರೆ ಮೌಖಿಕ ಆಕರಗಳು, ನೇರ ಸಂದರ್ಶನದ ಹಾಗೂ ಪತ್ರಿಕೆಗಳು. ಇವುಗಳ ಮೂಲಕ ಈ ವಿಷಯಕ್ಕೆ ಸಂಬಂಧಪಟ್ಟ ಹಲವಾರು ರೀತಿಯ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ದಾವಣಗೆರೆ ಜಿಲ್ಲೆಯಾದ್ಯಾಂತ ಕ್ಷೇತ್ರ ಕಾರ್ಯ ನಡೆಸಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಾಧ್ಯವಾದಷ್ಟು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಇವುಗಳೆಲ್ಲದರ ಆಧಾರದ ಮೇಲೆ ಸ್ವಾತಂತ್ರ್ಯ ಹೋರಾಟ ಸಂದರ್ಭದ ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿಯ ಕುರಿತು ಅಧ್ಯಯನ ನಡೆಸಲಾಗಿದೆ.

ಉದ್ದೇಶ

ದಾವಣಗೆರೆ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವಿಧ ಮಜಲುಗಳನ್ನು ಗುರುತಿಸುವಾಗ ಸ್ವದೇಶಿ ಚಳವಳಿ ವ್ಯಾಪಾಕ ಬೆಂಬಲವನ್ನು ಪಡೆದುಕೊಂಡ ಚಳವಳಿಯಾಗಿ ಕಂಡು ಬರುತ್ತದೆ. ಬ್ರಿಟಿಷ್ ಬಂಡವಾಳಶಾಹಿ ಧೋರಣೆಯನ್ನು ತನ್ನ ಕಾರ್ಯಾಚರಣೆಯ ಮೂಲಕ ಇದು ಪ್ರಶ್ನಿಸಿತು, ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಬದಲಿ ವ್ಯವಸ್ಥೆಯೊಂದನ್ನು ಹುಟ್ಟುಹಾಕುವತ್ತ ಹೆಜ್ಜೆ ಹಾಕಿತು. ಈ ವಿಚಾರಗಳ ಕುರಿತು ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಕುರಿತು ಬಂದಿರುವ ಪುಸ್ತಕಗಳಲ್ಲಿ ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯದ ಹೋರಾಟದ ಕುರಿತು, ಅದರಲ್ಲೂ ಸ್ವದೇಶಿ ಚಳವಳಿಯ ಕುರಿತು ಅಲ್ಲೊಂದು ಇಲ್ಲೊಂದು ವಿವರಗಳಷ್ಟೇ ಸಿಗುತ್ತವೆ. ಪ್ರಸ್ತುತ ಅಧ್ಯಯನವು ದಾವಣಗೆರೆ ಜಿಲ್ಲೆಯಲ್ಲಿ ನಡೆದ ಸ್ವದೇಶಿ ಚಳವಳಿಯ ಪ್ರಾದೇಶಿಕ ಸ್ವರೂಪವನ್ನು ಗುರುತಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಹಾಗಾಗಿ ಪ್ರಸ್ತುತ ಅಧ್ಯಯನವು ಹಲವಾರು ಸೂಕ್ಷ್ಮ ವಿಚಾರಗಳತ್ತ ಗಮನಹರಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಅಧ್ಯಾಯ ಎರಡರಲ್ಲಿ ಸ್ವದೇಶಿ ಮತ್ತು ವಿದೇಶಿ ಕುರಿತು ಚರ್ಚೆ ನಡೆಸಲಾಗಿದೆ. ಸ್ವದೇಶಿ ಎಂದರೆ ಸ್ವದೇಶಿಯಲ್ಲಿ ತಯಾರಾದಂತಹ ವಸ್ತುಗಳನ್ನು ಮಾತ್ರ ಬಳಸುವುದು ಮತ್ತು ರಾಷ್ಟ್ರೀಯತೆಯನ್ನು ಜನರಲ್ಲಿ ಮೂಡಿಸುವುದು, ದೇಶದ ಬಗ್ಗೆ ಪ್ರೀತಿ ಮತ್ತು ಗೌರವಭಾವನೆ ಮೂಡುವಂತೆ ಜಾಗೃತಿಗೊಳಿಸುವುದು. ಸ್ವದೇಶಿ ಎಂದರೆ ಸ್ವಂತ ದೇಶದ್ದು ಎಂದು ಹೇಳಬಹುದು. ಸ್ವದೇಶಿ ಎಂಬ ಭಾವನೆ ಮೊದಲು ಕಾಣಿಸಿಕೊಂಡದ್ದು ಬಂಗಾಳದಲ್ಲಿ, ನಂತರ ಎಲ್ಲ ಪ್ರದೇಶಗಳಿಗೂ ಇದರ ಪ್ರಭಾವ ಬೀರಿತು. ಸ್ವದೇಶಿಯಲ್ಲಿ ತಯಾರಾದಂತ ವಸ್ತುಗಳನ್ನು ಮಾತ್ರ ಉಪಯೋಗಿಸಬೇಕು ಎಂಬುದು ಸ್ವದೇಶಿಯ ಅರ್ಥ. ವಿದೇಶಿ ಎಂದರೆ ಹೊರಗಿನವರು, ಅನ್ಯರು ಅಥವಾ ಬ್ರಿಟಿಷರು. ಅವರ ವಸ್ತುಗಳನ್ನು ಬಹಿಷ್ಕರಿಸುವುದು ಇದರ

ಉದ್ದೇಶ. ವಿದೇಶದಲ್ಲಿ ತಯಾರಾದಂತಹ ವಸ್ತುಗಳನ್ನು ಸ್ವದೇಶದಲ್ಲಿ ಯಾರೂ ಉಪಯೋಗಿಸಬಾರದು, ಅದರ ಪ್ರಭಾವದಿಂದ ದೇಶೀಯ ವಸ್ತುಗಳು ಮೂಲೆಗುಂಪಾಗುತ್ತವೆ ಹಾಗೂ ದೇಶೀಯ ಬಂಡವಾಳದ ಬೆಳವಣಿಗೆಯೂ ಕುಂಠಿತವಾಗುತ್ತದೆ ಎನ್ನುವುದು ಸ್ವದೇಶಿ ಸಿದ್ಧಾಂತ. ಸ್ವದೇಶದಲ್ಲಿ ತಯಾರಾದಂತ ವಸ್ತುಗಳನ್ನು ಮಾತ್ರ ಉಪಯೋಗಿಸಬೇಕು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕು ಎಂಬ ಮಂತ್ರ ರಾಷ್ಟ್ರೀಯ ನಾಯಕರದ್ದಾಗಿತ್ತು. ಸ್ವದೇಶಿ ಮತ್ತು ವಿದೇಶಿ ಬಗೆಗಿನ ವಿವರಣೆ ಕುತೂಹಲಕಾರಿಯಾಗಿದ್ದು ಅದರ ಸಂಕ್ಷಿಪ್ತ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಸ್ವದೇಶಿ ಚಳವಳಿಯ ವಿವಿಧ ಹಂತಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಗಾಂಧೀಜಿ ಭಾರತಕ್ಕೆ ಬರುವ ಪೂರ್ವದಲ್ಲಿಯೇ ಸ್ವದೇಶಿ ಚಳವಳಿ ಆರಂಭವಾಗಿತ್ತು. ಬಂಗಾಳದ ವಿಭಜನೆಯಿಂದ ಬೇಸತ್ತ ರಾಷ್ಟ್ರನಾಯಕರು ವಿದೇಶಿಯ ಆಳ್ವಿಕೆಯ ವಿರುದ್ಧ ಚಳವಳಿ ಆರಂಭಿಸಿದರು. ತಿಲಕರು ಸ್ವದೇಶಿ ಚಳವಳಿಯನ್ನು ಆರಂಭಿಸಿದರು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ ಕರೆಕೊಟ್ಟರು. ಕರ್ನಾಟಕದಲ್ಲಿ ಭರೀಂದ್ರಕುಮಾರ್ ಘೋಷ್, ಬಿಪನ್‌ಚಂದ್ರಪಾಲ್ ಅಥವಾ ವಿನಾಯಕ ಸಾವರಕರ್‌ರಂತಹ ನಾಯಕರು ಇಲ್ಲದಿದ್ದರೂ ಭೀಮರಾವ್, ಬಾಬೂರಾವ್ ಘುನಿ ಮತ್ತು ಡಾ. ಹಂಡೂರ್‌ರಂತಹ ವ್ಯಕ್ತಿಗಳು ಬಂಗಾಳದ ಕ್ರಾಂತಿಕಾರರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. ತಿಲಕರ ಸ್ವದೇಶಿ ಚಳವಳಿಗೆ ಕರ್ನಾಟಕದಲ್ಲಿ ಉತ್ತಮ ಪ್ರತಿಕ್ರಿಯೆ ಇತ್ತು. ತಿಲಕರು ಕರ್ನಾಟಕಕ್ಕೆ ಭೇಟಿಕೊಟ್ಟು, ಸ್ವದೇಶಿ, ರಾಷ್ಟ್ರೀಯ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿದರು. ದಾವಣಗೆರೆಯಿಂದ ಹರ್ಡೇಕರ ಮಂಜಪ್ಪ ಕೇಸರಿ ಮತ್ತು ಮರಾಠಿ ಪತ್ರಿಕೆಯನ್ನು ಕನ್ನಡಕ್ಕೆ ಅನುವಾದಿಸಿ ಸ್ವದೇಶಿಯ ಬಗ್ಗೆ ಜನರಿಗೆ ತಿಳಿಸಿದರು. ಎರಡನೇ ಹಂತ ಗಾಂಧೀಜಿ ದಕ್ಷಿಣ ಆಫ್ರಿಕದಿಂದ ಬಂದ ಮೇಲೆ ಸ್ವದೇಶಿ ಚಳವಳಿ ದೇಶದ ತುಂಬ ಹರಡಿತು. ಕರ್ನಾಟಕದಲ್ಲಿ ಪ್ರವಾಸ ಮಾಡಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ, ಸ್ವದೇಶಿ ವಸ್ತುಗಳನ್ನು ಪುರಸ್ಕರಿಸುವಂತೆ ಮತ್ತು ಖಾದಿ ಉದ್ದಿಮೆಯನ್ನು ಪ್ರೋತ್ಸಾಹಿಸುವಂತೆ ಗುಡಿಕೈಗಾರಿಕೆಗಳು, ಗ್ರಾಮೋದ್ಯೋಗದ ಬಗ್ಗೆ ಪ್ರಚಾರ ಮಾಡಿದರು. ಮೂರನೇ ಹಂತ ಗಾಂಧೀಜಿಯವರು ಬಂದುಹೋದ ನಂತರ ಅವರ ಪ್ರಭಾವದಿಂದಾಗಿ ಇಲ್ಲಾದ ಬದಲಾವಣೆಗಳು ಮತ್ತು ಬೆಳವಣಿಗೆಗಳು. ಸ್ವದೇಶಿ ಚಳವಳಿಯ ಈ ಮೂರೂ ಹಂತಗಳ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಗಾಂಧೀಜಿಯ ಆಗಮನವನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ ಮೇಲೆ ದೇಶದ ತುಂಬ ಪ್ರವಾಸ ಕೈಗೊಂಡರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಭಾಗವಾಗಿದ್ದ ದಾವಣಗೆರೆಗೆ ಗಾಂಧೀಜಿಯವರ ಆಗಮನ ಎರಡು ಬಾರಿ ಆಯಿತು. ಮೊದಲನೇ ಹಂತದಲ್ಲಿ ದಾವಣಗೆರೆಗೆ ಬಂದಾಗ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ತಿಳಿಹೇಳಿದರು. ಗುಜರಾತಿನಲ್ಲಿ ಅನಾವೃಷ್ಟಿಯಿಂದ ಬಹಳ ಹಾನಿಯಾಗಿದ್ದ ಸಂದರ್ಭದಲ್ಲಿ ಗಾಂಧೀಜಿಯವರು ದೇಶದ ತುಂಬ ಸಂಚರಿಸಿ ಪರಿಹಾರ

ಕಾರ್ಯವನ್ನು ಕೈಗೊಂಡರು. ದಾವಣಗೆರೆಯಲ್ಲಿ ಸಹ ಗಾಂಧೀಜಿಯವರಿಗೆ ಪರಿಹಾರ ನಿಧಿಯನ್ನು ಕೊಡಲಾಯಿತು. ಗಾಂಧೀಜಿಯವರ ಸಲಹೆ ಮೇರೆಗೆ ದಾವಣಗೆರೆ ಜಿಲ್ಲೆಯ ನಾಯಕರು ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿದರು. ಎರಡನೇ ಬಾರಿ ಗಾಂಧೀಜಿಯವರು ದಾವಣಗೆರೆಗೆ ಬಂದಾಗ ಅವರು ಹರಿಜನರ ಅಭಿವೃದ್ಧಿಯ ಬಗ್ಗೆ ಪ್ರವಾಸ ಕೈಗೊಂಡರು. ದಾವಣಗೆರೆ ಹರಿಜನರ ಕೇರಿಯಲ್ಲಿ ಸಂಚರಿಸಿದರು, ನಂತರ ಹರಿಜನ ವಿದ್ಯಾರ್ಥಿನಿಲಯಕ್ಕೆ ಶಂಕುಸ್ಥಾಪನೆ ಮಾಡಿದರು. ಈ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಸ್ವದೇಶಿ ಚಳವಳಿಗಳು ತುಂಬ ಚುರುಕಿನಿಂದ ನಡೆದವು. ಗಾಂಧೀಜಿಯ ಆಗಮನ ಕರ್ನಾಟಕದ, ಅದರಲ್ಲೂ ದಾವಣಗೆರೆಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಮೇಲೆ ಬೀರಿದ ಪರಿಣಾಮ ಹಾಗೂ ಅವರು ಕೈಗೊಂಡ ಕೆಲಸಕಾರ್ಯಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಹತ್ತಿ, ಹತ್ತಿಮಿಲ್‌ಗಳು ಮತ್ತು ಖಾದಿ ಉದ್ದಿಮೆಯ ಕುರಿತು ಚರ್ಚೆ ನಡೆಸಲಾಗಿದೆ. ದಾವಣಗೆರೆ ಜಿಲ್ಲೆಯು ಹತ್ತಿ ಉತ್ಪಾದನೆಗೆ ಹೆಸರುವಾಸಿಯಾಗಿದ್ದು, ಅಲ್ಲಿನ ವಾತಾವರಣ ಮತ್ತು ಭೌಗೋಳಿಕತೆ ಹತ್ತಿ ಬೆಳೆಗೆ ಪೂರಕವಾಗಿದೆ. ದಾವಣಗೆರೆಯಲ್ಲಿ ಒಟ್ಟು ಮೂರು ಹತ್ತಿ ಮಿಲ್‌ಗಳಿದ್ದವು. ದಾವಣಗೆರೆಯನ್ನು ಕರ್ನಾಟಕದ ‘ಮ್ಯಾಂಚೆಸ್ಟರ್’ ನಗರವೆಂಬುದಾಗಿ ಕರೆಯಲಾಗುತ್ತಿತ್ತು. ಅಲ್ಲಿ ಆರಂಭಗೊಂಡ ಹತ್ತಿ ಗಿರಣಿಗಳು ಹೊಸ ಕೈಗಾರಿಕಾ ವಾತಾವರಣವೊಂದನ್ನು ಹುಟ್ಟುಹಾಕಿದವು. ಸ್ವದೇಶಿ ಚಳವಳಿಯಲ್ಲಿ ಹತ್ತಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಹತ್ತಿಯನ್ನು ಜಿಲ್ಲೆಯಲ್ಲಿ ಅತಿಹೆಚ್ಚು ಬೆಳೆಯುವುದರಿಂದ ಹತ್ತಿ ಮಿಲ್‌ಗಳು ಆರಂಭವಾದವು. ಇಲ್ಲಿ ತಯಾರಾದಂತಹ ಬಟ್ಟೆಗಳಿಗೆ ವಿದೇಶದಲ್ಲಿ ಬೇಡಿಕೆ ಇತ್ತು. ಖಾದಿ ಉದ್ದಿಮೆ ಬ್ರಿಟಿಷ್ ವಸಾಹತುನೀತಿಗೆ ಒಡ್ಡಿದ ಪ್ರಬಲ ಪ್ರತಿರೋಧವಾಗಿತ್ತು. ಗಾಂಧೀಜಿಯವರ ಪ್ರಭಾವದಿಂದ ಖಾದಿ ಉದ್ದಿಮೆಯು ದಾವಣಗೆರೆಯಲ್ಲಿ ಹೊಸ ರೂಪವನ್ನು ಪಡೆದುಕೊಂಡಿತು. ಸ್ವಾತಂತ್ರ್ಯ ಹೋರಾಟಗಾರರು ಖಾದಿ ಪ್ರಚಾರವನ್ನು ಕೈಗೊಂಡರು. ಸ್ವಾತಂತ್ರ್ಯ ಹೋರಾಟಗಾರರು ಖಾದಿ ಬಟ್ಟೆಯನ್ನೇ ಉಪಯೋಗಿಸುತ್ತಿದ್ದರು. ಗುಡಿಕೈಗಾರಿಕೆಗಳಲ್ಲಿ ಹಾಗೂ ಚರಕದಿಂದ ನೂಲನ್ನು ತೆಗೆಯುವುದರಲ್ಲಿ ಹೆಚ್ಚೆಚ್ಚು ಜನರು ತೊಡಗಿಸಿ ಕೊಳ್ಳಲಾರಂಭಿಸಿದರು. ಬ್ರಿಟಿಷರು ಈ ಕ್ಷೇತ್ರಕ್ಕೆ ಹೊಸ ತಂತ್ರಜ್ಞಾನದೊಂದಿಗೆ ಪ್ರವೇಶಿಸಿದರು. ಇದು ಸ್ಥಳೀಯ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರಿತು. ಈ ಎಲ್ಲ ವಿಚಾರಗಳನ್ನು ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

ಅಧ್ಯಾಯ ಆರರಲ್ಲಿ ಸ್ವದೇಶಿ ಚಳವಳಿಯ ರೂವಾರಿಗಳನ್ನು ಕುರಿತು ವಿವರಿಸಲಾಗಿದೆ. ದಾವಣಗೆರೆ ಪ್ರದೇಶದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ನಿರಂತರ ಹೋರಾಟಗಳು ನಡೆದವು. ಇದರಲ್ಲಿ ಸಮಾಜದ ಎಲ್ಲ ವರ್ಗದ ಜನರೂ ಭಾಗವಹಿಸಿದರು. ರೈತರು, ಕುಶಲಕರ್ಮಿಗಳು, ಕೈಗಾರಿಕಾ ಕಾರ್ಮಿಕರು ಹಾಗೂ ಮಹಿಳೆಯರು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಧ್ವನಿ ಎತ್ತಿದರು. ಇವರೆಲ್ಲರೂ ಕೆಲವು ಮುಖಂಡರ ನಾಯಕತ್ವದಲ್ಲಿ ಹೋರಾಟ ನಡೆಸಿದರು. ಖಾದಿ ಸಿದ್ದಪ್ಪ, ಕಾಸಲ ಶ್ರೀನಿವಾಸಶೆಟ್ಟಿ, ಇಟಗಿ ವೇದಮೂರ್ತಿ, ಕೊಟಗೆ ಸಿದ್ಧಲಿಂಗಪ್ಪ, ಬಳ್ಳಾರಿ ಸಿದ್ದಮ್ಮ ಮತ್ತು

ಕೆ.ಟಿ. ಜಂಬಣ್ಣ ಮುಂತಾದವರು ಹೋರಾಟಗಳನ್ನು ಸಂಘಟಿಸಿದರು. ಇವರು ಹೋರಾಟದ ರೂವಾರಿಗಳಾಗಿ ಕಾಣಿಸಿಕೊಂಡರು.

ಕೊನೆಯ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಕಂಡುಕೊಂಡ ವಿಚಾರಗಳನ್ನು ಮಂಡಿಸಲಾಗಿದೆ. ಗಾಂಧೀಜಿಯ ಆಗಮನ ಸ್ವದೇಶಿ ಚಳವಳಿಯನ್ನು ಚುರುಕುಗೊಳಿಸಿದ ರೀತಿ, ರೈತರು, ಕಾರ್ಮಿಕರು ಮತ್ತು ಮಹಿಳೆಯರು ಹೋರಾಟ ನಡೆಸಿದ ಬಗೆ, ಬ್ರಿಟಿಷ್ ಸರಕಾರದ ಪ್ರತಿಕ್ರಿಯೆಗಳು ಈ ಮುಂತಾದ ವಿಚಾರಗಳ ಕೂಲಂಕಷ ಚರ್ಚೆಯನ್ನು ಇಲ್ಲಿ ಮಾಡಲಾಗಿದೆ.

ವ್ಯಾಪ್ತಿ

ಭೌಗೋಳಿಕವಾಗಿ ಪ್ರಸ್ತುತ ಅಧ್ಯಯನವು ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳನ್ನು ಒಳಗೊಂಡಿದೆ. ದಾವಣಗೆರೆಯು ೧೫.೮.೧೯೯೭ರ ವರೆಗೆ ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಆಗಿತ್ತು. ೧೫.೮.೧೯೯೭ರಲ್ಲಿ ದಾವಣಗೆರೆಯನ್ನು ಹೊಸ ಜಿಲ್ಲೆಯನ್ನಾಗಿ ರಚಿಸಲಾಯಿತು. ಈ ಜಿಲ್ಲೆಯಲ್ಲಿ ಸೇರಿರುವ ತಾಲೂಕುಗಳೆಂದರೆ ಹರಿಹರ, ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ಮತ್ತು ಜಗಳೂರು. ಹರಪನಹಳ್ಳಿ ಮೊದಲು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಆಗಿತ್ತು. ಚನ್ನಗಿರಿ ಮತ್ತು ಹೊನ್ನಾಳಿ ಶಿವಮೊಗ್ಗ ಜಿಲ್ಲೆಯ ತಾಲೂಕುಗಳಾಗಿದ್ದವು, ನಂತರ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದವು.[೨೧] ದಾವಣಗೆರೆ ತಾಲೂಕಿನ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ಜಗಳೂರು ತಾಲೂಕು ಮತ್ತು ಬಳ್ಳಾರಿ ಜಿಲ್ಲೆ, ಉತ್ತರದಲ್ಲಿ ಹರಪನಹಳ್ಳಿ ತಾಲೂಕು, ಪಶ್ಚಿಮದಲ್ಲಿ ಹರಿಹರ, ಹೊನ್ನಾಳಿ ತಾಲೂಕುಗಳು, ದಕ್ಷಿಣದಲ್ಲಿ ಚನ್ನಗಿರಿ ತಾಲೂಕುಗಳು ಇವೆ. ಹೊನ್ನಾಳಿ ತಾಲೂಕಿನ ಪೂರ್ವದಲ್ಲಿ ಚನ್ನಗಿರಿ ಮತ್ತು ದಾವಣಗೆರೆ ತಾಲೂಕುಗಳು, ಉತ್ತರದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಗಳಿವೆ. ಚನ್ನಗಿರಿ ತಾಲೂಕಿನ ಪಶ್ಚಿಮದಲ್ಲಿ ಹೊನ್ನಾಳಿ ತಾಲೂಕು, ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ಉತ್ತರದಲ್ಲಿ ದಾವಣಗೆರೆ ತಾಲೂಕು, ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಗಳಿವೆ. ಹರಪನಹಳ್ಳಿ ತಾಲೂಕಿನ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆ, ದಕ್ಷಿಣದಲ್ಲಿ ಹರಿಹರ, ದಾವಣಗೆರೆ ತಾಲೂಕುಗಳು, ಪಶ್ಚಿಮದಲ್ಲಿ ಹಾವೇರಿ ಜಿಲ್ಲೆಗಳಿವೆ. ಹರಿಹರ ತಾಲೂಕಿನ ಪೂರ್ವದಲ್ಲಿ ದಾವಣಗೆರೆ ತಾಲೂಕು, ಉತ್ತರದಲ್ಲಿ ಹರಪನಹಳ್ಳಿ ತಾಲೂಕು, ಪಶ್ಚಿಮದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣದಲ್ಲಿ ಹೊನ್ನಾಳಿ ತಾಲೂಕುಗಳನ್ನು ಒಳಗೊಂಡಿದೆ. ಜಗಳೂರು ತಾಲೂಕಿನ ಪಶ್ಚಿಮದಲ್ಲಿ ದಾವಣಗೆರೆ ತಾಲೂಕು, ಉತ್ತರದಲ್ಲಿ ಹರಪನಹಳ್ಳಿ ತಾಲೂಕು, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆಗಳಿವೆ. ಜಿಲ್ಲೆಯು ಉತ್ತರದ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆ, ದಕ್ಷಿಣ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ಪಶ್ಚಿಮೋತ್ತರದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣ ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿದೆ.[೨೨] ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಈ ಆರು ತಾಲೂಕುಗಳಲ್ಲಿ ನಡೆದ ಸ್ವದೇಶಿ ಚಳವಳಿಯ ಸ್ವರೂಪ ಮತ್ತು ವಿವಿಧ ಹಂತಗಳನ್ನು ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಡಿಟಿಪ್ಪಣಿಗಳು

೧. ಆರ್.ಸಿ. ಮುಜುಂದಾರ್, (ಅನು.), ಕೆ.ಎಸ್. ನಾರಾಯಣಸ್ವಾಮಿ, **ಸ್ವಾತಂತ್ರ್ಯ ಸಂಗ್ರಾಮ ಭಾಗ-ಒಂದು**, ಸಂಪುಟ ೨೩, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೯೮, ಪು. ೩೫

೨. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್ ಡೇ, **ಸ್ವಾತಂತ್ರ್ಯದ ಹೋರಾಟ**, (ಅನು.), ಅನಂತರಾಮಯ್ಯ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸ ದೆಹಲಿ, ೧೯೭೨, ಪು. ೬೫

೩. ಆ್ಯಂಟನಿಗ್ರಾಂಸಿ, **ಸೆಲೆಕ್ಷನ್ ಫ್ರಂ ದ ಪ್ರಿಸನ್ ನೋಟ್ ಬುಕ್ಸ್**, ಕ್ವಿಂಟನ್ ಹೋರೆಗಿಯೋ ಫ್ರಿ ನಾವೆಲ್‌ಸ್ಮಿತ್, ಲಂಡನ್, ೧೯೭೧

೪. ರಣಜಿತ್‌ಗುಹಾ, **ಸಬಾಲ್ಟರ್ನ್ ಸ್ಟಡೀಸ್**, ಸಂಪುಟ ೧ ರಿಂದ ೬, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, ೧೯೮೫

೫. ಬಿಪನ್ ಚಂದ್ರ ಮತ್ತು ಇತರರು, **ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್**, ಪೆಂಗ್ವಿನ್ ಬುಕ್ಸ್, ನ್ಯೂಡೆಲ್ಲಿ, ೧೯೮೮

೬. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್ ಡೇ, **ಫ್ರಿಡಮ್ ಸ್ಟ್ರಗಲ್**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸ ದೆಹಲಿ, ೧೯೭೨

೭. **ಸುಮಿತ್ ಸರ್ಕಾರ್, ಮಾಡರ್ನ್ ಇಂಡಿಯಾ**, ನ್ಯೂಡೆಲ್ಲಿ, ೧೯೮೩

೮. ಸುಮಿತ್ ಸರ್ಕಾರ್, **ದಿ ಸ್ವದೇಶಿ ಮೂವ್‌ಮೆಂಟ್ ಇನ್ ಬೆಂಗಾಲ್**, ೧೯೦೩-೧೯೦೮, ನ್ಯೂಡೆಲ್ಲಿ, ೧೯೭೩

೯. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**, ಸಂಪುಟ ೧,೨,೩, ಗೀತಾ ಬುಕ್ ಹೌಸ್, ಮೈಸೂರು, ೧೯೭೪, ೧೯೭೭, ೧೯೮೦

೧೦. ಹೆಚ್. ವಿ. ಶ್ರೀನಿವಾಸಮೂರ್ತಿ, ಆರ್. ರಾಮಕೃಷ್ಣನ್, **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟ್ ಲಾಂಗಮನ್ ಲಿಮಿಟೆಡ್, ಬೆಂಗಳೂರು, ೧೯೯೫

೧೧. ಸಿದ್ದವ್ವನಹಳ್ಳಿ ಕೃಷ್ಣಶರ್ಮ, **ಗಾಂಧೀ ಮತ್ತು ಕರ್ನಾಟಕ**, ಮೈಸೂರು ರಾಜ್ಯ ಗಾಂಧೀ ಸ್ಮಾರಕನಿಧಿ, ಗಾಂಧೀಭವನ, ಬೆಂಗಳೂರು, ೧೯೭೦

೧೨. ಡಿ.ಜಿ. ತೆಂಡೂಲ್ಕರ್, **ಮಹಾತ್ಮ**, ಸಂಪುಟ. ೨, ಪಬ್ಲಿಕೇಷನ್ ಡಿವಿಜನ್ ಮಿನಿಸ್ಟ್ರಿ ಆಫ್ ಇನ್‌ಫಾರ್ಮೇಶನ್ ಅಂಡ್ ಬ್ರಾಡ್‌ಕಾಸ್ಟಿಂಗ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ೧೯೭೫

೧೩. ಎಸ್. ಚಂದ್ರಶೇಖರ, **ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೪. ಎಂ.ಪಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿ, **ಚಂದ್ರವಳ್ಳಿ**, ಜಿಲ್ಲಾ ಕೌನ್ಸಿಲ್ ಇತಿಹಾಸ ಸಂಶೋಧನ, ಚಿತ್ರದುರ್ಗ. ೧೯೭೬

೧೫. ಎಸ್. ಚಂದ್ರಶೇಖರ, **ಕರ್ನಾಟಕ ಚರಿತ್ರೆ ಸಂಪುಟ-೭**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭

೧೬. ಪಿ.ಎಸ್. ನಾರಾಯಣರಾವ್, **ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ**, ಐಬಿಎಚ್, ಬೆಂಗಳೂರು, ೧೯೮೦

೧೭. ಟಿ. ಗಿರಿಜ, **ದಾವಣಗೆರೆ : ಇದು ನಮ್ಮ ಜಿಲ್ಲೆ**, ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧

೧೮. ಡಾ. ಎಂ.ಜಿ. ಈಶ್ವರಪ್ಪ, **ಶತಮಾನದ ದಾವಣಗೆರೆ**, ಚಂಪಲಾಲ್ ಬಿ. ಡೆಲ್ಹರಿಯಾ, ದಾವಣಗೆರೆ, ೨೦೦೧

೧೯. ಆರ್. ರಂಗಸ್ವಾಮಯ್ಯ, **ಸಂಕ್ಷಿಪ್ತ ಚರಿತ್ರೆ**, ಚೇತನ ಬುಕ್ ಹೌಸ್, ಮೈಸೂರು, ೨೦೦೧

೨೦. ಎನ್.ಪಿ. ಶಂಕರನಾರಾಯಣರಾವ್, **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು**, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು, ೧೯೯೧

೨೧. ಅದೇ, ಪು. ೧

೨೨. ಅದೇ, ಪು. ೨

* * *

ಅಧ್ಯಾಯ ೨

ಸ್ವದೇಶಿ ಮತ್ತು ವಿದೇಶಿ

ಅಧ್ಯಾಯ ೨

ಸ್ವದೇಶಿ ಮತ್ತು ವಿದೇಶಿ

ಭಾರತದ ರಾಷ್ಟ್ರೀಯ ಚಳವಳಿಗಳಲ್ಲಿ ಸ್ವದೇಶಿ ಚಳವಳಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ಈ ಚಳವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ಮಹಾತ್ಮಗಾಂಧೀಜಿಯವರು ಸ್ವದೇಶಿ ಮತ್ತು ವಿದೇಶಿ ಪದಗಳನ್ನು ವ್ಯಾಖ್ಯಾನಿಸಿದ್ದು ಹೀಗೆ, "ದೂರವಿರುವವನನ್ನು ಹೊರತು ಪಡಿಸಿ ನಮ್ಮ ಅತೀ ಸಮೀಪದ ಪರಿಸರಗಳ ಉಪಯೋಗ ಹಾಗೂ ಸೇವೆಗಳಿಗೆ ನಮ್ಮನ್ನು ಮಿತಿಗೊಳಿಸುವ ಮನೋಭಾವಕ್ಕೆ ಸ್ವದೇಶಿ ಎಂಬ ಹೆಸರು. ಹೀಗಾಗಿ ಧರ್ಮದ ವಿಷಯವಾಗಿ ಹೇಳುವುದಾದರೆ ಈ ವ್ಯಾಖ್ಯೆಯ ಪ್ರಕಾರ ನಾನು ನನ್ನ ಪೂರ್ವಿಕರು ಅನುಸರಿಸಿದ ಧರ್ಮಕ್ಕೆ ಹೊಂದಿಕೊಂಡಿರಬೇಕು. ಹಾಗೆ ಮಾಡಿದರೆ ನನ್ನ ಸಮೀಪದ ವಾತಾವರಣಕ್ಕೆ ನನ್ನನ್ನು ನಾನು ಮಿತಿಗೊಳಿಸಿಕೊಂಡಂತಾಯಿತು. ಒಂದು ವೇಳೆ ಅವರಲ್ಲಿ ದೋಷ ಕಂಡುಬಂದರೆ ಅದನ್ನು ಹೊರಗೆ ಹಾಕುವಂತೆ ನಾನು ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಬೇಕು. ಆರ್ಥಿಕ ಕ್ಷೇತ್ರದಲ್ಲಿ ಹೇಳುವುದಾದರೆ ನಾನು ನನ್ನ ತೀರ ಸಮೀಪದಲ್ಲಿರುವವರು ತಯಾರಿಸಿದ ವಸ್ತುಗಳನ್ನು ಮಾತ್ರ ಉಪಯೋಗಿಸಬೇಕು. ಆಯಾ ಸಂಸ್ಥೆಗಳು ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡಿ, ಅವುಗಳಲ್ಲಿ ಏನಾದರೂ ಕೊರತೆ ಇದೆ ಎಂದು ಕಂಡುಬಂದರೆ ಅದನ್ನು ನಿವಾರಿಸಲೂಬೇಕು. ಇಂಥ ಸ್ವದೇಶಿಯನ್ನು ಕಾರ್ಯಗತಗೊಳಿಸಿದರೆ ಅದರ ಫಲ ಸಹಸ್ರಾರು ವರ್ಷಗಳ ಮೇಲೆ ದೊರಕೀತು. ಆರ್ಥಿಕ ಹಾಗೂ ಔದ್ಯೋಗಿಕ ಜೀವನದಲ್ಲಿ ಸ್ವದೇಶಿಯಿಂದ ದೂರ ಸರಿದ ನಾಶಕಾರಕ ಧೋರಣೆಯೇ ಜನಸಾಮಾನ್ಯರಲ್ಲಿಯ ಆಳವಾದ ಬಡತನಕ್ಕೆ ಕಾರಣವಾಗಿದೆ. ಭಾರತ ದೇಶವು ಹೊರಗಿನಿಂದ ಒಂದು ವಾಣಿಜ್ಯ ವಸ್ತುವನ್ನು ತರಿಸದಿದ್ದರೆ ಇಂದು ಹಾಲುಜೇನು ಹರಿಯುವ ಭೂ ಪ್ರದೇಶವಾಗುತ್ತಿತ್ತು. ಆದರೆ ಅದು ಹಾಗಾಗಲಿಲ್ಲ. ನಾವು ಅತ್ಯಾಶೆಗಿಳಿದೆವು. ಇಂಗ್ಲೆಂಡ್ ಕೂಡಾ ಹಾಗೆ ವರ್ತಿಸಿತು. ಇಂಗ್ಲೆಂಡ್ ಹಾಗೂ ಭಾರತದ ನಡುವಿನ ಸಂಬಂಧ ದೋಷಾಧಾರಿತವಾಗಿತ್ತು ಎಂಬುದು ಸ್ಪಷ್ಟವಾಗಿದೆ. ಒಂದು ವೇಳೆ ನಾವು ಸ್ವದೇಶಿ ತತ್ವವನ್ನು ಅನುಸರಿಸಿದರೆ ನಮ್ಮ ಬೇಡಿಕೆಗಳನ್ನು ಪೂರೈಸಬಲ್ಲ ನೆರೆಯವರನ್ನು ಹುಡುಕುವ ಮತ್ತು ಇಂಥ ಆರೋಗ್ಯಕರ ಉದ್ಯೋಗಗಳಲ್ಲಿ ತೊಡಗಿರುವವರು ನಮ್ಮ ನೆರೆಯಲ್ಲಿ ಇದ್ದಾರೆಂದು ಭಾವಿಸಿ ಅವರಿಗೆ ಹೇಗೆ ಮುಂದುವರೆಯುವುದೆಂಬುದು ತೋರದಿದ್ದರೆ ನಮ್ಮ ಬೇಡಿಕೆಗಳನ್ನು ಪೂರೈಸುವ ಬಗ್ಗೆ ಶಿಕ್ಷಣ ಕೊಡಬೇಕಾದ ಹೊಣೆಗಾರಿಕೆ ನಿಮ್ಮ ಹಾಗೂ ನನ್ನ ಮೇಲಿದೆ. ಹಾಗಾದಲ್ಲಿ ಭಾರತದ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿ ಹಾಗೂ ಸ್ವಪರಿಪೂರ್ಣ ಘಟಕವಾಗುತ್ತದೆ. ಸ್ವದೇಶಿ ಎಂದರೆ ಒಂದು ಧಾರ್ಮಿಕ ಶಿಸ್ತು. ಇದಕ್ಕಾಗಿ ವ್ಯಕ್ತಿಗಳಿಗೆ ಯಾವ ಬಗೆಯ ದೈಹಿಕ ಕ್ಲೇಶವಾದರೂ ಅದನ್ನು ಅವರು ಪಾಲಿಸಲೇಬೇಕು. ಸ್ವದೇಶಿಯ ಪ್ರಭಾವದಿಂದ ಭಾರತದಲ್ಲಿ ಸಿದ್ಧವಾಗದಿರುವ ಒಂದು ಸೂಜಿ, ಇಲ್ಲವೆ ಪೆನ್ನು ಇವನ್ನು ಉಪಯೋಗಿಸಲು

ಸಾಧ್ಯವಾಗುವುದಿಲ್ಲವೆಂದು ಗಾಬರಿಗೊಳ್ಳಬೇಕಾಗಿಲ್ಲ. ಸ್ವದೇಶಿ ವ್ರತಧಾರಿಯು ಇಂದು ತಾನು ಅವಶ್ಯಕವೆಂದು ತಂದುಕೊಂಡ ನೂರಾರು ವಸ್ತುಗಳನ್ನು ಉಪಯೋಗಿಸದೆ ಹೋಗಬೇಕಾಗುವುದು. ಅಲ್ಲದೆ ಇದು ಅಸಾಧ್ಯ ಎಂದು ಸ್ವದೇಶಿಯನ್ನು ನಿರಾಕರಿಸುವವರು ಅದು ಸತತವಾದ ಪ್ರಯತ್ನದಿಂದ ಮುಟ್ಟಬಹುದಾದ ಗುರಿ ಎಂಬುದನ್ನು ತಿಳಿಯಬೇಕು. ನಮ್ಮ ದೇಶದಲ್ಲಿ ಉತ್ಪಾದಿಸಲಾಗದ ಕೆಲವು ಸರಕುಗಳ ಉಪಯೋಗವನ್ನು ಹಂಗಾಮಿಯಾಗಿ ತ್ಯಜಿಸಿದರೂ ಗುರಿಯತ್ತ ಸಾಗಿದಂತಾಗುತ್ತದೆ."[೧]

ಸ್ವರಾಜ್ಯ ಕಲ್ಪನೆಯನ್ನು ಅವರು ವ್ಯಾಖ್ಯಾನಿಸಿದ್ದು ಹೀಗೆ, "ನಮ್ಮ ತಾಯ್ನುಡಿಗಾಗಿ ನಮಗೆ ಗೌರವವಿಲ್ಲದಿದ್ದರೆ ನಮ್ಮ ಬಟ್ಟೆ, ಬರೆಗಳು ನಮಗೆ ಸೇರದಿದ್ದರೆ, ನಮ್ಮ ಉಡುಪು ನಮ್ಮನ್ನು ದೂರ ಸರಿಯುವಂತೆ ಮಾಡಿದರೆ ಚಂಡಿಕೆಯನ್ನು ಬಿಡುವದಕ್ಕೆ ನಾವು ನಾಚಿಕೆ ಪಟ್ಟರೆ, ನಮ್ಮ ಆಹಾರವನ್ನು ತಂದು ನಾವೇ ಹೇಸುವಂತಾದರೆ, ನಮ್ಮ ಹವಾಮಾನ ನಮಗೆ ಒಗ್ಗದಿದ್ದರೆ ನಮ್ಮ ಜನತೆ ಒರಟರು ಹಾಗೂ ನಮ್ಮ ಜೊತೆಗೆ ಸೇರಿಸಿಕೊಳ್ಳಲು ಅಯೋಗ್ಯರು ಎಂದೂ ನಮ್ಮ ನಾಗರಿಕತೆ ದೋಷಯುಕ್ತ ಹಾಗೂ ವಿದೇಶಿಯದ್ದು ಮನಮೋಹಕ ಎನಿಸಿದರೆ, ಒಟ್ಟಿನಲ್ಲಿ ದೇಶೀಯವಾದದ್ದು ಎಲ್ಲವೂ ಕೆಟ್ಟದು ಮತ್ತು ವಿದೇಶಿಯದ್ದು ಆನಂದದಾಯಕವಾದದ್ದು ಎಂಬ ಭಾವನೆ ನಮಗೆ ಉಂಟಾದರೆ ಸ್ವರಾಜ್ಯದ ಪ್ರಯೋಜನವೇನು ಎಂಬುದೇ ನಮಗೆ ತಿಳಿಯುತ್ತಿಲ್ಲ. ಪರದೇಶದಿಂದ ಬಂದ ಪ್ರತಿಯೊಂದನ್ನು ಅಳವಡಿಸಿಕೊಳ್ಳುವುದಾದರೆ ನಿಜವಾಗಿಯೂ ನಾವು ಪರಕೀಯರ ರಕ್ಷಣೆಯಲ್ಲಿ ಮುಂದುವರೆಯುವುದು ಅವಶ್ಯವಾಗುತ್ತದೆ. ಏಕೆಂದರೆ ವಿದೇಶಿ ನಾಗರಿಕತೆ ಸಾಮಾನ್ಯ ಜನತೆಯಲ್ಲಿ ಇನ್ನು ವ್ಯಾಪಿಸಿಲ್ಲ. ನಾವು ಸ್ವರಾಜ್ಯದ ಸ್ವಾರಸ್ಯವನ್ನು ಗ್ರಹಿಸುವ ಮೊದಲು ಸ್ವದೇಶಿಯ ಬಗೆಗೆ ಪ್ರೀತಿಯಷ್ಟೇ ಅಲ್ಲ ಹಂಬಲವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ನಮ್ಮ ಪ್ರತಿಯೊಂದು ಕಾಯಕವೂ ಸ್ವದೇಶಿ ಮುದ್ರೆಯನ್ನು ಹೊಂದಬೇಕು. ರಾಷ್ಟ್ರೀಯವೆಂದಿರುವ ಬಹುಶಃ ಎಲ್ಲವೂ ಒಟ್ಟಿನಲ್ಲಿ ಒಳ್ಳೆಯದೆಂಬ ತಿಳಿವಳಿಕೆಯ ಮೇಲೆ ಸ್ವರಾಜ್ಯವನ್ನು ಕಟ್ಟುವುದು ಸಾಧ್ಯವಾಗುವುದು. ಇಲ್ಲಿ ಪ್ರತಿಪಾದಿಸಲಾದ ದೃಷ್ಟಿಕೋನ ಸರಿಯಾಗಿದ್ದರೆ ಸ್ವದೇಶಿ ಆಂದೋಲನವು ಭರದಿಂದ ಸಾಗಬೇಕು. ಸ್ವರಾಜ್ಯದ ಚಳವಳಿಯನ್ನು ನಡೆಸಿದ ಪ್ರತಿಯೊಂದು ದೇಶವೂ ಸ್ವದೇಶಿ ಮನೋಭಾವವನ್ನು ಸರಿಯಾಗಿ ಮೆಚ್ಚಿಕೊಂಡಿದೆ."[೨]

ಸ್ವದೇಶದಲ್ಲಿ ಸ್ವಾವಲಂಬಿಗಳಾಗಲು ಗಾಂಧೀಜಿ ಕರೆ ಇತ್ತರು. ಅನೇಕ ಪದಾರ್ಥಗಳನ್ನು ನಮ್ಮ ದೇಶದಲ್ಲೇ ತಯಾರಿಸಲು ಆಗಿನ ಬ್ರಿಟೀಷ್ ಸರ್ಕಾರ ಅನುಮತಿ ಕೊಡುತ್ತಿರಲಿಲ್ಲ. ನಮ್ಮಲ್ಲಿ ಕಚ್ಚಾಮಾಲು ಹತ್ತಿ ಇದ್ದರೂ ಅದು ವಿದೇಶಕ್ಕೆ ಹೋಗಿ ಬಟ್ಟೆಯಾಗಿ ಇಲ್ಲಿಗೆ ಬರುತ್ತಿತ್ತು. ಇದರಿಂದ ಹೆಚ್ಚು ಹಣ ಖರ್ಚಾಗುತ್ತಿತ್ತು. ನಮ್ಮ ದೇಶದ ಬಂಡವಾಳ ಪರದೇಶಕ್ಕೆ ಹೋಗಿ ಸೇರುತ್ತಿತ್ತು. ಹೀಗಾಗಿ ವಿದೇಶಿ ಮಾಲನ್ನು ಬಹಿಷ್ಕರಿಸಲು ಗಾಂಧೀಜಿ ಕರೆಕೊಟ್ಟರು. ಚರಕದಿಂದ ತಾವೇ ನೂಲನ್ನು ತೆಗೆಯುತ್ತಿದ್ದರು. ಮಗ್ಗದಿಂದ ನೇಯ್ದ ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು. ಪರದೇಶಿ ವಸ್ತುಗಳನ್ನು, ವಸ್ತ್ರಗಳನ್ನು ಅವರು ಉಪಯೋಗಿಸುತ್ತಿರಲಿಲ್ಲ. ಸ್ವದೇಶಿ ವಸ್ತುಗಳನ್ನೇ ಉಪಯೋಗಿಸುವ ಮನೋಭಾವ

ಗಾಂಧೀಜಿಯವರಲ್ಲಿ ತೀವ್ರವಾಗಿತ್ತು. ನಮ್ಮಲ್ಲಿ ಫೌಂಟನ್ ಪೆನ್ನು ತಯಾರಾಗುತ್ತಿರಲಿಲ್ಲ. ಉತ್ತಮ ಮಟ್ಟದ ಶಾಯಿ ಕೂಡ ಸಿಗುತ್ತಿರಲಿಲ್ಲ. ಆದರೆ ಪ್ರತೀ ದಿನ ಗಾಂಧೀಜಿ ಬರೆಯಬೇಕಾಗುತ್ತಿತ್ತು. ಅದಕ್ಕಾಗಿ ಅವರು ಲೇಖನಿಯಂತೆ ಕೋಳಿಯ ಗರಿಯನ್ನು, ಶಾಯಿಗಾಗಿ ಅರಳೆಕಾಯಿಯ ಮಸಿಯನ್ನು ಬಳಸುತ್ತಿದ್ದರು. ಸಕ್ಕರೆಯ ಬದಲು ಬೆಲ್ಲ, ಟೂತ್‌ಪೇಸ್ಟ್ ಬದಲು ಬೇವಿನ ಕಡ್ಡಿ, ಹಲ್ಲುಪುಡಿಯ ಬದಲು ಸುಟ್ಟ ಬಾದಾಮಿ ತೊಗಟೆಯ ಪುಡಿಯನ್ನು ಬಳಸುತ್ತಿದ್ದರು. ಗುಂಡುಸೂಜಿಯ ಬದಲು ಗೊಬ್ಬಳಿ ಮುಳ್ಳನ್ನು ಉಪಯೋಗಿಸುತ್ತಿದ್ದರು.[೬] ಸ್ವದೇಶಿ ಭಾವನೆ ಭಾರತೀಯರಲ್ಲಿ ಜಾಗೃತವಾದದ್ದು ಬ್ರಿಟೀಷ್‌ರಿಂದಲೇ. ಅವರ ಆಳ್ವಿಕೆಯಿಂದ ಭಾರತ ತತ್ತರಿಸುತ್ತಿದ್ದಾಗ ಗಾಂಧೀಜಿ ಸ್ವದೇಶಿ ವಸ್ತುಗಳನ್ನು ಬಳಸಲು ಒತ್ತಿ ಹೇಳಿದರು. ಸ್ವದೇಶಿ ಚಳವಳಿ ಭಾರತದಲ್ಲಿ ಸ್ವಾತಂತ್ರ್ಯಕ್ಕೆ ದಾರಿ ಮಾಡಿಕೊಟ್ಟಿತು. ಗಾಂಧೀಜಿಯವರಿಂದ ಸ್ವದೇಶಿ ಚಳವಳಿ ಆರಂಭವಾಯಿತು. ವಿದೇಶಿ ವಸ್ತುಗಳನ್ನು ಸುಡಲಾಯಿತು. ಎಲ್ಲರೂ ಖಾದಿ ಬಟ್ಟೆಗೇ ಶರಣಾದರು. ಇನ್ನೂ ನಾವು ದಾಸ್ಯದಿಂದ ಬದುಕುವುದು ಸಾಕು ಎಂದು ಗಾಂಧೀಜಿ ಕರೆಕೊಟ್ಟರು.[೭]

೧೯೦೫ರಲ್ಲಿ ಬಂಗಾಳದ ವಿಭಜನೆಯಾದಾಗ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ಹುರುಪು ಮೂಡಿತು. ಈ ಸಮಯಕ್ಕೆ ಆರಂಭವಾದ ವಂಗಭಂಗ ವಿರೋಧಿ ಚಳವಳಿಯ ಅಂಗ ಸ್ವದೇಶಿ ಚಳವಳಿ. ಇದು ಸ್ವಾವಲಂಬನೆಯ ಮಾರ್ಗ ತೋರಿಸಿತು. ಬ್ರಿಟಿಷ್ ಸರಕಾರ ವಂಗ ವಿಭಜನೆ ಮಾಡಲು ನಿಶ್ಚಯಿಸಿದಾಗ ಕಾಂಗ್ರೆಸ್ಸಿನಲ್ಲಿದ್ದ ಉಗ್ರ ಹಾಗೂ ಸೌಮ್ಯವಾದಿಗಳಿಬ್ಬರೂ ವಿರೋಧಿಸಿದರು. ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ತಿಲಕ್, ಲಾಲಾಲಜಪತರಾಯ್, ಬಿಪಿನಚಂದ್ರಪಾಲ್ ಇವರೆಲ್ಲ ಇದರ ಮುಂದಾಳುಗಳು. ಬ್ರಿಟಿಷರಿಂದ ತಯಾರಿಸಲ್ಪಟ್ಟ ಪದಾರ್ಥಗಳನ್ನು ಬಹಿಷ್ಕಾರ ಮಾಡುವ ನಿರ್ಧಾರ ಕೈಗೊಂಡರು. ಬಂಗಾಳದ ಜನಪ್ರಿಯ ನಾಯಕ ಕೃಷ್ಣಕುಮಾರಮಿತ್ರ "ಸ್ವದೇಶಿ ಪದಾರ್ಥಗಳು ದೊರೆಯುವಾಗ ಎಷ್ಟೇ ಅನಾನುಕೂಲತೆಗಳಿದ್ದರೂ ಎಂದಿಗೂ ವಿದೇಶಿ ಪದಾರ್ಥಗಳನ್ನು ಬಳಸುವುದಿಲ್ಲ ಎಂದು ತಾಯಿನಾಡಿನ ಹೆಸರಿನಲ್ಲಿ, ದೇಶದ ಒಳತಿಗಾಗಿ, ಹೀಗೆ ಪ್ರತಿಜ್ಞೆ ಕೈಗೊಳ್ಳೋಣ" ಎಂದು ಕರೆ ಇತ್ತರು. ಆದರೆ ಬ್ರಿಟಿಷ ಸರಕಾರ ಈ ಬೆದರಿಕೆಗೆ ಮಣಿಯದೆ ಬಂಗಾಳವನ್ನು ವಿಭಜಿಸಿತು.[೮] ಇದರಿಂದ ಸ್ವಾತಂತ್ರ್ಯ ಚಳವಳಿ ಹಬ್ಬಿತು. ಸ್ವದೇಶಿ ಕಲ್ಪನೆ ಜನರ ಮನಸ್ಸಿನಲ್ಲಿ ನಾಟಿತು. ಅಲ್ಲಲ್ಲಿ ಬೆಂಕಿ ಉರಿಸಿ ಜನ ವಿದೇಶಿ ಬಟ್ಟೆಗಳನ್ನು ಸುಟ್ಟರು. ವಿದೇಶಿ ಸಾಮಾನುಗಳನ್ನು ಮಾರುವ ಅಂಗಡಿಗಳು ಮಾರಾಟ ನಡೆಸದಂತೆ ತಡೆ ಕಾವಲು ಹಾಕಿದರು. ಪಾಶ್ಚಾತ್ಯ ವಿದ್ಯಾಸಂಸ್ಥೆಗಳನ್ನು ಬಹಿಷ್ಕರಿಸಿದರು. ಕೈಮಗ್ಗ ಉದ್ಯಮ ಮತ್ತೆ ಚಿಗುರಿತು. ಕಾಲೇಜು ವಿದ್ಯಾರ್ಥಿಗಳು ಬ್ರಿಟನ್ನಿನಲ್ಲಿ ತಯಾರಾದ ಕಾಗದದ ಮೇಲೆ ಬರೆಯಲು ನಿರಾಕರಿಸಿದರು. ಸ್ವದೇಶಿ ಚಳವಳಿಯಿಂದ ಭಾರತದ ದೇಶಿ ಉದ್ಯಮಕ್ಕೆ ಉತ್ಸಾಹ ಕೊಟ್ಟಂತಾಯಿತು. ದೇಶದಲ್ಲಿ ಅನೇಕ ದೇಶಿ ಕೈಗಾರಿಕೆಗಳು ತಲೆಯೆತ್ತಿದುವು.[೯]

೧೯೦೫ರಲ್ಲಿ ಜನತೆಯ ಭಾವನೆಗಳಿಂದಾಗಿ ಉದಯಿಸಿದ ಸ್ವದೇಶಿ ಹಾಗೂ ವಿದೇಶಿ ವಸ್ತು ಬಹಿಷ್ಕಾರ ಎಂಬ ಕಲ್ಪನೆಗಳು ಹೊಸದೇನಲ್ಲ. ಇದಕ್ಕೂ ಮುಂಚಿತವಾಗಿ ಅಮೆರಿಕನ್ನರು, ಚೀನಿಯರು, ಐರಿಷ್ ಜನ ಅನುಸರಿಸಿದ್ದರು. ಭಾರತೀಯ ಕೈಗಾರಿಕೆಯ ಅಭಿವೃದ್ಧಿಗೆ ಆರ್ಥಿಕವಾದ ಕ್ರಮ ಸ್ವದೇಶಿ. ಇದನ್ನು ಮಹಾರಾಷ್ಟ್ರದ ಗೋಪಾಲರಾವ್ ದೇಶಮುಖ್, ಜಿ.ವಿ. ಜೋಶಿ ಮತ್ತು ಎಂ.ಜಿ. ರಾನಡೆ, ಬಂಗಾಳದ ರಾಜ ನಾರಾಯಣಬೋಸ್, ನಬಗೋಪಾಲಮಿತ್ರ ಮತ್ತು ರವೀಂದ್ರನಾಥ ಠಾಕೂರರ ಮನೆತನದವರು ಉಪದೇಶಿಸಿದ್ದರು. ಇದೇ ರೀತಿ ಭೋಲಾನಾಥಚಂದ್ರ ೧೮೭೦ ರಲ್ಲಿ ಬ್ರಿಟಿಷ್ ಜನತೆಯ ಮೇಲೆ ಆರ್ಥಿಕ ಒತ್ತಡ ತರುವ ಸಲುವಾಗಿ ಬಹಿಷ್ಕಾರವನ್ನು ಶಿಫಾರಸು ಮಾಡಿದ್ದರು. ೧೮೯೬ರಲ್ಲಿ ತಿಲಕರು ಪೂರ್ಣ ಪ್ರಮಾಣದ ಬಹಿಷ್ಕಾರ ಚಳವಳಿಯನ್ನೇ ಮಾಡಿದ್ದರು. ಸ್ವದೇಶಿಯೂ ವಿದೇಶಿ ವಸ್ತು ಬಹಿಷ್ಕಾರವೂ ಪರಸ್ಪರ ಪೂರಕವಾದವು. ಒಂದಿಲ್ಲದೆ ಇನ್ನೊಂದು ಯಶಸ್ವಿಯಾಗುತ್ತಿರಲಿಲ್ಲ. ಬಂಗಾಳದ ವಿಭಜನೆ ವಿರೋಧಿ ಚಳವಳಿಯಿಂದಾಗಿ ಈ ಹಿಂದಿನ ಕಲ್ಪನೆಗಳಿಗೆ ಹೊಸ ಚೈತನ್ಯ ಮೂಡಿತು. ಆದರೆ ಮಿತಗಾಮಿಗಳಿಗೂ ಮತ್ತು ತೀವ್ರಗಾಮಿಗಳಿಗೂ ಇದ್ದ ಭಿನ್ನಾಭಿಪ್ರಾಯವನ್ನು ಅದು ಬೆಳಕಿಗೆ ತಂದಿತು. ಮುಂಬಯಿಯ ಮಿತಗಾಮಿಗಳು ಸ್ವದೇಶಿ ತತ್ವವನ್ನು ಸ್ವೀಕರಿಸಿದರೂ ರಾಜಕೀಯದ ಸಾಮಾನ್ಯ ಅಸ್ತ್ರವಾಗಿ ವಿದೇಶಿ ವಸ್ತು ಬಹಿಷ್ಕಾರದ ತತ್ವವನ್ನು ವಿರೋಧಿಸಿದರು. "ಇನ್ನೊಬ್ಬನನ್ನು ಗಾಸಿಗೊಳಿಸಬೇಕೆಂಬ ಸೇಡಿನ ಭಾವನೆ" ಇರುವುದರಿಂದಲೂ ನಮ್ಮ ನಮ್ಮಲ್ಲಿಯೇ ಅನಾವಶ್ಯಕವಾದ ಅತೃಪ್ತಿಗಳನ್ನು ಉದ್ಭವಿಸುವುದಾದ್ದರಿಂದಲೂ ಗೋಖಲೆ ಬಹಿಷ್ಕಾರ ಎಂಬ ಶಬ್ದವನ್ನೇ ಕೈಬಿಡಬೇಕೆಂದರು. ಆ ಸಮಯದಲ್ಲಿ ನಡೆದಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಹೋರಾಡುವುದಕ್ಕೆ ಬಹಿಷ್ಕಾರ ಒಂದು ವಿಶೇಷವಾದ ಕ್ರಮ ಎಂದು ಸುರೇಂದ್ರನಾಥ ಬ್ಯಾನರ್ಜಿ ಭಾವಿಸಿದರು. ಲಜಪತರಾಯ್ ಇನ್ನೂ ತೀವ್ರಗಾಮಿಗಳಾಗಿದ್ದರು. ಬ್ರಿಟಿಷರ ಗಮನವನ್ನು ಭಾರತೀಯರ ದುಃಖ ಸಂಕಟಗಳ ಕಡೆಗೆ ತಿರುಗುವಂತೆ ಮಾಡಬೇಕಾದರೆ, ಅವರ ಖಜಾನೆಗೆ ನೇರವಾಗಿ ಬೆದರಿಕೆಯೊಡ್ಡಬೇಕು ಎಂದರು. ತಿಲಕ್, ಪಾಲ್ ಮತ್ತು ಅರವಿಂದೋ ಇವರಿಗಾದರೂ ಬಹಿಷ್ಕಾರ ಎಂಬ ವಿಚಾರ ಅನೇಕ ಅಂಶಗಳನ್ನು ಒಳಗೊಂಡಿತ್ತು. ಮ್ಯಾಂಚೆಸ್ಟರಿನ ಮೇಲೆ ಹಾಕಿದ ಆರ್ಥಿಕ ಒತ್ತಡ, ಸಾಮ್ರಾಜ್ಯಶಾಹಿಯ ವಿರುದ್ಧ ರಾಜಕೀಯ ಚಳವಳಿ, ಸ್ವರಾಜ್ಯದ ಗಳಿಕೆಗೆ ಸ್ವಸಂಪೂರ್ಣತೆಯಲ್ಲಿ ಶಿಕ್ಷಣ ಇತ್ಯಾದಿ ತಾತ್ಕಾಲಿಕವಾಗಿ ಭಿನ್ನಾಭಿಪ್ರಾಯಗಳನ್ನು ಸಮಾಧಾನಪಡಿಸಿಕೊಳ್ಳಲಾಯಿತು. ವಿಭಜನ-ವಿರೋಧಿ ಚಳವಳಿಯು ಸ್ವದೇಶಿ ಚಳವಳಿಯಾಗಿ ಬೆಳೆದು ಬೇರೆ ಬೇರೆಯಾಗಿದ್ದ ಮತ್ತು ದುರ್ಬಲವಾಗಿದ್ದ ಶಕ್ತಿಗಳಿಗೆ ಒಂದು ನೂತನ ಶಕ್ತಿಯನ್ನು ಉತ್ಸಾಹವನ್ನು ಉಂಟುಮಾಡಿತು. ಬಂಗಾಳದ ಘಟನೆಗಳು ಅನೇಕ ಕಾಂಗ್ರೆಸ್ ನಾಯಕರು ಬ್ರಿಟಿಷರ ನ್ಯಾಯಯುತ ವರ್ತನೆ ಹಾಗೂ ಬಿನ್ನಹಗಳು, ಮನವಿಗಳು, ಪತ್ರಿಕಾ ಲೇಖನಗಳು, ಸಭೆಗಳ ಮೂಲಕ ಮಂದಗಾಮಿಗಳು ಸಾಂವಿಧಾನಿಕವಾಗಿ ಮಾಡುತ್ತಿದ್ದ ಚಳವಳಿ ವಿಧಾನಗಳ ಸಮರ್ಪಕತೆ ಇವುಗಳಲ್ಲಿ ಇಟ್ಟಿದ್ದ ನಂಬಿಕೆಗಳನ್ನು ಅಲುಗಾಡಿಸಿದವು. ಸ್ವದೇಶಿ ಚಳವಳಿಯು ಜಾತಿ ಪಂಥಗಳ ಭೇದವಿಲ್ಲದೆ ಹೊಸ ಹೊಸ ಜನವರ್ಗಗಳನ್ನು ರಾಜಕೀಯಕ್ಕೆ ತಂದಿತು. ಪತ್ರಿಕೆಗಳಿಗೆ

ಪಂಡಿತವಾದಿಗಳಾಗಿರಲು. ಹಿಂದೂ ಮತ್ತು ಮುಸ್ಲಿಂರಿಗೆ ಸಹಕರಿಸಲು, ವಿದ್ಯಾರ್ಥಿಗಳಿಗೆ ಕ್ರಾಂತಿಯೇಳಲು, ಪ್ರತಿಯೊಬ್ಬರಿಗೂ ತಮ್ಮ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯ ಮೇಲೆ ಚಿಂತನೆ ನಡೆಸಲು, ಹೆದರಿಕೆಯನ್ನು ಕೊಡವಿ ಹಾಕಲು, ಲಾಠಿ ಹೊಡೆತವನ್ನಾಗಲಿ, ಸೆರೆಮನೆ ವಾಸವನ್ನಾಗಲಿ, ಕೊನೆಗೆ ಗಲ್ಲುಶಿಕ್ಷೆಯನ್ನಾಗಲಿ ರಾಷ್ಟ್ರಸೇವೆಯಲ್ಲಿ ಪಡೆದಕೊಂಡ ಪರಮಗೌರವವೆಂಬಂತೆ ಸ್ವಾಗತಿಸಲು ಅದು ಹೇಳಿಕೊಟ್ಟಿತು. ತಿಲಕರು ಸ್ವದೇಶಿ ವಸ್ತುಗಳ ಬಳಕೆ, ವಿದೇಶಿ ವಸ್ತು ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣಗಳ ಮೂಲ ಗುರಿ ಸ್ವರಾಜ್ಯದ ಸಾಧನೆ ಎಂದು ಒತ್ತಿ ಹೇಳಿದರು. ಇಡೀ ಬಂಗಾಳ ಪೂರ್ತಿಯಾಗಿ ಮತ್ತು ಭಾರತದ ಅನೇಕ ನಗರಗಳಲ್ಲಿ, ಪಟ್ಟಣಗಳಲ್ಲಿ ಬಹಿರಂಗ ಸಭೆಗಳು ನಡೆದು ಬಹಿಷ್ಕಾರ ಮತ್ತು ಸ್ವದೇಶಿ ಕರೆ ನೀಡಿದವು. ಅದಕ್ಕೆ ಎರಡು ಮಾರ್ಗಗಳಿದ್ದವು. ಒಂದು ಕಡೆ ಬ್ರಿಟಿಷ್ ವಸ್ತುಗಳನ್ನು ಬಹಿರಂಗವಾಗಿ ಸುಡಲಾಗುತ್ತಿತ್ತು. ಅವುಗಳನ್ನು ಮಾರುವ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಲಾಗುತ್ತಿತ್ತು. ಮತ್ತೊಂದು ಕಡೆ ಸ್ವದೇಶಿ ವಸ್ತುಗಳ ಉತ್ಪಾದನೆ ಮತ್ತು ಮಾರಾಟಗಳನ್ನು ಅಭಿವೃದ್ಧಿ ಮಾಡಲು ಬಿರುಸಾದ ಕ್ರಮ ಕೈಗೊಳ್ಳಲಾಗುತ್ತಿತ್ತು. ಸಿಹಿ ತಿಂಡಿ ಮಾಡುವವರು ವಿದೇಶಿ ಸಕ್ಕರೆ ಬಳಸುವುದಿಲ್ಲ ಎಂದರು. ಬಟ್ಟೆ ತೊಳೆಯುವವರು ವಿದೇಶಿ ಬಟ್ಟೆಗಳನ್ನು ತೊಳೆಯುವುದರ ವಿರುದ್ಧವಾದರು. ಪುರೋಹಿತರು ವಿದೇಶಿ ವಸ್ತುಗಳನ್ನು ಉಪಯೋಗಿಸಿ ಪೂಜೆ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. ದಕ್ಷಿಣದ ಮತ್ತು ಬಂಗಾಳದ ಸ್ತ್ರೀಯರು ವಿದೇಶಿ ಬಳೆಗಳನ್ನು, ಗಾಜಿನ ಪಾತ್ರೆಗಳನ್ನು ಉಪಯೋಗಿಸುವುದನ್ನು ಬಿಟ್ಟರು. ವಿದ್ಯಾರ್ಥಿಗಳು ವಿದೇಶಿ ಕಾಗದವನ್ನು ಬಳಸಲು ನಿರಾಕರಿಸಿದರು. ವಕೀಲರು, ಡಾಕ್ಟರರು ಕೂಡ ಬ್ರಿಟಿಷ್ ಉತ್ಪಾದನೆಗಳನ್ನು ಮಾರುತ್ತಿದ್ದವರಿಗೆ ಪ್ರೋತ್ಸಾಹ ಕೊಡಲಿಲ್ಲ. ಪಿಕೆಟಿಂಗ್ ಜೊತೆಗೆ ಸಾಂಪ್ರದಾಯಿಕ ವಿಧಾನದ ಸಾಮಾಜಿಕ ಬಹಿಷ್ಕಾರವೂ ಸೇರುತ್ತಿತ್ತು. ಬಾರಿಸಾಲ್‌ನಂತಹ ಪ್ರಮುಖ ಸ್ಥಳಗಳಲ್ಲಿ ವರ್ತಕರು ಉಪ್ಪು ಮತ್ತು ಬಟ್ಟೆಗಳನ್ನು ನಾಶಮಾಡಲು ಸ್ವ-ಇಚ್ಛೆಯಿಂದ ಒಪ್ಪಿಗೆಕೊಟ್ಟರು. ಅದಕ್ಕಾಗಿ ಪುಂಡುದಂಡನೆಯ ಪೋಲೀಸರಿಂದ ಶಿಕ್ಷೆಯನ್ನು ಬರಮಾಡಿಕೊಂಡರು.

ಚಳವಳಿಯ ತನ್ನ ವಾಸ್ತವ ಮುಖದಲ್ಲಿ ಗೃಹಕೈಗಾರಿಕೆಗಳಿಗೂ ಅನೇಕ ಬಗೆಯ ಬೃಹತ್ ಪ್ರಮಾಣದ ಉದ್ಯಮಗಳಿಗೂ ಒಂದು ಪ್ರಚೋದನೆಯನ್ನು ನೀಡಿತು. ಎಲ್ಲೆಲ್ಲೂ ಸ್ವದೇಶಿ ಬಟ್ಟೆ ಗಿರಣಿಗಳು, ಬೆಂಕಿಪೊಟ್ಟಣ ಮತ್ತು ಸೋಪಿನ ಕಾರ್ಖಾನೆಗಳು, ಮಡಿಕೆ ಕುಡಿಕೆಗಳು ಮತ್ತು ಚರ್ಮಗಾರಿಕೆಗಳ ಕಾರ್ಖಾನೆಗಳು ಬೆಳೆದವು. ಆಚಾರ್ಯ ಪಿ.ಸಿ.ರೇ ತಮ್ಮ ಬೆಂಗಾಲ್ ಕೆಮಿಕಲ್ ಸ್ವದೇಶಿ ಮಳಿಗೆಯನ್ನು ಪ್ರಾರಂಭಿಸಿದರು. ಅದು ಬಹುಬೇಗ ಪ್ರಸಿದ್ಧಿಯನ್ನು ಪಡೆಯಿತು. ಗುರುದೇವ ಠಾಕೂರರೇ ಒಂದು ಸ್ವದೇಶಿ ಮಳಿಗೆಯನ್ನು ಸ್ಥಾಪಿಸಲು ನೆರವಾದರು. ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿಯ ಇಡೀ ಬಂಡವಾಳವನ್ನು ಭಾರತೀಯರೇ ಯಾವುದೇ ಬಗೆಯ ಸರಕಾರ ಹಾಗೂ ವಿದೇಶಿ ನೆರವಿಲ್ಲದೆ ಮೂರೇ ತಿಂಗಳಲ್ಲಿ ತುಂಬಿದರು. ದೊಡ್ಡ ಜಮೀನ್ದಾರರು ಮತ್ತು ವರ್ತಕರು ರಾಜಕೀಯ ನಾಯಕರೊಂದಿಗೆ ಜೊತೆಗೂಡಿ ಬ್ಯಾಂಕುಗಳನ್ನು, ಜೀವವಿಮಾ ಕಂಪೆನಿಗಳನ್ನು ಸ್ಥಾಪಿಸಿದರು.

ಉಗಿ ಹಡಗುಗಳ ಸಂಚಾರದ ವ್ಯವಹಾರಗಳನ್ನು ಆರಂಭಿಸಿದರು. ಸ್ವದೇಶಿ ಚಳವಳಿಯು ಸಂಸ್ಕೃತಿಯ ಕ್ಷೇತ್ರದಲ್ಲಿ ಹೊಸ ಮಾರ್ಗಗಳನ್ನು ಉಂಟುಮಾಡಿತು. ಹೊಸ ಹೊಸ ಮಾದರಿಯ ಗದ್ಯ, ಕಾವ್ಯ ಮತ್ತು ಪತ್ರಿಕೋದ್ಯಮ ಮುಂತಾದವು ಉದಯಿಸಿದವು. ರವೀಂದ್ರನಾಥ ಠಾಕೂರ್, ರಜನೀಕಾಂತ ಸೇನ್, ಮುಕುಂದದಾಸ್ ಮೊದಲಾದ ಕವಿಗಳು ರಚಿಸಿದ ರಾಷ್ಟ್ರ ಭಕ್ತಿಗೀತೆಗಳು ಆ ಸಮಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿದ್ದುವು. ಸ್ವದೇಶಿ ಮತ್ತು ರಾಷ್ಟ್ರೀಯತಾ ಚಳವಳಿಗಳ ಫಲವಾದ ರಾಜಕೀಯ ಪತ್ರಿಕೋದ್ಯಮವು ಸ್ವಾತಂತ್ರ್ಯ, ಸ್ವರಾಜ್ಯ ಮತ್ತು ಆತ್ಮಾವಲಂಬನಗಳ ಕೆಲವು ಶ್ರೇಷ್ಠ ಕೃತಿಗಳನ್ನು ಹುಟ್ಟಿಹಾಕಿತು.[೭]

ಸ್ವದೇಶಿ ಆಚರಣೆಗಳನ್ನು ತಿಲಕರು ಪಶ್ಚಿಮ ಭಾರತಕ್ಕೆ ತಂದರು. ಪೂನಾದಲ್ಲಿ ಒಂದು ಭಾರೀ ಪ್ರಮಾಣದ ವಿದೇಶಿ ವಸ್ತ್ರದಹನ ಕಾಂಡವನ್ನು ಅವರೇ ನಿಂತು ನಡೆಸಿದರು. ಸ್ವದೇಶಿ ವಸ್ತು ಪ್ರಚಾರ ಸಭೆಯ ಮುಖ್ಯರಾಗಿ ಅವರು ಒಂದು ಸಹಕಾರಿ ಮಳಿಗೆಯನ್ನು ಪ್ರಾರಂಭಿಸಿದರು. ಮುಂಬಯಿ ಮಿಲ್ ಮಾಲೀಕರನ್ನು ಕಡಿಮೆ ದರಗಳಲ್ಲಿ ಧೋತಿಗಳನ್ನು ಒದಗಿಸುವಂತೆ ಪ್ರೇರೇಪಿಸಿದರು. ಪೂನಾದಲ್ಲಿ ಒಂದು ಸ್ವದೇಶಿ ನೇಯ್ಗೆ ಕಂಪೆನಿಯು ರೂಪುಗೊಂಡಿತು.

ಪಂಜಾಬಿನಲ್ಲಿ ವಿದೇಶಿ ಸಕ್ಕರೆಯ ಬಳಕೆಯ ವಿರುದ್ಧವಾದ ಒಂದು ದೊಡ್ಡ ಚಳವಳಿಯ ಅಲೆ ಇಡೀ ಪಂಜಾಬನ್ನು ರಭಸದಿಂದ ಕೊಚ್ಚಿಹಾಕಿತು. ವಿದೇಶಿ ಸಕ್ಕರೆಯ ಆಮದು ಸ್ಥಳೀಯ ಸಕ್ಕರೆಯ ಕೈಗಾರಿಕೆಯನ್ನು ಹಾಗೂ ಕಬ್ಬಿನ ಬೆಳೆಯನ್ನು ಕುಂಠಿತಗೊಳಿಸಿತ್ತು. ರಾವಲ್ಪಿಂಡಿಯ ವರ್ತಕರು ವಿದೇಶಿ ಸಕ್ಕರೆಯನ್ನು ಮಾರುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. ಮುಲ್ತಾನಿನ ಬ್ರಾಹ್ಮಣ ಪುರೋಹಿತರು ಅದನ್ನು ಒಳಗೊಂಡ ನೈವೇದ್ಯಗಳನ್ನು ದೇವಾಲಯಗಳಲ್ಲಿ ಬಹಿಷ್ಕರಿಸಿದರು. ಚಳವಳಿ ಹರಿದ್ವಾರ, ದೆಹಲಿ, ಕಾಂಗ್ರಾ ಮತ್ತು ಜಮ್ಮುಗಳಿಗೆ ಹರಡಿತು. ದೆಹಲಿಯಲ್ಲಿ ಸ್ವದೇಶಿ ಚಳವಳಿಯ ಜೀವನಾಡಿ ಆಗಿದ್ದವರು ಸಯ್ಯದ್ ಹೈದರ್ ರೆಜಾ. ಚಿದಂಬರಂ ಪಿಳ್ಳೈ ಮದರಾಸ್ ಪ್ರಾಂತದ ಕೋರಮಂಡಲ ಕರಾವಳಿಯ ಟ್ಯೂಟಿಕಾರಿನ್‌ನಲ್ಲಿ ಸ್ವದೇಶಿ ಸ್ಟೀಮ್ ನ್ಯಾವಿಗೇಷನ್ ಕಂಪೆನಿಯನ್ನು ಪ್ರಾರಂಭಿಸಿದರು.[೮]

ವಿದೇಶಿ ಪದಾರ್ಥಗಳನ್ನು ಸಾರಾಸಗಟು ದೂರೀಕರಿಸಿ ಭಾರತೀಯ ತಯಾರಿಕಾ ವಸ್ತುಗಳನ್ನೇ ಬಳಸಲು ಪ್ರತಿಜ್ಞೆ ಮಾಡಿದರು. ಭಾರತೀಯರಿಗೆ ಅತ್ಯಗತ್ಯವಾದ ಪದಾರ್ಥಗಳು ಯಾವುವು ಎಂಬುದರ ಮೇಲೆ ಇದರ ಯಶಸ್ಸು ಅವಲಂಬಿಸಿತ್ತು. ಐಷಾರಾಮದ ವಸ್ತುಗಳಾಗಿದ್ದ ಪಕ್ಷದಲ್ಲಿ ನಿರಾಕರಿಸುವುದು ಕಷ್ಟವಾಗುತ್ತಿರಲಿಲ್ಲ. ಭಾರತೀಯ ರಾಷ್ಟ್ರಪ್ರೇಮದ ಅತ್ಯುತ್ತಮ ಮಾರ್ಗವೆಂದರೆ ಭಾರತೀಯ ಅಗತ್ಯಗಳಿಗೆ ಭಾರತೀಯವಾದ ವಸ್ತುಗಳನ್ನು ಮಾತ್ರ ಉಪಯೋಗಿಸುವಂಥದ್ದು. ಕಚ್ಚಾವಸ್ತುಗಳ ತವರುಮನೆಯಾಗಿದ್ದ ಭಾರತ ಸಿದ್ಧ ಉತ್ಪನ್ನಗಳ ತವರುಮನೆಯಾಗಿ ಕಾಣಿಸಿಕೊಳ್ಳುವ ತವಕದಲ್ಲಿದ್ದುದ್ದು ನಿಜ. ಇದನ್ನು ನನಸು ಮಾಡಿಕೊಳ್ಳಲು ಕೈಗಾರಿಕಾ ಕಾರ್ಯಗಳಿಗಾಗಿ ಭಾರತೀಯವಾದ ಬಂಡವಾಳವನ್ನು ತೊಡಗಿಸಿ

ವಿದೇಶಿ ಸ್ಪರ್ಧೆಯನ್ನು ತಡಕೊಳ್ಳುವವರಿಗೆ ರಕ್ಷಿಸಬೇಕಾದ ಅಗತ್ಯವಿದ್ದಿತು. ಭಾರತದಲ್ಲಿ ಸ್ವದೇಶಿ ಪದಾರ್ಥಗಳನ್ನು ಉತ್ತೇಜಿಸುವುದೆಂದರೆ ಖಾಸಗಿ ಬಂಡವಾಳ ಹಾಗೂ ಲೋಕ ಪ್ರೀತಿಯ ಜೊತೆಗೆ ಸರ್ಕಾರದ ರಕ್ಷಣಾತ್ಮಕ ನೀತಿಯ ಸಂಯೋಗವಾಗಬೇಕಾಗಿತ್ತು.

ಸ್ವದೇಶಿ ಚಳವಳಿ ೧೯೦೫ರಲ್ಲಿ ಸ್ಪಷ್ಟವಾಗಿ ಗೊತ್ತಾಯಿತಾದರು ಇದಕ್ಕೂ ಮುಂಚಿನ ದಶಕಗಳಲ್ಲಿಯೇ ಇದಕ್ಕೆ ಪೂರ್ವಸಿದ್ಧತೆ ಆಗಿದ್ದನ್ನು ಕಾಣಬಹುದು. ೧೮೪೯ರಷ್ಟು ಹಿಂದೆಯೇ ಪೂನಾದ ಗೋಪಾಲ್‌ರಾವ್ ದೇಶಮುಖ್ ಎಂಬುವವರು ಸ್ವದೇಶಿ ವಸ್ತುಗಳನ್ನು ಉಪಯೋಗಿಸಬೇಕೆಂದು ಪ್ರಚಾರ ಮಾಡಿದರು. ಆನಂತರ ೧೮೭೦ರ ದಶಕದಲ್ಲಿ ಸ್ವದೇಶಿ ಹೆಚ್ಚು ಜನಪ್ರಿಯವಾಯಿತು. ಬೆಂಗಳೂರಿನಲ್ಲಿ ೧೮೭೪ರಲ್ಲಿ ಭಾರತದಲ್ಲಿಯೇ ತಯಾರಾದ ಹತ್ತಿ ಬಟ್ಟೆಗಳನ್ನು ವ್ಯಾಪಾರ ಮಾಡಲೆಂದೇ ಒಂದು ಕಂಪನಿ ತೆರೆಯಲಾಯಿತು. ಆನಂತರ ಮ್ಯಾಂಚೆಸ್ಟರ್‌ನ ಪದಾರ್ಥಗಳನ್ನು ಮಾರುವುದಿಲ್ಲ ಎಂದು ಈ ಕಂಪನಿ ತೀರ್ಮಾನಿಸಿತು. ಹತ್ತಿ ಬಟ್ಟೆಗಳ ಮೇಲಿನ ಸುಂಕದ ವಿರುದ್ಧ ಜನರ ಪ್ರತಿಭಟನೆ ಸ್ವಲ್ಪ ಕಡಿಮೆಯಾದಾಗ ಸ್ವದೇಶಿ ವಸ್ತುಗಳಿಗಾಗಿಯೂ ಚಳವಳಿ ಸ್ವಲ್ಪ ಕಡಿಮೆಯಾಯಿತು. ಆದರೆ ಸಂಪೂರ್ಣವಾಗಿ ನಿಂತು ಹೋಗಲಿಲ್ಲ. ಭಾರತೀಯ ದೇಶೀಯ ಕೈಗಾರಿಕೆ ಕುಂಠಿತವಾದದ್ದರ ವಿರುದ್ಧದ ಪ್ರತಿಭಟನೆಯ ದ್ಯೋತಕವಾಗಿ ಸ್ವದೇಶಿ ಚಳವಳಿ ಪ್ರಾರಂಭವಾಯಿತು ಎನ್ನಬಹುದು. ಹೊಸ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಅವನತಿ ಹೊಂದುತ್ತಿರುವ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸುವ ಮಾರ್ಗದಲ್ಲಿ ಈ ಚಳವಳಿ ಒಂದು ಪ್ರತಿಟನೆಯ ರೂಪದಲ್ಲಿ ಆರಂಭವಾಯಿತು. ಮೇಲ್ವರ್ಗ ಹಾಗೂ ಮಧ್ಯಮ ವರ್ಗದ ಮಂದಿ ತಮ್ಮ ಎಂದಿನ ವಿದೇಶಿ ವಸ್ತುಗಳ ಆಕರ್ಷಣೆಗೆ ಒಳಗಾಗುವುದನ್ನು ಸ್ವಲ್ಪ ಮರೆತು ಅಷ್ಟೇನೂ ಉತ್ತಮವಲ್ಲದ ಭಾರತೀಯ ವಸ್ತುಗಳನ್ನು ಉಪಯೋಗಿಸುವದಕ್ಕೆ ಸಿದ್ಧವಾಗಬೇಕಾಯಿತು. ಹಾಗಾಗಿ ವಿದೇಶಿ ವಸ್ತು ನಿಷೇಧ ಹಾಗೂ ಸ್ವದೇಶಿ ಒಂದೇ ನಾಣ್ಯದ ಎರಡು ಮುಖಗಳಾಗಿ ಗೋಚರವಾಗುತ್ತವೆ. ಸ್ವದೇಶಿಯ ವಸ್ತುಗಳನ್ನು ಬಳಸುವುದರಿಂದ ದೇಶದ ಆರ್ಥಿಕ ಮಟ್ಟ ಹೆಚ್ಚುತ್ತದೆ ಎಂಬ ಭಾವನೆ ಮೂಡಿತು. ಸ್ವದೇಶಿ ಚಳವಳಿಯು ಒಂದೇ ಕ್ರಿಯೆಯ ಧನಾತ್ಮಕ ಮುಖವಾದರೆ ವಿದೇಶಿ ವಸ್ತುಗಳು ನಿಷೇಧ ಋಣಾತ್ಮಕ ಮುಖವಾಗಿ ಕಂಡಿತು.[೯]

ನಮ್ಮ ದೇಶವು ಒಂದು ಮರದಂತಿದೆ ಎಂದು ತಿಲಕರು ಕೇಸರಿಯಲ್ಲಿ ಬರೆದರು. ಅದರ ಕಾಂಡ ಸ್ವರಾಜ್ಯ, ಕೊಂಬೆಗಳು ಸ್ವದೇಶಿ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ. ವಾಸ್ತವವಾಗಿ ಸ್ವದೇಶಿಯು ಸ್ವರಾಜ್ಯಕ್ಕೆ ಮಾರ್ಗ. ಆದ್ದರಿಂದ ವಿಭಜನ ವಿರೋಧಿ ಸ್ವರೂಪದ ಚಳವಳಿಯನ್ನು ಎಲ್ಲ ಬಗೆಯ ವಿದೇಶಿ ಆಡಳಿತದ ವಿರುದ್ಧವಾದ ನಿಷ್ಕ್ರಿಯ ಪ್ರತಿಭಟನೆಯಾಗಿ ವಿಸ್ತರಿಸಬೇಕಾಗಿತ್ತು. ಅದರ ಅರ್ಥ ಬ್ರಿಟಿಷ್ ವಸ್ತುಗಳು ಮತ್ತು ಶಾಲೆಗಳ ಬಹಿಷ್ಕಾರ ಅಷ್ಟೇ ಅಲ್ಲದೆ ನ್ಯಾಯಾಲಯಗಳು, ಪುರಸಭೆಗಳು, ಶಾಸನಸಭೆಗಳು ಮುಂತಾದ ಸರಕಾರದೊಂದಿಗೆ ಎಲ್ಲ ಸಂಬಂಧಗಳನ್ನು ಬಹಿಷ್ಕರಿಸುವುದಾಗಿತ್ತು. ಬ್ರಿಟಿಷ್ ಘನತೆಯ ಬುಡಕ್ಕೇ ಪೆಟ್ಟುಕೊಟ್ಟು ಅದರ ಪ್ರಭಾವವನ್ನು ತೊಲಗಿಸಬೇಕಾಗಿತ್ತು. ಬ್ರಿಟಿಷ್ ವಾಣಿಜ್ಯವು ಸುಲಿಗೆ ಮಾಡುವುದನ್ನು, ಬ್ರಿಟಿಷ್ ಅಧಿಕಾರಶಾಹಿಯು ಭಾರತದ ಜನರನ್ನು ತುಳಿಯುವುದನ್ನು

ಒಂದು ಯೋಜಿತ ರೀತಿಯಲ್ಲಿ ನಿರಾಕರಿಸುವುದರ ಮೂಲಕ ಆಡಳಿತವನ್ನು ಅಸಾಧ್ಯವಾಗುವಂತೆ ಮಾಡಬೇಕಿತ್ತು.

ತೀವ್ರವಾದಿಗಳು ಬಹಿರಂಗ ಹೋರಾಟಕ್ಕೆ ಕಾಂಗ್ರೆಸನ್ನು ಮನವೊಲಿಸುವುದಕ್ಕಿಂತಲೂ ಮುಂಚಿತವಾಗಿ ರೈತರನ್ನು, ಕಾರ್ಮಿಕರನ್ನು ಚಳವಳಿಗೆ ತೆಗೆದುಕೊಳ್ಳಬೇಕಾಗಿತ್ತು. ಸ್ವದೇಶಿ ಸಂದೇಶವು ಜನಸಾಮಾನ್ಯರನ್ನು ಮುಟ್ಟತೊಡಗಿತು. ತಮ್ಮ ಯೋಗಕ್ಷೇಮ ಮತ್ತು ಅಭ್ಯುದಯಗಳಿಗೆ ನೇರವಾಗಿ ಸಂಬಂಧಪಟ್ಟದ್ದುದರಿಂದ ಅದು ಅವರಿಗೆ ಅರ್ಥಪೂರ್ಣವಾಗಿ ಕಂಡಿತು. ರೈತರ ಮತ್ತು ಕಾರ್ಮಿಕರ ಪಾತ್ರ ಇಲ್ಲಿ ಬಹಳ ಮಹತ್ವಪೂರ್ಣವಾಗಿತ್ತು. ಬಿಹಾರದ ಚಂಪಾರಣ್ಯದಲ್ಲಿ ನೀಲಿ ಬೆಳೆಯುವ ರೈತರು ದಂಗೆಯೆದ್ದರು. ಅಸ್ಸಾಂ ಮತ್ತು ಮೈಮೆನ್‌ಸಿಂಗ್‌ಗಳಲ್ಲಿ ಕ್ಷೋಭೆಗಳುಂಟಾದವು. ಬಾರಿಸಾಲ್‌ನಲ್ಲಿ ಮುಸ್ಲಿಂ ರೈತರಿಗೆ ಅವರ ಮುಷ್ಕರಗಳಲ್ಲಿ ಅಶ್ವಿನೀಕುಮಾರದತ್ತ ನಾಯಕರಾಗಿದ್ದರು. ಬಂಗಾಳದಲ್ಲಿ ಮುಷ್ಕರಗಳ ಭಾರೀ ಅಲೆ ಎದ್ದು ಪೂರ್ವ ಭಾರತ ರೈಲ್ವೆ, ಕ್ಲೈವ್ ಸೆಣಬು ಕಾರ್ಖಾನೆ ಮತ್ತು ಕಬ್ಬಿಣದ ಕಾರ್ಖಾನೆಗಳನ್ನು ಆವರಿಸಿತು. ತಿಲಕರು ಮುಂಬಯಿ ಕಾರ್ಮಿಕರಿಗೆ ಒಂದು ಮನವಿ ಮಾಡಿಕೊಂಡರು. ಇದರ ಫಲವಾಗಿ ಇವರ ಬಂಧನವಾದೊಡನೆ ಭಾರೀ ಮುಷ್ಕರ ನಡೆಯಿತು. ಟ್ಯುಟಕಾರಿನ್ ಕೋರಲ್‌ಮಿಲ್ ಮುಷ್ಕರವನ್ನು ಚಿದಂಬರಂ ಪಿಳ್ಳೈ ವ್ಯವಸ್ಥೆಗೊಳಿಸಿದರು. ಆಗ ಹೋರಾಟದ ಬಹುಭಾಗದ ಭಾರವು ಯುವಜನಾಗಂದ ಮೇಲೆ ಬಿದ್ದಿತ್ತು. ಸಂಧ್ಯಾ, ಜುಗಾಂತರ್, ಕೇಸರಿ ಮತ್ತು ಪಂಜಾಬಿ ಮುಂತಾದ ತೀವ್ರಗಾಮಿಗಳ ಪತ್ರಿಕೆಗಳಿಂದ ಪ್ರಭಾವಿತರಾಗಿ ಅವರು ಹೋರಾಟಕ್ಕಿಳಿದರು. ವಿದ್ಯಾರ್ಥಿಗಳು, ಗುಮಾಸ್ತರು, ಉಪಾಧ್ಯಾಯ ವರ್ಗದವರು ಇವರೆಲ್ಲರನ್ನು ಒಳಪಡಿಸಿಕೊಂಡುದರಲ್ಲಿ ಒಂದು ಬಗೆಯ ಹುಚ್ಚು ಸಾಹಸ ಕಂಡುಬರುತ್ತಿತ್ತು. ಹಳದಿಪೇಟ, ಕೆಂಪು ಅಂಗಿಗಳನ್ನು ಧರಿಸಿ ಅವರು ಸರಕಾರಿ ಶಾಲಾ ಕಾಲೇಜುಗಳಿಂದ, ಕಚೇರಿಗಳಿಂದ ಸಹಸ್ರಾರ ಸಂಖ್ಯೆಯಲ್ಲಿ ಹೊರ ನಡೆದರು. 'ವಂದೇಮಾತರಂ' ಘೋಷಣೆ ಮಾಡಿದರು. ರಾಷ್ಟ್ರೀಯ ಗೀತೆಗಳನ್ನು ಹಾಡುತ್ತ ನಡೆದರು. ಅಂಗಡಿಗಳಲ್ಲಿ ಪಿಕೆಟಿಂಗ್ ನಡೆಸಿದರು. ಸ್ವದೇಶಿ ವಸ್ತುಗಳನ್ನು ಮಾರುತ್ತ ನಡೆದರು. ಯಾವ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಚಳವಳಿಯಲ್ಲಿ ಕ್ರಿಯಾತ್ಮಕ ಪಾತ್ರ ವಹಿಸಿದರೋ ಆ ಶಾಲಾ ಕಾಲೇಜುಗಳಿಗೆ ಸರಕಾರೀ ನೆರವು ನಿಂತಿತು. ವಿಶ್ವವಿದ್ಯಾನಿಲಯದ ಮಂಜೂರಾತಿ ತಪ್ಪಿತು. ಅಲ್ಲಿಯ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಅನರ್ಹರಾದರು. ಸರಕಾರಿ ಕೆಲಸಕ್ಕೆ ಅವರು ಯೋಗ್ಯರಲ್ಲವೆನಿಸಿದರು. ಪೂರ್ವ ಬಂಗಾಳ ಮತ್ತು ಅಸ್ಸಾಂಗಳಲ್ಲಿ ಭೀತಿಯ ಅಲೆ ಭುಗಿಲೆದ್ದಿತು. ಹುಡುಗರಿಗೆ ಜುಲ್ಮಾನೆ ಹಾಕಿದರು, ಹೊರಗೆ ಹಾಕಿದರು, ಅತಿ ಕ್ರೂರವಾಗಿ ಹೊಡೆದರು. ೧೪ ವರ್ಷದ ಒಬ್ಬ ಹುಡುಗನನ್ನು ಬೆತ್ತದ ಚಡಿಯಿಂದ ಕ್ರೂರವಾಗಿ ಹೊಡೆಯಬೇಕೆಂದು ಆಂಗ್ಲ ನ್ಯಾಯಾಧೀಶ ಕಿಂಗ್ಸ್‌ಫರ್ಡ್ ಆಜ್ಞೆಮಾಡಿದನು. ಅಮರಾವತಿ, ಕೊಲ್ಲಾಪುರಗಳಂತಹ ದೂರದಲ್ಲಿನ ವಿದ್ಯಾರ್ಥಿಗಳಿಗೆ ಇದೇ ಅದೃಷ್ಟ ಬಂದಿತು. ದಬ್ಬಾಳಿಕೆ ಕ್ರೋಧಕ್ಕೆ ಎಡೆಮಾಡಿತು. ಕ್ರೋಧವು ಮತ್ತೆ ಹೆಚ್ಚು ಹೆಚ್ಚಾಗಿ ವಿನಾಶಕಾರಕ ಕೃತ್ಯಗಳಲ್ಲಿ ತೊಡಗುವಂತೆ ಮಾಡಿತು.[೧೦]

ಮೊತ್ತ ಮೊದಲ ಬಾರಿಗೆ ಮುಸ್ಲಿಂ ಮಹಿಳೆಯರು ಪರದೆ ಬಿಟ್ಟು ಬಂದು ಮೆರವಣಿಗೆ, ಪಿಕೆಟಿಂಗ್‌ಗಳಲ್ಲಿ ಪಾಲ್ಗೊಂಡರು. ಬಹಿಷ್ಕಾರವನ್ನು ಸೂಚಿಸಿದ ಮೊದಲಿಗರಲ್ಲಿ ಒಬ್ಬರು ಪಾಟ್ನಾದ ಲಿಯಾಖತ್ ಹುಸೇನ್. ಈಸ್ಟ್ ಇಂಡಿಯನ್ ರೈಲ್ವೆ ಮುಷ್ಕರವನ್ನು ವ್ಯವಸ್ಥೆಗೊಳಿಸಿದವರಲ್ಲಿ ಅವರು ಒಬ್ಬರು.

ಸರಕಾರದ ದಮನಕಾರಿ ವಿಧಾನಗಳು ಅದರಲ್ಲೂ ವಿಶೇಷವಾಗಿ ಬಾರಿಸಾಲ್ ಸಮ್ಮೇಳನದ ಪ್ರತಿನಿಧಿಗಳ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರ - ಇವು ಹೋರಾಟವನ್ನು ಮುಂದುವರಿಸಬೇಕೆಂದು ತೀವ್ರಗಾಮಿಗಳ ನಿರ್ಧಾರವನ್ನು ಬಲಪಡಿಸಿದವು. ಕಲ್ಕತ್ತ ಕಾಂಗ್ರೆಸಿನಲ್ಲಿ ದಾದಾಬಾಯಿ ನವರೋಜಿ ಅವರು ಸ್ವಯಮಾಡಳಿತ ಅಥವಾ ಯುನೈಟೆಡ್ ಕಿಂಗ್‌ಡಮ್ ಅಥವಾ ವಸಾಹತುಗಳಲ್ಲಿರುವಂತಹ ಸ್ವರಾಜ್ಯವೇ ಕಾಂಗ್ರೆಸ್ಸಿನ ಗುರಿ ಎಂಬುದಾಗಿ ತೀವ್ರಗಾಮಿಗಳ ಭಾವನೆಯನ್ನು ಘೋಷಣೆ ಮಾಡಿದರು.[೧೮]

೧೯೦೬ರ ಕಾಂಗ್ರೆಸ್ಸಿನ ಕಲ್ಕತ್ತ ಅಧಿವೇಶನವು ಸ್ವರಾಜ್ಯವೇ ತನ್ನ ಮೂಲ ಗುರಿ ಎಂದು ಘೋಷಿಸಿದಾಗ ಸ್ವದೇಶಿ ವಿದೇಶಿ ವಸ್ತು ಬಹಿಷ್ಕಾರ ಹಾಗೂ ರಾಷ್ಟ್ರೀಯ ಶಿಕ್ಷಣ ಇವುಗಳು ಈ ಗುರಿಯನ್ನು ತಲುಪುವ ಸಾಧನಗಳೆಂದು ತಿಳಿಸಿತು. ಆ ಸಂದರ್ಭದಲ್ಲಿ ಕರ್ನಾಟಕ ಸಂಪೂರ್ಣವಾಗಿ ಆ ಚಳವಳಿಯಲ್ಲಿ ಭಾಗವಹಿಸಿ ಈ ಎಲ್ಲ ಸಾಧನಗಳನ್ನು ಧಾರಾಳವಾಗಿ ಬಳಸಿತು. ೧೯೦೬ರಲ್ಲಿ ತಿಲಕರು ಬೆಳಗಾವಿಗೆ ಭೇಟಿ ಇತ್ತು ಸ್ವರಾಜ್ಯದ ಬಗ್ಗೆ ಭಾಷಣ ಮಾಡಿದರು. ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು. ತಿಲಕರ ಸಂದೇಶವೆಂದರೆ ಸ್ವರಾಜ್ಯ ಹಾಗೂ ಸ್ವದೇಶಿ ಚಳವಳಿ ಮಾತ್ರ ಪರಕೀಯರ ಆಳ್ವಿಕೆಯಿಂದ ದೇಶವನ್ನು ರಕ್ಷಿಸಬಹುದು ಎಂಬುದಾಗಿತ್ತು. ತಿಲಕರ ಭಾಷಣಗಳ ಪರಿಣಾಮವಾಗಿ ವಿದೇಶಿ ವಸ್ತುಗಳನ್ನು ಬೆಂಕಿಯಲ್ಲಿ ಸುಡುವ ಕಾರ್ಯಕ್ರಮ ನಡೆಯಿತು. ರಾಣಿಬೆನ್ನೂರಿನಲ್ಲಿ ವಿದೇಶಿ ವಸ್ತುಗಳನ್ನು ಸುಟ್ಟರು. ಧಾಬೋಟಿ ಹಾಗೂ ಜಾನ್‌ಸನ್ ಸಕ್ಕರೆಯನ್ನು ಉಪಯೋಗಿಸುವುದಿಲ್ಲವೆಂದು ಧಾರವಾಡದಲ್ಲಿ ಜನರು ಪ್ರತಿಜ್ಞೆ ಮಾಡಿದರು. ಗಂಗಾಧರರಾವ್ ದೇಶಪಾಂಡೆಯವರೂ ಸಹ ಕಾಂಗ್ರೆಸ್ ಸೇರಿ ಜನರು ತಮ್ಮ ವಿದೇಶಿ ಉಡುಪುಗಳನ್ನು ಬೆಂಕಿಗೆ ಎಸೆಯಬೇಕೆಂದು ಹುರಿದುಂಬಿಸಿದರು. ಧಾರವಾಡದ ಆರ್.ಎಸ್ ಹುಕ್ಕೇರಿಕರ್ ಅಂಥವರು ತಾವು ತೊಟ್ಟಿದ್ದ ಬಟ್ಟೆ ವಿದೇಶಿ ಬಟ್ಟೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸದೆಯೇ ಕಳಚಿ ಬೆಂಕಿಗೆ ಎಸೆದಿದ್ದರು. ವಿದೇಶಿ ಬಟ್ಟೆಗಳು ಹಾಗೂ ಇತರೆ ವಸ್ತುಗಳನ್ನು ತಿರಸ್ಕರಿಸಬೇಕೆಂಬ ತೀರ್ಮಾನದಲ್ಲಿ ವಿದೇಶಿ ಔಷಧಗಳೂ ತ್ಯಾಜ್ಯವಾದದ್ದು ಮುಖ್ಯ ಸಂಗತಿ. ಸ್ವದೇಶಿ ಚಳವಳಿಯನ್ನು ಸಂಪೂರ್ಣವಾಗಿ ನಡೆಸಿದ ಉದಾಹರಣೆಗಳು ಅನೇಕ ನಡೆದವು.

ಕರ್ನಾಟಕದಲ್ಲಿ ತಿಲಕರು ಹಾಗೂ ಸ್ವದೇಶಿ ಚಳವಳಿಗಳಿಂದ ಪ್ರಭಾವಿತರಾದ ನಾಯಕರಲ್ಲಿ ಪ್ರಮುಖರಾದವರು ಆಲೂರು ವೆಂಕಟರಾಯರು. ತಿಲಕ್ ಹಾಗೂ ಗೋಖಲೆಯವರಿಂದ ಅವರು ನೇರವಾಗಿ ಕಲಿತಿದ್ದರು. ಬ್ರಿಟಿಷರನ್ನು ವಿರೋಧಿಸಿ ತಿಲಕರು ಮಾತನಾಡುವಾಗ ಆಲೂರರಿಗೆ ಸ್ಫೂರ್ತಿ

ದೊರೆಯಿತು. ೧೯೦೫ರ ಸುಮಾರಿನಲ್ಲಿ ಬಂಗಾಳದ ವಿಭಜನೆಯ ಸಂದರ್ಭದಲ್ಲಿ ಆಲೂರು ವೆಂಕಟರಾಯರು ತಮ್ಮ ವಕೀಲ ವೃತ್ತಿಗೆ ಧಾರವಾಡದಲ್ಲಿ ವಿದಾಯ ಹೇಳಿ ಸಂಪೂರ್ಣವಾಗಿ ವಿದೇಶಿ ವಸ್ತು ನಿರಾಕರಣ ಚಳವಳಿಯಲ್ಲಿ ತೊಡಗಿದರು. ಸೀಮೆಎಣ್ಣೆ, ಸಕ್ಕರೆ, ಟೀ, ಕಾಫಿಯಿಂದ ಹಿಡಿದು ಬೆಂಕಿಕಡ್ಡಿಯವರೆಗೆ ಎಲ್ಲಾ ವಸ್ತುಗಳನ್ನು ಸಹ ಅವು ವಿದೇಶಿಯರಿಂದ ಪ್ರಾರಂಭಿಸುವ ಚಿನ್ಹೆಯಾಗಿ ಆಲೂರು ವೆಂಕಟರಾಯರು ಧಾರವಾಡದಲ್ಲಿ ಕನ್ನಡ ರಾಷ್ಟ್ರೀಯ ಶಾಲೆಯನ್ನು ತೆರೆದರು. ಸ್ವದೇಶಿ ಚಳವಳಿಯನ್ನು ಆಲೂರು ವೆಂಕಟರಾಯರು ಸ್ವಾವಲಂಬನೆಯ ಅಭಿವ್ಯಕ್ತಿಯಾಗಿ ಮನಗಂಡಿದ್ದರು. ಹಾಗಾಗಿ ಇದು ಸಾಧ್ಯವಾಗಬೇಕಾದರೆ ದೇಶಿಯವಾದ ಕೈಗಾರಿಕೀಕರಣದಿಂದ ಮಾತ್ರ ಸಾಧ್ಯವೆಂದು ಕೂಡ ಅವರಿಗೆ ಅನ್ನಿಸಿತ್ತು. ತಮ್ಮ ಹುಟ್ಟೂರಾದ ಆಲೂರಿನಲ್ಲಿಯೇ ನೂಲು ತಯಾರಿಕಾ ಘಟಕವೊಂದನ್ನು ವೆಂಕಟರಾಯರು ಸ್ಥಾಪಿಸಿದರು.

೧೯೦೮ರ ವೇಳೆಗೆ ಕೈಗಾರಿಕಾ ಹಿಂದುಳಿದಿರುವಿಕೆಯ ಕಾರಣಗಳನ್ನು ತಿಳಿದು ಪರಿಹಾರ ಕಂಡುಕೊಳ್ಳಲು ತಕ್ಕ ಸಮಯವಿದೆಂಬ ಅರಿವು ಬ್ರಿಟಿಷ್ ಸರ್ಕಾರಕ್ಕೆ ಬಂದಿತ್ತು. ನಿಜವಾದ ರಾಷ್ಟ್ರಪ್ರೇಮಿಯು ಪ್ರಗತಿ ಹಾಗೂ ಶಾಂತಿಗಾಗಿ ದುಡಿಯಬೇಕಾಗಿದೆಯಲ್ಲದೆ ವರ್ಗದ್ವೇಷ, ಕಾನೂನು ಉಲ್ಲಂಘನೆ ಹಾಗೂ ವಿಚ್ಛೇದ್ರಕಾರಿ ನೀತಿಯನ್ನು ಹರಡುವಂಥ ಮಾರ್ಗ ಪೊಳ್ಳು ಸ್ವದೇಶಿ ಮಾರ್ಗವೆಂದು ೧೯೦೮ರಲ್ಲಿ ಮದರಾಸಿನ ಗೌರ್‍ನರ್ ಕರೆಕೊಟ್ಟರು.

ಕರ್ನಾಟಕದಲ್ಲಿ ಸ್ವದೇಶಿ ಚಳವಳಿಯಲ್ಲಿ ದುಡಿಯುತ್ತಿದ್ದ ಇನ್ನೊಬ್ಬ ಧೀಮಂತ ವ್ಯಕ್ತಿಯೆಂದರೆ ಡಾ.ಎನ್.ಎಸ್. ಹರ್ಡೀಕರ್. ಮರಾಠಿ ಭಾಷೆ ಚೆನ್ನಾಗಿ ತಿಳಿದಿದ್ದ, 'ಕೇಸರಿ' ಪತ್ರಿಕೆಯನ್ನು ತಪ್ಪದೇ ಓದುತ್ತಿದ್ದ ಅವರು ತಿಲಕರಿಂದ ಬಹಳವಾಗಿ ಪ್ರಭಾವಿತರಾಗಿದ್ದರು. ಈ ಪತ್ರಿಕೆಯ ಮೂಲಕ ಸ್ವದೇಶಿ ಮಹತ್ವವನ್ನು ಅರಿತವರಾಗಿ ಪರಕೀಯರ ಆಳ್ವಿಕೆಯಿಂದ ಭಾರತವನ್ನು ಬಿಡುಗಡೆ ಮಾಡಲು ದುಡಿಮೆಗೆ ಸನ್ನದ್ಧರಾದದ್ದು ಸಹಜವೆ. ಸ್ವದೇಶಿ ಚಳವಳಿಯ ಇನ್ನೊಬ್ಬ ನೇತಾರರು ಕಾರ್ನಾಡ್ ಸದಾಶಿವರಾಯರು. ಇವರು ತಮ್ಮ ಸ್ವಂತ ಮನೆಯಲ್ಲೇ 'ತಿಲಕ ವಿದ್ಯಾಶಾಲ' ಎಂಬ ಹೆಸರಿನ ಒಂದು ರಾಷ್ಟ್ರೀಯ ಶಾಲೆಯನ್ನು ತೆರೆದು ಮಕ್ಕಳಿಗೆ ಸಾಂಪ್ರದಾಯಿಕವಾದ ಮಾದರಿಯ ಶಿಕ್ಷಣದ ಜೊತೆಗೆ ಹಿಂದಿಯನ್ನು ಕಲಿಸಿದರು. ನೂಲುವುದು, ನೇಯುವುದು ಹಾಗೂ ಕುಶಲ ಕಲೆಯನ್ನು ಕಲಿಸಿದರು. ತಿಲಕರ ಪ್ರಭಾವದಲ್ಲಿ ದೇಶದ ಬೇರೆ ಬೇರೆ ಬಾಗಗಳಲ್ಲಿ ಸ್ವದೇಶಿ ಕಾರ್ಖಾನೆಗಳು ಸ್ಥಾಪನೆಯಾದವು. ಸಹಜವಾಗೇ ಕರ್ನಾಟಕದಲ್ಲಿ ಕೆಲವು ಸ್ಥಾಪನೆಗೊಂಡವು. ಗದಗ್, ಹುಬ್ಬಳ್ಳಿ, ಬಳ್ಳಾರಿ ಇದೇ ರೀತಿಯಾಗಿ ದಾವಣಗೆರೆಯಲ್ಲಿ ಸಹ ತಲೆಯೆತ್ತಿದ ಕಾರ್ಖಾನೆಗಳು ಸ್ವದೇಶಿ ಚಳವಳಿಯ ಶಿಶುಗಳು ಎನ್ನಬೇಕು. ಕೈಮಗ್ಗಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿತು. ಕೈಮಗ್ಗದ ಪದಾರ್ಥಗಳನ್ನು ಮಾರಲು ಬೇರೆ ಬೇರೆ ಅಂಗಡಿಗಳನ್ನು ತೆರೆಯಲಾಯಿತು. ಇದರಿಂದಾಗಿ ವಿದೇಶಿ ವಸ್ತುಗಳ ಆಮದಿನಲ್ಲಿ ಇದ್ದಕ್ಕಿದ್ದಂತೆ ಕಡಿಮೆಯಾಯಿತು.

ಕರ್ನಾಟಕದ ಜನರ ಮನಸ್ಸಿನ ಮೇಲೆ ಈ ಬಗೆಯ ಪ್ರಯತ್ನಗಳಿಂದ ಸ್ವದೇಶಿ ಚಳವಳಿಯು ನೆಲೆಯೂರಲು ಸಹಾಯಕವಾಗಿತ್ತಾದರೂ ಚಳವಳಿಗೆ ಪೂರ್ಣ ಪ್ರಮಾಣದ ಯಶಸ್ಸು ಬಂದಿರಲಿಲ್ಲ. ಮಹಾತ್ಮಗಾಂಧೀಜಿಯವರು ಭಾರತೀಯ ರಾಜಕೀಯ ವಲಯದಲ್ಲಿ ಕಾಣಿಸಿಕೊಂಡಾಗ ಪರಿಸ್ಥಿತಿ ಬದಲಾವಣೆ ಕಂಡಿತು. ಮಹಾತ್ಮಗಾಂಧೀಜಿಯವರು ಭಾರತವನ್ನು ಸ್ವಲ್ಪ ಸ್ವಲ್ಪವಾಗಿ ಸ್ವಾತಂತ್ರ್ಯದ ಕಡೆಗೆ ತೆಗೆದುಕೊಂಡು ಹೋದರು. ಸ್ವದೇಶಿ ಬಗ್ಗೆ ಪ್ರೇಮ ಹಾಗೂ ರಾಷ್ಟ್ರಪ್ರೇಮದ ಮಹತ್ವವನ್ನು ಗಾಂಧೀಜಿಯವರು ಜನರಿಗೆ ತಿಳಿಸಿದರು. ವಿದೇಶಿಯರ ಆಳ್ವಿಕೆಯಲ್ಲಿ ಏನು ಗೊತ್ತಿಲ್ಲದಂತೆ ಇರುವುದನ್ನು ಖಂಡಿಸಿದರು. ಬ್ರಿಟಿಷ್ ಪದಾರ್ಥಗಳನ್ನು ಸಾರಾಸಗಟಾಗಿ ನಿರಾಕರಿಸುವುದು ಹೆಡ್ಡತನವೆಂದೂ, ಗ್ರಂಥಗಳು ಬ್ರಿಟಿಷರವೆಂದು ತ್ಯಜಿಸುವುದು ವಿವೇಕದ ಲಕ್ಷಣವಲ್ಲವೆಂದೂ ಗಾಂಧೀಜಿ ತಿಳಿಸಿದರು. ವಿದೇಶಿ ವಸ್ತುಗಳನ್ನು ನಿರಾಕರಿಸುವ ನಕಾರಾತ್ಮಕ ಮಾರ್ಗದಿಂದಷ್ಟೇ ಗಾಂಧೀಜಿ ತೃಪ್ತರಾಗಿರಲಿಲ್ಲ. ಭಾರತೀಯ ಗುಡಿ ಕೈಗಾರಿಕೆಯನ್ನು ನಿರ್ಮಾಣ ಮಾಡುವಂತ ಸಕಾರಾತ್ಮಕವಾದ ಮಾರ್ಗದ ಬಗ್ಗೆ ಅವರು ಹೆಚ್ಚು ಉತ್ಸಾಹಿಗಳಾಗಿದ್ದರು. ಹಾಗಾಗಿ ವಿದೇಶಿ ವಸ್ತು ನಿರಾಕರಣೆ ಎಂಬುದು ಚರಕದಿಂದ ನೂಲುವುದು ಹಾಗೂ ಗುಡಿ ಕೈಗಾರಿಕೆಯ ಪುನಃಶ್ಚೇತನವೆಂಬ ಅರ್ಥವನ್ನು ಪಡೆದುಕೊಂಡಿತು.[೧೨]

ಅಖಿಲ ಭಾರತ ಮಟ್ಟದ ವಸಾಹತು ವಿರೋಧಿ ರಾಷ್ಟ್ರೀಯ ಚಟುವಟಿಕೆಯು ದಕ್ಷಿಣ ಭಾರತದ ಮೇಲೆ ಏನೂ ಪರಿಣಾಮವುಂಟು ಮಾಡಲಿಲ್ಲವೆಂದು ಹೇಳಲಾಗುವುದಿಲ್ಲ. ಸಂಪತ್ತಿನ ಸೂರೆಯ ಪರಿಣಾಮ ಇದ್ದೇ ಇತ್ತು. ಜಿ. ಸುಬ್ರಮಣ್ಯ ಅಯ್ಯರ್ ಈ ತತ್ವದ ಪ್ರಮುಖ ಪ್ರತಿಪಾದಕರಾಗಿದ್ದರು. ಈ ವಿಷಯದಲ್ಲಿ ದೇಶೀಯ ಸಂಸ್ಥಾನಗಳ ರಾಷ್ಟ್ರೀಯವಾದಿಗಳು ಹಿಂದೆ ಬೀಳಲಿಲ್ಲ. ಅದೇ ಪ್ರಕಾರವಾಗಿ ಸ್ವದೇಶಿ ಚಳವಳಿಯನ್ನು ಸಹ ಪ್ರತಿಪಾದಿಸಲಾಯಿತು. ಆದರೆ ಸಾಮಾನ್ಯವಾಗಿ ಆ ಚಟವಟಿಕೆ ಅಷ್ಟು ಚುರುಕಾಗಿರಲಿಲ್ಲ. ಬಂಗಾಳ ಹಾಗೂ ಬೊಂಬಾಯಿ ಪ್ರಾಂತ್ಯಗಳ ಉಗ್ರವಾದಿಗಳು ಸ್ವದೇಶಿ ಹಾಗೂ ವಿದೇಶಿ ವಸ್ತ್ರ ಬಹಿಷ್ಕಾರ ಚಳವಳಿಗಳನ್ನು ಸಂಘಟಿಸುವಾಗ ಬಹುತೇಕ ದಕ್ಷಿಣದ ಕಾಂಗ್ರೆಸ್ಸಿಗರು ಈ ಚಳವಳಿಗಳಿಗೆ ವಿಮುಖರಾಗಿ ಉಳಿದರು. ಚಳವಳಿಗೆ ಜನಸ್ತೋಮವನ್ನು ಪ್ರಚೋದಿಸಿ ತರಬೇಕೆಂದು ತಿಲಕರು ಶ್ರಮಪಡುತ್ತಿದ್ದರು. ಸ್ವದೇಶಿ ಚಳವಳಿ ಹಾಗೂ ರಾಷ್ಟ್ರೀಯವಾದಿ ಸಂದರ್ಭದಲ್ಲಿ ಉಂಟಾದ ತೊಂದರೆಯ ಪರಿಣಾಮವಾಗಿ ಬಂದರು ಪಟ್ಟಣವಾದ ಟ್ಯೂಟಿಕೊರಿನ್‌ನಲ್ಲಿ ವಿ.ಓ. ಚಿದಂಬರಂ ಪಿಳ್ಳೈ ಹಾಗೂ ಇತರರು ಕೂಡಿಕೊಂಡು ಸ್ವದೇಶಿ ಹಡಗು ಸಂಸ್ಥೆಯನ್ನು ಸ್ಥಾಪಿಸಿದರು. ಅಲ್ಲಿ ಸರಕು ಸಾಗಣೆಯಲ್ಲಿ ಕಡಿಮೆ ದರ ವಿಧಿಸುತ್ತಿದ್ದ ಕಾರಣ ಯುರೋಪಿಯನ್ನರ ಯಜಮಾನಿಕೆಯಲ್ಲಿದ್ದ ಕಂಪನಿಗಳ ಪಾಲಿಗೆ ಇವು ಮುಳ್ಳಾದವು. ಸ್ವದೇಶಿ ತತ್ವ ಪ್ರತಿಪಾದಕರಾದ ಸುಬ್ರಮಣ್ಯ ಶಿವ ಹಾಗೂ ಪಿಳ್ಳೈರವರನ್ನು ದಸ್ತಗಿರಿ ಮಾಡಿದಾಗ ಈ ವ್ಯಕ್ತಿಗಳು ಗಿರಣಿ ಕಾರ್ಮಿಕರನ್ನು ಸಂಘಟಿಸಿದ್ದರೂ ಕೂಡ ಯುರೋಪಿಯನ್ನರ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮುಷ್ಕರ ಹೂಡಿದರಲ್ಲದೆ ತಮ್ಮ ನಾಯಕರನ್ನು ಬಿಡುಗಡೆ ಮಾಡಬೇಕೆಂದು ಮೆರವಣಿಗೆ ನಡೆಸಿದರು. ಹೃದಯಹೀನ ಯುರೋಪಿಯನ್ ಅಧಿಕಾರಿಶಾಹಿಯು ಗುಂಡು ಹಾರಿಸಲು ಮುಂದಾಯಿತಲ್ಲದೆ,

ಮುಷ್ಕರ ಹೂಡಿದ್ದವರಲ್ಲಿ ಮೂವರನ್ನು ಕೊಂದಿತು. ತುಳಿತಕ್ಕೊಳಗಾದ ಕಾರ್ಮಿಕರನ್ನು ಸಂಘಟಿಸುವದರ ಮೂಲಕ ಸ್ವದೇಶಿ ನಾಯಕರು ರಾಷ್ಟ್ರೀಯ ಚಳವಳಿಯನ್ನು ಬಲಪಡಿಸಿದರು. ಇದರಿಂದ ಹೆಚ್ಚು, ಕ್ರಿಯಾಶೀಲತೆ ಪ್ರಾಪ್ತವಾಗುವುದರ ಜೊತೆಗೆ ವಸಾಹತುಶಾಹಿ ವಿರೋಧದ ಹೋರಾಟಕ್ಕೆ ವಿಶಾಲವಾದ ತಳಹದಿ ನಿರ್ಮಾಣವಾಯಿತು.

ಸ್ವದೇಶಿ ಕುರಿತು ಗಾಂಧಿ ಬರೆದ ಲೇಖನವು ಓದುಗರಲ್ಲಿ ಬಹಳ ಆಸಕ್ತಿಯನ್ನು ಉಂಟುಮಾಡಿತು. ಅದು ಸ್ವಾತಂತ್ರ್ಯ ವಿಚಾರವನ್ನು ಕೆರಳಿಸಿತು. ಈ ಹೊಸ ಸ್ವದೇಶಿಗೂ ಹಿಂದಿನ ಸ್ವದೇಶಿಗೂ ವ್ಯತ್ಯಾಸವೇನು? ಎಂಬ ಶೀರ್ಷಕೆಯುಳ್ಳ ಲೇಖನ ಬರೆದು ಗಾಂಧಿ ಅದರ ಇತರ ಸಮಸ್ಯೆಗಳನ್ನು ಈ ರೀತಿ ವಿವೇಚಿಸಿದರು.

"ಹಿಂದಿನ ಸ್ವದೇಶಿಯು ಉತ್ಪಾದನೆಯ ವಿಧಾನ, ಉತ್ಪನ್ನ ಅಥವಾ ಉತ್ಪನ್ನವಾದ ವಸ್ತುವಿನ ಭವಿಷ್ಯ ಇತ್ಯಾದಿ ಯಾವ ವಿಷಯವನ್ನು ಗಣನೆಗೆ ತೆಗೆದುಕೊಳ್ಳದೆ ಉತ್ಪತ್ತಿಯಾದ ವಸ್ತುಗಳ ಸ್ವದೇಶಜನ್ಯ ಎಂಬ ಅಂಶವನ್ನು ಮಾತ್ರ ಪ್ರಧಾನ ಮಾಡಿತ್ತು. ನಮ್ಮ ಸ್ವದೇಶಿ ಸಂಸ್ಥೆಗಳು ಎಲ್ಲ ಗ್ರಾಮ ಕೈಗಾರಿಕೆಗಳನ್ನು ಕಂಡುಹಿಡಿದು ಅವು ಹೇಗೆ ಅಭಿವೃದ್ಧಿ ಹೊಂದುತ್ತಿವೆ ಎಂಬುದನ್ನು ಪರಿಶೀಲಿಸಲು ನಾನು ಅವಕಾಶವೀಯುತ್ತೇನೆ."[೧೩]

ಸ್ವದೇಶಿ ಮತ್ತು ವಿದೇಶಿ ಬಗ್ಗೆ ದೇಶಾದ್ಯಂತ ಹಾಗೂ ಕರ್ನಾಟಕ ರಾಜ್ಯದಲ್ಲಿ ಸ್ವದೇಶಿ ಪುರಸ್ಕಾರ ವಿದೇಶಿ ತಿರಸ್ಕಾರ ಎಂಬ ಭಾವನೆ ಹಾಗೂ ಬೃಹತ್ ಚಳವಳಿ ನಡೆದವು. ಅದೇ ರೀತಿಯಾಗಿ ದಾವಣಗೆರೆ ಜಿಲ್ಲೆಯಲ್ಲಿ ಸಹ ಸ್ವದೇಶಿ ಚಳವಳಿ ನಡೆಯಿತು. ಹರ್ಡೇಕರ್ ಮಂಜಪ್ಪನವರು ದಾವಣಗೆರೆಯಲ್ಲಿ 'ಭಾರತೀಯರ ರಾಷ್ಟ್ರೀಯತೆ' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದರು. ಇದರ ಪರಿಣಾಮವಾಗಿ ೧೯೩೦ರ ಕಾನೂನು ಭಂಗ ಚಳವಳಿಯು ದಾವಣಗೆರೆಯಲ್ಲಿ ಭಾರೀ ಪ್ರಮಾಣದಲ್ಲಿಯೇ ಆರಂಭವಾಯಿತು. ಇಲ್ಲಿಯ ಖಾದಿ ವಸ್ತ್ರಾಲಯವು ಎಲ್ಲ ರಾಜಕೀಯ ಚಟುವಟಿಕೆಗಳಿಗೆ ಕೇಂದ್ರವಾಯಿತು. ಆ ವರ್ಷದಲ್ಲಿ ನಡೆದ ಖಾದಿ ಪ್ರಚಾರ ಮತ್ತು ಸ್ವದೇಶಿ ಚಳವಳಿಗಳು ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಪ್ರಮುಖ ಸ್ಥಾನವನ್ನು ಗಳಿಸಿವೆ. ಆರಂಭದಲ್ಲಿ ನಡೆದ ಹದಿನೈದು ದಿನಗಳ ಸ್ವದೇಶಿ ಆಂದೋಳನದಲ್ಲಿ ಖಾದಿ ವಸ್ತ್ರಾಲಯ ಕಾರ್ಯಕರ್ತರು ದಾವಣಗೆರೆಯಲ್ಲಿ ಪ್ರತಿಯೊಂದು ವಿದೇಶಿ ಬಟ್ಟೆಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿ ಅಂಗಡಿಯ ಮಾಲೀಕರ ಮನಸ್ಸನ್ನು ಗೆದ್ದರು. ಅಂಗಡಿಯ ಮಾಲೀಕರು ವಿದೇಶಿ ಬಟ್ಟೆಗಳನ್ನು ತರಿಸುವುದಿಲ್ಲವೆಂಬ ನಿರ್ಣಯವನ್ನು ಮಾಡಿದರು. ಇದು ಚಳವಳಿಯ ಕಾರ್ಯಕರ್ತರ ತಾಳ್ಮೆ ಮತ್ತು ಸತ್ಯಾಗ್ರಹದಲ್ಲಿದ್ದ ಅವರ ಅಚಲ ನಂಬಿಕೆಯನ್ನು ತೋರಿಸುತ್ತದೆ. ಈ ಚಳವಳಿಯಲ್ಲಿ ಭಾಗವಹಿಸಿ ಅದನ್ನು ಸಮರ್ಪಕ ರೀತಿಯಲ್ಲಿ ನಡೆಸಿದವರಲ್ಲಿ ಶ್ರೀನಿವಾಸಶಾಸ್ತ್ರಿ, ಬಳ್ಳಾರಿ ಸಿದ್ಧಮ್ಮ, ಕಾಸಲ್ ಶ್ರೀನಿವಾಸಶೆಟ್ಟರು, ಕೊಟಗಿ ಸಿದ್ದಲಿಂಗಪ್ಪ, ಕೆ.ಟಿ. ಜಂಬಣ್ಣ, ಖಾದಿ ಸಿದ್ಧಪ್ಪ, ಬೆಲ್ಲದ ಸಿದ್ಧಲಿಂಗಯ್ಯ, ಶಿವಗಂಗಯ್ಯ ಮತ್ತು

ಇತರರು ಪ್ರಮುಖರು. ಈ ಚಳವಳಿಗಳು ಶಾಂತರೀತಿಯಲ್ಲಿ ಮತ್ತು ಕಾನೂನಿನ ಚೌಕಟ್ಟಿನಲ್ಲಿಯೇ ನಡೆದಿದ್ದರೂ ಜಿಲ್ಲೆಯ ಉನ್ನತ ಪೋಲೀಸ್ ಅಧಿಕಾರಿಯು ಚಳವಳಿಗಾರರಿಗೆ ಸ್ವತಃ ಎಚ್ಚರಿಕೆಯನ್ನು ನೀಡಿದ್ದರು.

೧೯೩೨ರ ಮಾರ್ಚ್‌ನಲ್ಲಿ ಹೋಳಿಹಬ್ಬದಂದು ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ವಿದೇಶಿ ವಸ್ತ್ರದ ದಹನವಾಯಿತು. ನೂರಾರು ದೇಶಪ್ರೇಮಿಗಳು ತಮ್ಮಲ್ಲಿದ್ದ ವಿದೇಶಿ ವಸ್ತ್ರಗಳನ್ನು ಅಗ್ನಿಗೆ ಆಹುತಿಯಾಗಿ ಕೊಟ್ಟು ಮುಂದೆ ಖಾದಿಯನ್ನೇ ತೊಡುವುದಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಕಾರ್ಯಕರ್ತರು ಜಿಲ್ಲೆಯ ಎಲ್ಲಾ ಸ್ಥಳಗಳನ್ನು ಸಂದರ್ಶಿಸಿ ಕೈಚೀಟಿ ಮತ್ತು ಇತರ ಪ್ರಚಾರ ಸಾಹಿತ್ಯಗಳೊಡನೆ ಸ್ವದೇಶಿ, ಖಾದಿ ಮತ್ತು ರಾಷ್ಟ್ರೀಯತೆಯನ್ನು ಪ್ರಚಾರಪಡಿಸಿದರು.[೧೪]

ಅಡಿಟಿಪ್ಪಣಿಗಳು

೧. ಮೋ.ಕ. ಗಾಂಧಿ (ಅನು.), ಸ್ವಾ.ರಾ. ಕುಲಕರಣಿ, **ನನ್ನ ಕಲ್ಪನೆಯ ಸಮಾಜವಾದ**, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೮೭, ಪುಟ. ೮೦

೨. ಆರ್.ಸಿ. ಮಜುಂದಾರ್, (ಅನು.), ಕೆ.ಎಸ್. ನಾರಾಯಣಸ್ವಾಮಿ, **ಸ್ವಾತಂತ್ರ್ಯ ಸಂಗ್ರಾಮ ಭಾಗ ಒಂದು**, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೯೮, ಪು. ೪೫

೩. ಈಚನೂರು ಶಾಂತ, **ಮಹಾತ್ಮಗಾಂಧೀಜಿ**, ಪೃಥ್ವಿ ಪ್ರಕಾಶನ, ಬೆಂಗಳೂರು, ೧೯೯೬, ಪು. ೩೨

೪. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು**, ಬುರ್ಲಿಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ, ೧೯೯೮, ಪು. ೩೦

೫. ನಿರಂಜನ, **ಕಿರಿಯರ ವಿಶ್ವಕೋಶ ಸಂಪುಟ-೭**, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೪, ಪುಟ. ೪೬೭

೬. ಹೆಚ್.ವಿ. ಶ್ರೀನಿವಾಸಮೂರ್ತಿ, ಆರ್. ರಾಮಕೃಷ್ಣನ್, **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್, ಬೆಂಗಳೂರು, ೧೯೯೫, ಪು. ೪೨೯

೭. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್ ಡೇ, **ಸ್ವಾತಂತ್ರ್ಯ ಹೋರಾಟ**, ನ್ಯಾಷನಲ್ ಬುಕ್‌ಟ್ರಸ್ಟ್, ಹೊಸ ದೆಹಲಿ, ೧೯೭೪, ಪುಟ, ೯೬

೮. ಕೆ. ಸಂಪದ್ಗಿರಿರಾವ್, **ಸ್ವರಾಜ್ಯ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೨, ಪುಟ ೪೩

೯. ಎಸ್. ಚಂದ್ರಶೇಖರ್, **ಕರ್ನಾಟಕ ಚರಿತ್ರೆ ಸಂಪುಟ-೭**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ. ೪

೧೦. ಅದೇ ಪು. ೧೦೧

೧೧. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್ ಡೇ, **ಫ್ರೀಡಮ್ ಸ್ಟ್ರಗಲ್**, ನ್ಯಾಷನಲ್ ಬುಕ್‌ಟ್ರಸ್ಟ್, ಹೊಸದೆಹಲಿ, ೧೯೭೪, ಪುಟ. ೯೬

೧೨. ಎಸ್. ಚಂದ್ರಶೇಖರ್, **ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪುಟ. ೯೧

೧೩. ಡಿ.ಜಿ. ತೆಂಡೂಲ್ಕರ್, **ಮಹಾತ್ಮ ಸಂಪುಟ-೩**, ಗಾಂಧೀಭವನ, ಮಾನಸ ಗಂಗೋತ್ರಿ, ಮೈಸೂರು, ೧೯೭೬, ಪು. ೪೨೭

೧೪. ಎಂ.ವಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿ, **ಚಂದ್ರವಳ್ಳಿ**, ಡಿಸ್ಟ್ರಿಕ್ಟ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ಚಿತ್ರದುರ್ಗ, ೧೯೯೬, ಪು. ೧೦೮

* * *

ಅಧ್ಯಾಯ ೩

ಸ್ವದೇಶಿ ಚಳವಳಿಯ ವಿವಿಧ ಹಂತಗಳು

ಅಧ್ಯಾಯ ೩

ಸ್ವದೇಶಿ ಚಳವಳಿಯ ವಿವಿಧ ಹಂತಗಳು

ಸ್ವದೇಶಿ ಚಳವಳಿ ೧೯೦೫ರಲ್ಲಿ ಸ್ಪಷ್ಟವಾಗಿ ಕಂಡುಬಂದಿತಾದರೂ ಅದಕ್ಕೆ ಮುಂಚಿನ ದಶಕಗಳಲ್ಲಿಯೇ ಪೂರ್ವಸಿದ್ಧತೆ ಆಗಿದ್ದನ್ನು ಕಾಣಬಹುದು. ಪ್ರಪ್ರಥಮವಾಗಿ ಸ್ವದೇಶಿ ಕಲ್ಪನೆ ಕಂಡುಬಂದಿದ್ದು ೧೮೪೯ರಲ್ಲಿ. ೧೮೪೯ರಲ್ಲಿ ಪೂನಾದ ಗೋಪಾಲ್‌ರಾವ್ ದೇಶಮುಖ್ ಎಂಬುವವರು ಸ್ವದೇಶಿ ವಸ್ತುಗಳನ್ನು ಉಪಯೋಗಿಸಬೇಕೆಂದು ಪ್ರಚಾರ ಕೈಗೊಂಡರು. ಆ ನಂತರ ೧೮೭೦ರ ದಶಕದಲ್ಲಿ ಸ್ವದೇಶಿ ಹೆಚ್ಚು ಜನಪ್ರಿಯವಾಯಿತು. ಬೆಂಗಳೂರಿನಲ್ಲಿ ೧೮೭೪ರಲ್ಲಿ ಭಾರತದಲ್ಲಿಯೇ ತಯಾರಾದ ಹತ್ತಿಬಟ್ಟೆಗಳನ್ನು ವ್ಯಾಪಾರ ಮಾಡಲೆಂದೇ ಒಂದು ಕಂಪನಿಯನ್ನು ಪ್ರಾರಂಭಿಸಲಾಯಿತು. ಆನಂತರ ವಿದೇಶಿ ಪದಾರ್ಥಗಳನ್ನು ಮಾರುವುದಿಲ್ಲ ಎಂದು ಈ ಕಂಪನಿ ತೀರ್ಮಾನ ಮಾಡಿತು. ಹತ್ತಿಬಟ್ಟೆಗಳ ಮೇಲಿನ ಸುಂಕದ ವಿರುದ್ಧ ಜನಗಳ ಪ್ರತಿಭಟನೆ ಸ್ವಲ್ಪ ಕಡಿಮೆ ಆದಾಗ ಸ್ವದೇಶಿ ವಸ್ತುಗಳಿಗಾಗಿಯೂ ಚಳವಳಿ ಸ್ವಲ್ಪ ಕಡಿಮೆಯಾಯಿತು. ಆದರೆ ಸಂಪೂರ್ಣವಾಗಿ ಸ್ವದೇಶಿ ಚಳವಳಿ ನಿಂತುಹೋಗಲಿಲ್ಲ.[೧] ಅದು ಮುಂದೆ ೧೯೦೫ರಲ್ಲಿ ಬಂಗಾಳದ ವಿಭಜನೆಯಿಂದುಂಟಾದ ಪರಿಣಾಮವಾಗಿ ಸ್ವದೇಶಿ ಚಳವಳಿ ಉಗ್ರ ಸ್ವರೂಪವನ್ನು ಪಡೆಯಿತು. ಹೊಸ ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾದ ಮಹಾನಾಯಕರ ನಾಯಕತ್ವದಡಿಯಲ್ಲಿ ಬಂಗಾಳಿಗಳು ಒಂದು ಸಾಮಾನ್ಯ ಗುರಿ ಹೊಂದಿ ಹೋರಾಟ ಮಾಡಲು ಈ ಚಳವಳಿಯಲ್ಲಿ ಒಟ್ಟುಗೂಡಿದರು. ರಾಷ್ಟ್ರೀಯತೆಯ ಪ್ರಭಾವದಿಂದ ಬಹಿಷ್ಕಾರ ಮತ್ತು ಚಳವಳಿಗಳ ಮೂಲಕ ಸ್ವದೇಶಿ ಪ್ರಜ್ಞೆ ಪ್ರಬಲವಾಗಿ ಬೆಳೆಯತೊಡಗಿತು. ಮುಂದೆ ಎಲ್ಲ ಕ್ಷೇತ್ರಗಳಲ್ಲಿಯೂ ಬ್ರಿಟಿಷರೊಡನೆ ಅಸಹಕಾರ ಮಾಡಬೇಕೆಂಬ ವಿಚಾರ ಬೆಳೆಯತೊಡಗಿತು. ರಾಷ್ಟ್ರದ ರಾಜಕೀಯ ಜೀವನವನ್ನು ಪುನರುತ್ಥಾನಗೊಳಿಸಿ ಕೊನೆಗೆ ಸಂಪೂರ್ಣ ಸ್ವತಂತ್ರ್ಯ ಪಡೆಯಬೇಕು ಎಂಬ ಮುಂದಿನ ಕನಸು ರಾಷ್ಟ್ರೀಯ ನಾಯಕರಲ್ಲಿ ಪ್ರಖರವಾಗಿ ಚಿಗುರಿತು. ಹಾಗೆಯೇ ಭಾರತೀಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಮೂಲ ಉದ್ದೇಶವಿದ್ದ ಸ್ವದೇಶಿ ಸಂಪೂರ್ಣ ಬದಲಾವಣೆ ಆಯಿತು. ಸ್ವದೇಶಿ ಎಂದರೆ ಭಾರತೀಯವಾದುದನ್ನೆಲ್ಲ ಉಪಯೋಗಿಸಬೇಕೆಂಬ ಅಕ್ಷರಶಃ ಅರ್ಥದಲ್ಲಿ ಹೊಸ ಸ್ವರೂಪ ಪಡೆಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ನಿಧಾನವಾಗಿ ಪ್ರಬಲವಾಗುತ್ತಿದ್ದ ರಾಷ್ಟ್ರೀಯತೆ ಮತ್ತು ದೇಶಭಕ್ತಿಯ ಜಾಗೃತಿಯ ಕಾರಣ ಈ ಬೆಳವಣಿಗೆ ಉಂಟಾಯಿತು. ಸ್ವದೇಶಿ ಚಳವಳಿಯನ್ನು ದಬ್ಬಾಳಿಕೆಯಿಂದ ಹತ್ತಿಕ್ಕಲು ಬ್ರಿಟಿಷ್ ಸರ್ಕಾರ ಕೈಗೊಂಡ ಕ್ರಮಗಳಿಂದಲೂ ಸ್ವಲ್ಪಮಟ್ಟಿಗೆ ಈ ಬೆಳವಣಿಗೆ ಉಂಟಾಯಿತು.

ಇಂಗ್ಲೆಂಡಿನ ಗಿರಣಿ ಬಟ್ಟೆಗಳ ಬಹಿಷ್ಕಾರ ಮುಖ್ಯಗುರಿಯಾಗಿದ್ದರೂ, ಇಂಗ್ಲೆಂಡಿನ ಇತರೆ ವಸ್ತುಗಳಾಗಿದ್ದ ಉಪ್ಪು, ಸಕ್ಕರೆ ಇತ್ಯಾದಿ ಭೋಗ ಸಾಮಗ್ರಿಗಳಿಗೂ ಈ ಬಹಿಷ್ಕಾರದ ಚಳವಳಿ

ಮುಂದುವರಿಯಿತು. ಸ್ವದೇಶದಲ್ಲೇ ಸಿಗುತ್ತಿದ್ದ ಕಲ್ಲುಪ್ಪು ಮತ್ತು ಸ್ಥಳೀಯವಾಗಿ ಉತ್ಪಾದಿತವಾಗುತ್ತಿದ್ದ ಸಕ್ಕರೆ ಮತ್ತು ಬೆಲ್ಲಕ್ಕೆ ಬೇಡಿಕೆ ಪ್ರಬಲವಾಯಿತು. ಬೊಂಬಾಯಿಯ ಗಿರಣಿ ಬಟ್ಟೆಗಳ ಜೊತೆಗೆ ಬಂಗಾಳದ ಜನರಿಗೆ ಕೈಮಗ್ಗಗಳಿಂದ ಒರಟು ಬಟ್ಟೆಯ ಸರಬರಾಜು ಬೇಕಾಗಿತ್ತು. ಬ್ರಿಟಿಷರು ಬರುವುದಕ್ಕೆ ಮುಂಚೆ (ಭಾರತದ) ಕೈಮಗ್ಗ ಉದ್ಯಮ ಉತ್ತಮ ಸ್ಥಿತಿಯಲ್ಲಿತ್ತು. ಹದಿನೆಂಟನೆಯ ಶತಮಾನದಲ್ಲಿ ಅವರ ಸಾಮ್ರಾಜ್ಯ ಸ್ಥಾಪಿಸಿದ ನಂತರ ಈ ಉದ್ಯಮಕ್ಕೆ ಹಿನ್ನೆಡೆಯುಂಟಾಯಿತು. ಈ ಕೈಮಗ್ಗಗಳನ್ನು ಅಭಿವೃದ್ಧಿಗೊಳಿಸಲು ಸ್ವದೇಶಿ ಚಳವಳಿ ಒಳ್ಳೆಯ ಅವಕಾಶವೆಂದು ಕಂಡುಬಂದಿತು. ಇವು ತಯಾರಿಸಿದ ಬಟ್ಟೆ ತುಂಬ ಒರಟಾಗಿರುತ್ತಿತ್ತು. ಆದರೆ ಸ್ವದೇಶಿ ಭಾವನೆ ತುಂಬಿದ್ದ ಬಂಗಾಳಿಗಳು ಅದನ್ನೇ ಸ್ವೀಕರಿಸಿದರು. ಆಗ ಜನಪ್ರಿಯವಾಗಿದ್ದ ಒಂದು ರಾಷ್ಟ್ರೀಯ ಗೀತೆಯಲ್ಲಿ "ಈ ಕೈಮಗ್ಗದ ಬಟ್ಟೆಯನ್ನು ಗೌರವಿಸಿರಿ; ಬಡತನದಲ್ಲಿರುವ ನಮ್ಮ ತಾಯಿ ನೀಡುವ ಈ ಉಡುಗೊರೆಯ ಒರಟು ಬಟ್ಟೆಯನ್ನು ಶಿರದ ಮೇಲಿಟ್ಟುಕೊಳ್ಳಿ" ಎಂದು ಹಾಡಲಾಗುತ್ತಿತ್ತು. ಈ ಭಾವುಕತೆ, ಈ ತ್ಯಾಗ ಮನೋಭಾವ, ಜನತೆಯ ಮನಸ್ಸಿನಲ್ಲಿ ಚಿಮ್ಮುತ್ತಿದ್ದರೂ ಅದು ಶಕ್ತಿ ತುಂಬಿಕೊಂಡು ಪ್ರಬಲವಾದ ಒತ್ತಡ ತರುತ್ತದೆ ಎಂದು ಬಹಳ ಕಾಲ ನಂಬಿನಡೆಯುವುದು ಸಾಧ್ಯವಾಗದುದಾಗಿತ್ತು. ಆದ್ದರಿಂದ ಈ ಉತ್ಸಾಹವನ್ನು ಹಸಿರಾಗಿಡಲು ರಾಷ್ಟ್ರನಾಯಕರು ಅನೇಕ ಮಾರ್ಗಗಳನ್ನು ಕೈಗೊಳ್ಳಬೇಕಾಯಿತು. ದೇಶದಲ್ಲೆಲ್ಲ ಸಾರ್ವಜನಿಕ ಸಭೆಗಳನ್ನು ನಡೆಸಿ ವಿದೇಶಿ ವಸ್ತು ಬಹಿಷ್ಕರಿಸಬೇಕು, ಸ್ವದೇಶಿ ವಸ್ತುಗಳನ್ನು ಮಾತ್ರ ಉಪಯೋಗಿಸಬೇಕೆಂದು ಪ್ರಚಾರ ಕೈಗೊಂಡರು. ನೆರೆದಿದ್ದ ಜನರು ಪ್ರತಿಜ್ಞೆ ಕೈಗೊಳ್ಳುತ್ತಿದ್ದರು. ಸ್ವದೇಶಿ ವಸ್ತುಗಳನ್ನೇ ಕೊಳ್ಳುವೆವು ಎಂದು ಸಂಕಲ್ಪಿಸುತ್ತಿದ್ದರು.[೨]

ಸಂಘಟನೆಗಳ ಮೂಲಕ ಸ್ವದೇಶಿ ಚಳವಳಿಯನ್ನು ತೀವ್ರಗೊಳಿಸಬೇಕೆಂಬ ಪ್ರೇರಣೆ ಸುರೇಂದ್ರನಾಥ ಬ್ಯಾನರ್ಜಿಯ ಭಾಷಣ ಹಾಗೂ ಲೇಖನಗಳಿಂದ ಉಂಟಾಯಿತು. ಈ ಹಿನ್ನೆಲೆಯಲ್ಲಿ ಸುರೇಂದ್ರನಾಥ ಬ್ಯಾನರ್ಜಿಯವರನ್ನು ಸ್ವದೇಶಿ ಮತ್ತು ಬಾಯ್‌ಕಾಟ್ ಚಳವಳಿಯ ಪ್ರಥಮ ನಾಯಕನೆಂದು ಹೇಳಬಹುದು. ೧೯೦೫ರಲ್ಲಿ ವೈಸ್ರಾಯ್ ಕರ್ಜನ್ ಬಂಗಾಳವನ್ನು ವಿಭಜಿಸಿದಾಗ ಸ್ವದೇಶಿ ಚಳವಳಿ ಹೊಸ ತಿರುವು ಪಡೆಯಿತು. ಬಂಗಾಳದ 'ಸಂಜೀವಿನಿ' ಪತ್ರಿಕೆ ಆ ಬಗ್ಗೆ ಜನಜಾಗೃತಿಯನ್ನು ಮೂಡಿಸಿತು. ಸ್ವದೇಶಿ ಚಳವಳಿಯ ಪ್ರತಿಧ್ವನಿ ಬಾಂಬೆ ಪ್ರಾಂತ, ಮದ್ರಾಸ್ ಪ್ರಾಂತ ಮತ್ತು ಪಂಜಾಬ್ ಪ್ರಾಂತಗಳಲ್ಲಿ ಮೊಳಗಿತು. ಪ್ರದರ್ಶನಕಾರರು ಒಂದೇ ಮಾತರಂ ಬ್ಯಾಡ್ಜ್‌ಗಳನ್ನು ಬಳಸಿ, ಸ್ವದೇಶಿ ಘೋಷಣೆಗಳನ್ನು ಕೂಗಿದರು. ವಿಜಯದಶಮಿ ಉತ್ಸವಗಳಲ್ಲಿ ಸ್ವದೇಶಿ ಘೋಷಣೆಗಳು ದೇಶದಾದ್ಯಂತ ಮೊಳಗಿದವು. ಸ್ವದೇಶಿ ಚಳವಳಿಯಲ್ಲಿ ಹಿತೇಂದ್ರನಾಥದತ್ತ (ಕಲ್ಕತ್ತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ) ಮೂರು ಮುಖಗಳನ್ನು ಗುರ್ತಿಸಿದರು. ಸ್ವರಾಜ್ಯ, ಸ್ವದೇಶಿ ವಸ್ತ್ರ ಮತ್ತು ಸ್ವದೇಶಿ ವಿದ್ಯಾ. ಅನಂತರದಲ್ಲಿ ಈ ಸ್ವದೇಶಿ ಮತ್ತು ಬಾಯ್‌ಕಾಟ್ ಚಳವಳಿ ಐದು ಮುಖಗಳನ್ನು ಪಡೆದುಕೊಂಡಿತು. ನೌಕರಿಗಳು ಮತ್ತು ಉನ್ನತ ಹುದ್ದೆಗಳಿಗೆ ಬಾಯ್‌ಕಾಟ್, ಕೇಂದ್ರ ಮತ್ತು ಪ್ರಾಂತಗಳ ಕೌನ್ಸಿಲ್‌ಗಳಿಗೆ ಬಾಯ್‌ಕಾಟ್, ಆರ್ಥಿಕ ಸ್ವದೇಶಿ ಇವುಗಳನ್ನು ಒಳಗೊಂಡಿದ್ದಿತು.

ಇಂಗ್ಲಿಷ್ ಬಟ್ಟೆ, ಸಕ್ಕರೆ, ಪಿಂಗಾಣಿ, ಸಿಗರೇಟ್, ಬೂಟು, ಮದ್ಯ ಮುಂತಾದವುಗಳ ನಿಷೇಧ, ಸ್ವದೇಶಿ ವಿದ್ಯಾರ್ಜನೆಗೆ ಪ್ರೋತ್ಸಾಹ ಮತ್ತು ಇಂಗ್ಲಿಷ್ ಶಾಲಾಕಾಲೇಜು ವಿದ್ಯಾಭ್ಯಾಸ ಹಾಗೂ ಇಂಗ್ಲಿಷ್ ಭಾಷೆ ನಿಷೇಧ, ಸಾಮಾಜಿಕ ನಿಷೇಧ ಇವುಗಳನ್ನು ಒಳಗೊಂಡಿದ್ದಿತು. ವಿದೇಶಿ ಮಹಿಳೆಯರೊಡನೆ ವಿವಾಹ ನಿಷೇಧ, ಬಿಳಿಯರೊಡನೆ ಭೋಜನ ನಿಷೇಧ, ವ್ಯಾಪಾರ ನಿಷೇಧ, ವಿದೇಶಿಯರಿಗೆ ಕ್ಷೌರ ನಿಷೇಧ ಇತ್ಯಾದಿ. ಸ್ವದೇಶಿ ಚಳವಳಿಯ ಪರಿಣಾಮವಾಗಿ ಭಾರತದ ವ್ಯಾಪಾರ ವಹಿವಾಟಿನಲ್ಲಿ ಅಪಾರ ಏರುಪೇರು ಉಂಟಾಯಿತು. ವಿದೇಶಿ ವಸ್ತುಗಳ ಆಮದಿನಲ್ಲಿ ಶೇಕಡ ೫೦ ರಿಂದ ೭೫ರಷ್ಟು ಕಡಿತ ಉಂಟಾಯಿತು. ರಫ್ತಿನಲ್ಲಿ ಶೇಕಡ ೪೦ ರಿಂದ ೭೭ ರಷ್ಟು ಹೆಚ್ಚಾಯಿತು. ಆದರೆ ವಂಚನೆಗೆ ಹೆಸರಾದ ಬ್ರಿಟಿಷರು ತಮ್ಮ ವಸ್ತುಗಳ ಮೇಲೆ 'ಜರ್ಮನಿ ನಿರ್ಮಿತ'ವೆಂದು ಮುದ್ರೆ ಒತ್ತಿ ವಸ್ತುಗಳ ಮಾರಾಟ ಮಾಡಲು ಯತ್ನಿಸಿದರು. ನಂತರ ಅದನ್ನು ಕೂಡ ವಿರೋಧಿಸಲಾಯಿತು. ಹಾಗಾಗಿ ಏಷ್ಯನ್ ದೇಶಗಳಾದ ಚೀನಾ, ಜಪಾನ್ ತಯಾರಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಿತು. ಚಳವಳಿಯಿಂದ ವ್ಯಗ್ರರಾದ ಇಂಗ್ಲಿಷ್ ಅಧಿಕಾರಿಗಳು ಸ್ವದೇಶಿ ಚಳವಳಿಯ ವರ್ತಕರನ್ನು ಹಿಂಸಿಸತೊಡಗಿದರು. ಅವರ ಅಂಗಡಿ, ಮನೆಗಳನ್ನು ಜಪ್ತಿ ಮಾಡಿ ದೌರ್ಜನ್ಯವೆಸಗಿದರು. ಚಳವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮೇಲೆ ಶಿಕ್ಷೆ, ದಂಡ ವಿಧಿಸಲಾಯಿತು. ಅಲ್ಲದೆ ಶಾಲಾಕಾಲೇಜುಗಳಿಗೆ ನೀಡುತ್ತಿದ್ದ ಅನುದಾನವನ್ನು ರದ್ದುಪಡಿಸಲಾಯಿತು. ಅಂತಹ ಸಂದರ್ಭದಲ್ಲಿ ಮುಂದೆ ಬಂದ ಜಮೀನ್ದಾರರು, ಶ್ರೀಮಂತರು ದೇಣಿಗೆ ನೀಡಿ ರಾಷ್ಟ್ರೀಯ ಶಾಲಾಕಾಲೇಜುಗಳನ್ನು ಅಭಿವೃದ್ಧಿಪಡಿಸಿದರು.

ಸ್ವದೇಶಿ ಚಳವಳಿಯ ನಾಯಕರಲ್ಲಿ ಪ್ರಮುಖರಾದವರು ಬೊಂಬಾಯಿ ಪ್ರಾಂತದಲ್ಲಿ: ಬಾಲ ಗಂಗಾಧರ ತಿಲಕ್ ಅವರ ಮಗಳು ಶ್ರೀಮತಿ ಕೇಟ್ಕರ್, ಶ್ರೀಮತಿ ಜೋಷಿ, ವಿ.ಜಿ. ವಿಜಾಪುರ್‌ಕರ್, ಮಹದೇವರಾಜಾರಾಮ್, ಗಂಗಾರಾಮ್, ಚಂದ್ರಿಕಾದತ್. ಪಂಜಾಬ್‌ನಲ್ಲಿ: ಲಾಲಾಲಜಪತರಾಯ್, ಚಂದ್ರಿಕಾದತ್, ಪ್ಲೀಡರ್ ಮುನ್ಶಿರಾಮ್ ಇತರರು. ಮದ್ರಾಸ್‌ನಲ್ಲಿ: ಆನಂದಾಚಾರ್ಲು, ಸುಬ್ರಹ್ಮಣ್ಯ ಐಯ್ಯರ್, ಟಿ.ಎಂ. ನಾಯರ್ ಇತರರು. ಬೆಂಗಳೂರಿನಲ್ಲಿ: ಸಂಪತಗಿರಿರಾವ್, ಎಂ.ಪಿ.ಎಲ್. ಶಾಸ್ತ್ರಿ, ಬೊಂಬಾಯಿ ಕರ್ನಾಟಕದ ಗಂಗಾಧರರಾವ್ ದೇಶಪಾಂಡೆ ಇತರರು. ರಾಷ್ಟ್ರೀಯ ಶಾಲಾ ಕಾಲೇಜುಗಳ ಸ್ಥಾಪನೆ ಮತ್ತು ಅಭಿವೃದ್ಧಿಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದರು. ಡಾ.ಎನ್.ಎಸ್. ಹರ್ಡೀಕರ್ ಹುಬ್ಬಳ್ಳಿಯಲ್ಲಿ ಪ್ರಥಮಬಾರಿಗೆ ಸ್ವದೇಶಿಗೆ ಮಾದರಿಯಾದ ಸಾರ್ವಜನಿಕ ಆಸ್ಪತ್ರೆ ಸ್ಥಾಪನೆ ಮಾಡಿದರು.[೬] ಸ್ವದೇಶಿ ತತ್ವದ ಪ್ರಕಾರ ಜನರು ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಪಡೆಯಬೇಕಾಗಿತ್ತು. ರಾಷ್ಟ್ರೀಯ ಶಿಕ್ಷಣದ ಯೋಜನೆಯನ್ನು ೧೯೦೪ರಲ್ಲಿ ಡಾನ್ ಪತ್ರಿಕೆಯ ಸಂಪಾದಕರಾಗಿದ್ದ ಸತೀಶಚಂದ್ರ ಮುಖರ್ಜಿ ರೂಪಿಸಿದ್ದರು. ಬ್ರಿಟಿಷ್ ಮಾದರಿಯ ವಿದ್ಯಾಭ್ಯಾಸ ರಾಷ್ಟ್ರ ವಿರೋಧಿ ಎಂದು ಭಾವಿಸಲಾಯಿತು. ಭಾರತದ ಪರಿಸ್ಥಿತಿಗಳ ಮತ್ತು ಸಂಸ್ಕೃತಿಯ ಯಾವುದೇ ಸಂಬಂಧವಿಲ್ಲದ ಅನ್ಯಜ್ಞಾನವನ್ನು ಗೊತ್ತುಗುರಿಯಿಲ್ಲದೆ ಬಾಯಿಪಾಠ ಮಾಡುವುದಾಗಿತ್ತು. ಆ

ವಿದ್ಯಾಭ್ಯಾಸ. ಇಂಗ್ಲಿಷ್ ಮಾಧ್ಯಮವು ಕಲಿಕೆಯ ಆನಂದವನ್ನು ಕೊಂದಿತು. ಸ್ವಾತಂತ್ರ್ಯದ ಆಲೋಚನೆಯನ್ನು ನಿರುತ್ಸಾಹಗೊಳಿಸಿತು. ಇದರಿಂದ ಬಿಡುಗಡೆಯ ದಾರಿಯನ್ನು ರವೀಂದ್ರನಾಥ ಠಾಕೂರ್ ಅವರು ಶಾಂತಿನಿಕೇತನವನ್ನು ಸ್ಥಾಪಿಸಿ ತೋರಿಸಿದರು. ಕರ್ಜನನು ಜಾರಿಗೆ ತಂದ ಭಾರತೀಯ ವಿಶ್ವವಿದ್ಯಾನಿಲಯಗಳ ಶಾಸನದಲ್ಲಿ ವಿದ್ಯಾರ್ಥಿಗಳು ರಾಜಕೀಯ ಪ್ರದರ್ಶನಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ ಕಾರ್ಲೈಲ್ ಕಳುಹಿಸಿದ ಪರಿಪತ್ರವೂ ರಾಷ್ಟ್ರೀಯ ಶಿಕ್ಷಣ ಮಂಡಳಿಯ ಸ್ಥಾಪನೆಯನ್ನು ಪ್ರಚೋದಿಸಿದವು. ಬೆಂಗಾಲ್ ನ್ಯಾಷನಲ್ ಕಾಲೇಜನ್ನು ೧೯೦೬ರಲ್ಲಿ ಪ್ರಾರಂಭಿಸಲಾಯಿತು. ಇಲ್ಲಿ ಭಾರತೀಯವಾದ ಅಂಶಗಳಿಗೆ ಪ್ರಾಮುಖ್ಯವಿತ್ತು. ಅದರ ಗುರಿ ಭಾರತೀಯ ವಿಜ್ಞಾನಿಗಳನ್ನು, ಚರಿತ್ರೆಕಾರರನ್ನು ಮತ್ತು ಕೈಗಾರಿಕೋದ್ಯಮಿಗಳನ್ನು ತಯಾರು ಮಾಡುವುದಾಗಿದ್ದರೂ, ಪ್ರಧಾನವಾಗಿದ್ದ ಧ್ಯೇಯ ರಾಷ್ಟ್ರಪ್ರೇಮವನ್ನು ಅವರಲ್ಲಿ ಪ್ರಚೋದಿಸುವುದು. ಅದು ಸ್ವಾತಂತ್ರ್ಯವು ಹಬ್ಬಿ ಹರಡಲು ಸೂಕ್ತವಾದ ಸಾಂಸ್ಕೃತಿಕ ನೆಲವನ್ನು ಹಸನು ಮಾಡಲಿತ್ತು. ಸ್ಥಳೀಯ ಭಾರತೀಯ ಭಾಷೆಯೇ ಅಲ್ಲಿ ಮುಖ್ಯ ಶಿಕ್ಷಣ ಮಾಧ್ಯಮ. ರಾಷ್ಟ್ರಾದ್ಯಂತ ಹಲವಾರು ರಾಷ್ಟ್ರೀಯ ಶಾಲೆಗಳು ಉದಯಿಸಿದವು.[೪]

ಬ್ರಿಟಿಷರು ಆಡಳಿತದ ನೆಪವೊಡ್ಡಿ ಬಂಗಾಳವನ್ನು ವಿಭಜನೆ ಮಾಡಿದ್ದರಿಂದ ಕ್ಷುದ್ಧರಾದ ಬಿಪಿನ್‌ಚಂದ್ರಪಾಲರು ಅದರ ವಿರುದ್ಧ ಉಗ್ರ ಹೋರಾಟ ನಡೆಸಿದರು. ಕಾಂಗ್ರೆಸ್ಸಿನಲ್ಲಿದ್ದ ಉಗ್ರವಾದಿ ನಾಯಕರುಗಳನ್ನು ಸಂಘಟಿಸಿದರು. ಈ ಹಂತದಲ್ಲಿ ಪಂಜಾಬದ ಲಾಲಾಲಜಪತರಾಯ್ ಮಹಾರಾಷ್ಟ್ರದ ಬಾಲಗಂಗಾಧರ ತಿಲಕ್, ಬಾಂಗ್ಲಾದೇಶದ ಬಿಪಿನ್‌ಚಂದ್ರಪಾಲ್‌ರು ಒಂದಾಗಿ, ಬ್ರಿಟಿಷರ ವಿರುದ್ಧದ ಚಳವಳಿಯ ನೇತೃತ್ವ ವಹಿಸಿದರು. ಪಂಜಾಬ, ಮಹಾರಾಷ್ಟ್ರ ಮತ್ತು ಬಂಗಾಳಗಳಲ್ಲಿ ಈ ಮೂವರೂ ಉಗ್ರವಾದಿ ನಾಯಕರು ಸಂಚರಿಸಿ, ಯುವಕರನ್ನು ಹುರಿದುಂಬಿಸಿ ಉಗ್ರವಾದಿಗಳನ್ನು ಸಂಘಟಿಸಿ ಒಂದೇ ವೇದಿಕೆಯಡಿ ಬರುವಂತೆ ಮಾಡಿದರು. ತಮ್ಮ ಉದ್ದೇಶ ಸಾಧನೆಗಾಗಿ ದೇಶದ ಉದ್ದಗಲಕ್ಕೂ ಸಂಚರಿಸಿ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಚುರುಕು ತುಂಬಿದರು.[೫] ಬಂಗಾಳದಲ್ಲಿನ ಸ್ವದೇಶಿ ಚಳವಳಿ ಭಾರತದ ಇತರ ಕಡೆಗಳಿಗೆ ಹರಡಲು ಸಮಯ ತೆಗೆದುಕೊಳ್ಳಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಬಂಗಾಳ ಸರ್ಕಾರದ ಸುದ್ದಿ ಸಂಗ್ರಹ ವಿಭಾಗವು ತನ್ನ ರಹಸ್ಯ ವರದಿಗಳಲ್ಲಿ ಹಲವು ಸ್ವಾರಸ್ಯಕರ ವಿಷಯಗಳನ್ನು ದಾಖಲಿಸಿದೆ. ೧೯೦೫ನೇ ವರ್ಷದ ಕೊನೆಯ ದಿನಗಳಲ್ಲಾಗಲೇ ಈ ಬಹಿಷ್ಕಾರ ಮತ್ತು ಸ್ವದೇಶಿ ಚಳವಳಿ ಅಖಿಲ ಭಾರತ ಸ್ವರೂಪವನ್ನು ತಾಳಿತ್ತು. ಉತ್ತರದ ಸಂಯುಕ್ತ ಪ್ರಾಂತಗಳಲ್ಲಿನ ೨೩ ಜಿಲ್ಲೆಗಳಿಂದ, ಮಧ್ಯಪ್ರಾಂತಗಳ ೧೫ ಊರುಗಳಿಂದ, ಬೊಂಬಾಯಿ ಪ್ರಾಂತದ ೨೪ ಊರುಗಳಿಂದ, ಪಂಜಾಬಿನ ೨೦ ಜಿಲ್ಲೆಗಳಿಂದ, ಮದ್ರಾಸ್ ಪ್ರಾಂತದ ೧೩ ಜಿಲ್ಲೆಗಳಿಂದ ಬಂದ ವರದಿಗಳು ಈ ಚಳವಳಿ ಪ್ರಗತಿಯಾಗುತ್ತಿದ್ದುದನ್ನು ತಿಳಿಸಿದ್ದವು. ಬೊಂಬಾಯಿ ಪ್ರಾಂತದಲ್ಲಿ ಚಳವಳಿಗೆ ವಿಶೇಷ ಯಶಸ್ಸು ದೊರಕಿತು. ಸ್ಥಳೀಯ ಸ್ವದೇಶಿ ವಸ್ತುಗಳಿಗೆ ಬೇಡಿಕೆ ಹೆಚ್ಚಾಯಿತು. ಇದರಿಂದ ಪ್ರೋತ್ಸಾಹಗೊಂಡ ಬೊಂಬಾಯಿ ಮತ್ತು ಅಹಮದಾಬಾದಿನ ಬಟ್ಟೆ

ಗಿರಣಿಗಳು ಉತ್ಪಾದನೆ ಹೆಚ್ಚಿಸಿದವು. ಕಲ್ಕತ್ತೆಯ ವ್ಯಾಪಾರಿಗಳಿಗೆ ೧೯೦೫ರ ಆಗಸ್ಟ್-ಸೆಪ್ಟೆಂಬರ್ ಮಾಹೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಬೇಲುಗಳನ್ನು ಈ ಗಿರಣಿಗಳು ಮಾರಿದವು. ಈ ಮಾರಾಟ ಆರು ತಿಂಗಳಿಗಾಗುವಂತಿತ್ತು. ಧರ್ಮದ ಹೆಸರಿನಲ್ಲಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಎಂದು ಸಾರುವ ಭಿತ್ತಿಪತ್ರಗಳನ್ನು ಮರಾಠಿ ಭಾಷೆಯಲ್ಲಿ ಅಚ್ಚುಮಾಡಿ ಪೂನಾದ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಲಾಗಿತ್ತು. ಪುರಿಯಲ್ಲಿ ನಡೆದ ಸಾಧುಗಳ ಸಮ್ಮೇಳನದಲ್ಲಿ ಒಂದು ನೂರು ಜನ ಸಂಚಾರಿ ಸಾಧುಗಳು ಇಡೀ ಭಾರತದಲ್ಲಿ ಸ್ವದೇಶಿ ತತ್ವವನ್ನು ಪ್ರಚಾರ ಮಾಡಲು ಸಂಕಲ್ಪಿಸಿದರು.[೬]

ಸ್ವದೇಶಿ ಚಳವಳಿ ಭಾರತೀಯ ರಾಷ್ಟ್ರೀಯ ಚಳವಳಿಯಾಗಿ ಪರಿವರ್ತಿತವಾಗಿ ಮುಂದೆ ರಾಷ್ಟ್ರೀಯ ಸ್ವಾತಂತ್ರ್ಯದ ಮಹಾಸಂಗ್ರಾಮದಲ್ಲಿ ಲೀನವಾದುದು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಸಂಭವಿಸಿದ ಭಾರತ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಗಳಲ್ಲೊಂದು. ರಾಷ್ಟ್ರೀಯತೆಯ ಉಗಮ ಮತ್ತು ಅದರ ಬೆಳವಣಿಗೆ ತಿಲಕರು, ಅರವಿಂದರು, ಲಜಪತರಾಯ್ ಮತ್ತು ಬಿಪಿನ್ ಚಂದ್ರಪಾಲರಂತವರ ನೇತೃತ್ವದಲ್ಲಿ ನಡೆಯಿತು. ಸ್ವದೇಶಿ ಚಳವಳಿ ಮತ್ತು ರಾಷ್ಟ್ರೀಯತೆಗಳ ಕ್ರಿಯೆ-ಪ್ರತಿಕ್ರಿಯೆಗಳು ಪರಸ್ಪರ ಸ್ಪಂದಿಸಿ ಒಂದರ ಮೇಲೆ ಮತ್ತೊಂದು ಪ್ರಭಾವ ಬೀರಿ ಅವುಗಳ ವಲಯಗಳನ್ನು ವಿಸ್ತರಿಸಿತು. ಹೊಚ್ಚಹೊಸದಾಗಿ ಜಾಗೃತಗೊಂಡ ರಾಷ್ಟ್ರೀಯ ಭಾವನೆಯಿಂದಲ್ಲದೆ ಬಹಿಷ್ಕಾರ ಮತ್ತು ಸ್ವದೇಶಿ ಚಳವಳಿಗಳು ಇಷ್ಟು ಪ್ರಬಲವಾಗಿ ಬೆಳೆಯಲಾಗುತ್ತಿರಲಿಲ್ಲ. ಆದರೆ ಸ್ವದೇಶಿ ಚಳವಳಿಯಿಂದಲೇ ರಾಷ್ಟ್ರೀಯತೆ ಕೇವಲ ತತ್ವಜಿಜ್ಞಾಸೆ ಮತ್ತು ಭಾವನಾತ್ಮಕ ಕ್ಷೇತ್ರಗಳನ್ನು ಮೀರಿ ವ್ಯಾವಹಾರಿಕ ರಾಜಕೀಯ ಕ್ರಿಯೆಯಾಗಿ ಬೆಳೆದು ಇಡೀ ಭಾರತವನ್ನೇ ವ್ಯಾಪಿಸಿತು ಎನ್ನುವುದೂ ಅಷ್ಟೇ ಸತ್ಯವಾದುದು. ಒಂದು ಕ್ರಾಂತಿಯ ಸಮಯದಲ್ಲಿ ಜೀವನ ವೇಗವಾಗಿ ಮುಂದೆ ಸಾಗುತ್ತದೆ. ಹತ್ತು ವರ್ಷಗಳಲ್ಲಾಗುವ ಬದಲಾವಣೆ ಸಾಧಾರಣ ಸಮಯದಲ್ಲಿ ನೂರುವರ್ಷಗಳನ್ನೇ ತೆಗೆದುಕೊಂಡಿತು. ಸ್ವದೇಶಿ ಚಳವಳಿಯಿಂದ ಈ ಪವಾಡ ಸಂಭವಿಸಿತ್ತು. ೧೯೦೬ ರಿಂದ ೧೯೧೬ರ ಈ ದಶಕದಲ್ಲಿ ಭಾರತ ೧೮೦೫ ರಿಂದ ೧೯೦೫ರ ನಡುವಿನ ಶತಮಾನಕ್ಕಿಂತಲೂ ಹೆಚ್ಚು ದೂರ ತನ್ನ ಆಕಾಂಕ್ಷಿತ ಗುರಿಯೆಡೆಗೆ ಸಾಗಿತ್ತು.[೭] ೧೯೦೬ ರಲ್ಲಿ ತಿಲಕರು ಕರ್ನಾಟಕಕ್ಕೆ ಬಂದು ಪ್ರಥಮವಾಗಿ ಬೆಳಗಾವಿಗೆ ಭೇಟಿ ಇತ್ತು ಸ್ವರಾಜ್ಯದ ಬಗ್ಗೆ ಭಾಷಣ ಮಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು. ತಿಲಕರ ಸಂದೇಶವೆಂದರೆ ಸ್ವರಾಜ್ಯ ಹಾಗೂ ಸ್ವದೇಶಿ ಚಳವಳಿ ಮಾತ್ರ ಪರಕೀಯರ ಆಳ್ವಿಕೆಯಿಂದ ದೇಶವನ್ನು ರಕ್ಷಿಸಬಹುದು ಎಂಬುದಾಗಿತ್ತು.

ತಿಲಕರ ಭಾಷಣಗಳ ಪರಿಣಾಮವಾಗಿ ವಿದೇಶಿ ವಸ್ತುಗಳನ್ನು ಅಗ್ನಿಯಲ್ಲಿ ಸುಡುವ ಕಾರ್ಯಕ್ರಮ ನಡೆಯಿತು. ಇದೇ ರೀತಿಯಾಗಿ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಸ್ವದೇಶಿ ಚಳವಳಿ ಉಗ್ರ ಸ್ವರೂಪವನ್ನು ಪಡೆದುಕೊಂಡಿತ್ತು. ದಾವಣಗೆರೆ ಮತ್ತು ರಾಣೆಬೆನ್ನೂರಿನಲ್ಲಿ ವಿದೇಶಿ ವಸ್ತುಗಳನ್ನು ಸುಡಲಾಯಿತು. ವಿದೇಶಿ ಸಕ್ಕರೆಯನ್ನು ಬಳಸಿಕೊಳ್ಳುವುದಿಲ್ಲವೆಂದು ಧಾರವಾಡದಲ್ಲಿ ಜನರು ಪ್ರತಿಜ್ಞೆ ಮಾಡಿದರು. ಗಂಗಾಧರರಾವ್ ದೇಶಪಾಂಡೆಯವರೂ ಸಹ ಕಾಂಗ್ರೆಸ್ ಸೇರಿ ಜನರು ತಮ್ಮ ವಿದೇಶಿ

ಬಟ್ಟೆಗಳನ್ನು ಬೆಂಕಿಗೆ ಆಹುತಿ ಮಾಡಬೇಕೆಂದು ಪ್ರೋತ್ಸಾಹಿಸಿದರು. ಆರ್.ಎಸ್. ಹುಕ್ಕೇರಿಕರ್ ಅಂಥವರು ತಾವು ತೊಟ್ಟಿದ್ದ ಬಟ್ಟೆ ವಿದೇಶಿ ಬಟ್ಟೆಯೇ ಇಲ್ಲವೇ ಎಂಬುದನ್ನು ನೋಡದೆಯೇ ಕಳಚಿ ಬೆಂಕಿಗೆ ಹಾಕಿದರು. ವಿದೇಶಿ ವಸ್ತುಗಳನ್ನು ತಿರಸ್ಕರಿಸಬೇಕೆಂಬ ತೀರ್ಮಾನದಲ್ಲಿ ವಿದೇಶಿ ಔಷಧಗಳೂ ತ್ಯಾಜ್ಯವಾದದ್ದು ಪ್ರಮುಖ ಸಂಗತಿ. ಸ್ವದೇಶಿ ಚಳವಳಿಯನ್ನು ಸಂಪೂರ್ಣವಾಗಿ ನಡೆಸಿದ ಉದಾಹರಣೆಗಳು ಅನೇಕ ನಡೆದವು. ಬೆಂಕಿಕಡ್ಡಿ, ಪಾತ್ರೆ ಸಾಮಾನುಗಳನ್ನು, ವಸ್ತ್ರ, ಪೆನ್ಸಿಲ್‌ಗಳನ್ನು ತಯಾರಿಸುವಂಥ ಅನೇಕ ಗಿರಣಿಗಳು ಸ್ಥಾಪನೆ ಆಗಿ ಅವು ಮುಂದೆ ನೆಲಕಚ್ಚಿದವು. ಗಿರಣಿಗಳು ನಷ್ಟ ಅನುಭವಿಸಲು ತಂತ್ರಜ್ಞಾನದ ಅರಿವಿನ ಕೊರತೆಯೊಂದೇ ಕಾರಣವಲ್ಲ. ಬದಲಾಗಿ ವಾಣಿಜ್ಯ ಸನ್ನಿವೇಶಗಳಲ್ಲಿ ಆ ಜ್ಞಾನವನ್ನು ಅಳವಡಿಸಲು ಆಗದಂಥ ಅಸಾಮರ್ಥ್ಯ ಎನ್ನಬೇಕು. ಸ್ವದೇಶಿ ಭಾವನೆಯಲ್ಲಿ ಬ್ಯಾಂಕುಗಳು ಹಿಂದೆ ಬೀಳಲಿಲ್ಲ. ೨೦ನೇ ಶತಮಾನದ ಪ್ರಾರಂಭದಲ್ಲಿ ದೇಶದಾದ್ಯಂತ ಸ್ವದೇಶಿಯತೆ ಹಬ್ಬುವಂಥ ಸಂದರ್ಭದಲ್ಲಿ ದಕ್ಷಿಣದಲ್ಲಿ ಆಧುನಿಕ ಮಾದರಿಯಲ್ಲಿ ಬ್ಯಾಂಕುಗಳು ಕಾರ್ಯ ಕೈಗೊಂಡವು. ರಾಜ್ಯದ ಇತರೆ ಭಾಗಗಳಲ್ಲಿ ದೇಶಿಯವಾದ ಪ್ರಯತ್ನಗಳಿಂದ ಕೈಗಾರಿಕೆಗಳ ಸ್ಥಾಪನೆ ವಿಚಾರ ಮಹತ್ವ ಪಡೆದಿರುವಾಗ ಜಂಟಿಸ್ಟಾಕ್ ಆಧಾರದ ಮೇಲೆ ಉಡುಪಿಯಲ್ಲಿ ಬ್ಯಾಂಕೊಂದನ್ನು ಸ್ಥಾಪಿಸಲು ಗೆಳೆಯರು ಹಲವರು ಕೂಡಿ ಯೋಚಿಸಿದರು. ಇದರ ಫಲವಾಗಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಷನ್ ನಿಯಮಿತ ೧೯೦೬ರ ಮೇ ತಿಂಗಳಲ್ಲಿ ಪ್ರಾರಂಭವಾಯಿತು.

ಕರ್ನಾಟಕದಲ್ಲಿ ಸ್ವದೇಶಿ ಚಳವಳಿಯ ನಾಯಕರಲ್ಲಿ ಪ್ರಮುಖರಾದವರೆಂದರೆ ಆಲೂರು ವೆಂಕಟರಾಯರು. ಇವರು ತಿಲಕ ಹಾಗೂ ಗೋಖಲೆಯವರಿಂದ ನೇರವಾಗಿ ಕಲಿತಿದ್ದರು. ಬ್ರಿಟಿಷರನ್ನು ವಿರೋಧಿಸಿ ತಿಲಕರು ಪ್ರಚಾರ ಮಾಡುತ್ತಿರುವಾಗ ಆಲೂರು ವೆಂಕಟರಾಯರಿಗೆ ಸ್ಫೂರ್ತಿ ದೊರೆಯಿತು. ಡಾ. ಎನ್.ಎಸ್. ಹರ್ಡೀಕರ್ ಸ್ವದೇಶಿ ಚಳವಳಿಯಲ್ಲಿ ದುಡಿಯುತ್ತಿದ್ದ ಕರ್ನಾಟಕದ ಇನ್ನೊಬ್ಬ ಧೀಮಂತ ನಾಯಕ. ಮರಾಠಿ ಭಾಷೆ ಚೆನ್ನಾಗಿ ತಿಳಿದಿದ್ದು 'ಕೇಸರಿ' ಪತ್ರಿಕೆಯನ್ನು ತಪ್ಪದೇ ಓದುತ್ತಿದ್ದ ಇವರು ತಿಲಕರಿಂದ ಬಹಳವಾಗಿ ಪ್ರಭಾವಿತರಾಗಿದ್ದರು. 'ಕೇಸರಿ' ಪತ್ರಿಕೆಯ ಮೂಲಕ ಹರ್ಡೀಕರರವರು ಸ್ವದೇಶಿ ಮಹತ್ವವನ್ನು ಅರಿತವರಾಗಿ ಪರಕೀಯರ ಆಳ್ವಿಕೆಯಿಂದ ಭಾರತವನ್ನು ಬಿಡುಗಡೆ ಮಾಡಲು ಬಹಳ ಶ್ರಮಪಟ್ಟರು. ಗಂಗಾಧರರಾವ್ ದೇಶಪಾಂಡೆ ಅವರು ವಿದೇಶಿ ವಸ್ತುಗಳ ನಿಷೇಧ, ಸ್ವದೇಶಿ ಪದಾರ್ಥಗಳ ಉತ್ತೇಜನ ಹಾಗೂ ರಾಷ್ಟ್ರೀಯ ಶಿಕ್ಷಣಕ್ಕೆ ಬೆಂಬಲ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇವರು ಸ್ಥಳೀಯ ಶಾಲೆ ಸಮಿತಿಯ ಅಧ್ಯಕ್ಷ ರಾದಾಗ ತಮ್ಮ ಸ್ಥಾನವನ್ನು ಉಪಯೋಗಿಸಿಕೊಂಡು ಉಪಾಧ್ಯಾಯರಿಗೆ ಸ್ವದೇಶಿ ಚಳವಳಿಯ ಬಗ್ಗೆ ತಿಳಿಯಹೇಳಿದರು. ಉಪಾಧ್ಯಾಯರು ತಮ್ಮ ಶಿಷ್ಯರಿಗೆ ಚಳವಳಿಯ ಮಹತ್ವವನ್ನು ತಿಳಿಸಿದರು. ಈ ರೀತಿಯಾಗಿ ಸ್ವದೇಶಿ ಚಳವಳಿಯು ಇಡೀ ಭಾರತವನ್ನು ವ್ಯಾಪಿಸಿತು. ಪ್ರಥಮವಾಗಿ ಬಂಗಾಳದಿಂದ ಆರಂಭವಾಗಿ ಸ್ವದೇಶಿ ಚಳವಳಿ ಭಾರತದ ತುಂಬೆಲ್ಲ ಹರಡಿತು. ಇದನ್ನು ನಾವು ಪ್ರಥಮ ಹಂತ ಎಂದು ಕರೆಯಬಹುದು.[೮]

ತೃತೀಯ ಹಂತದಲ್ಲಿ ಮಹಾತ್ಮಗಾಂಧೀಜಿಯವರ ಪ್ರವೇಶದಿಂದ ಸ್ವದೇಶಿ ಚಳುವಳಿಯು ಇನ್ನಷ್ಟು ಪ್ರಚಾರವನ್ನು ಪಡೆದುಕೊಂಡು ಮುಂದುವರಿಯಿತು. ದಕ್ಷಿಣ ಆಫ್ರಿಕದಲ್ಲಿ ಯಶಸ್ವಿ ಹೋರಾಟ ನಡೆಸಿದ ಗಾಂಧೀಜಿ ೧೯೧೪ರಲ್ಲಿ ಭಾರತಕ್ಕೆ ಮರಳಿದರು. ಮೊಟ್ಟಮೊದಲ ಬಾರಿ ನಡೆಸಿದ ಸತ್ಯಾಗ್ರಹದಿಂದ ಅವರ ಕೀರ್ತಿ ವಿಶ್ವವ್ಯಾಪಿಯಾಗಿ ಬೆಳೆಯಿತು. ಭಾರತದಲ್ಲಿ ಎಲ್ಲೆಲ್ಲೂ ಅವರಿಗೆ ಭವ್ಯಸ್ವಾಗತ ಕಾದಿತ್ತು. ೧೯೧೫ರಲ್ಲಿ ಅವರು ಮದರಾಸಿಗೆ, ಅನಂತರ ಬೆಂಗಳೂರಿಗೆ ಬಂದರು. ನಗರವನ್ನು ಬಣ್ಣಬಣ್ಣದ ಪತಾಕೆಗಳಿಂದ ಶೃಂಗರಿಸಲಾಗಿತ್ತು. ಸಿಟಿ ರೈಲು ನಿಲ್ದಾಣದ ಬಳಿ ಜೋಡಿ ಕುದುರೆ ಕಟ್ಟಿದ್ದ ಸಾರೋಟು ಅತಿಥಿಗಳನ್ನು ಮೆರವಣಿಗೆಯಲ್ಲಿ ಒಯ್ಯಲು ಸಿದ್ಧವಾಗಿ ನಿಂತಿತ್ತು. ಬ್ಯಾಂಡ್ ವಾದ್ಯ ಏರ್ಪಡಿಸಲಾಗಿತ್ತು. ಮದರಾಸಿನಲ್ಲಿ ಇದೇ ರೀತಿ ಭವ್ಯ ಸ್ವಾಗತದ ವ್ಯವಸ್ಥೆ ಮಾಡಲಾಗಿತ್ತು. ಸ್ವದೇಶಿಪ್ರಿಯ ಗಾಂಧೀಜಿ ಪರದೇಶಿ ವಸ್ತ್ರದ ಪತಾಕೆಗಳ ಶೃಂಗಾರ, ವಿದೇಶಿ ಬ್ಯಾಂಡು ವಾದ್ಯದ ಏರ್ಪಾಡು ಇವುಗಳನ್ನು ಕಠಿಣವಾಗಿ ಟೀಕಿಸಿದರು. ಬೆಂಗಳೂರಿನ ಸ್ವಾಗತ ಸಮಿತಿಯ ಸದಸ್ಯರಿಗೆ ಈ ವಿಷಯ ತಿಳಿಯಿತು. ರಾತ್ರೋರಾತ್ರಿ ಪರದೇಶಿ ಪತಾಕೆಗಳನ್ನು ತೆಗೆಸಿದರು. ಬಾಳೆಯ ಕಂಬ, ಮಾವಿನ ತೋರಣ ಕಂಗೊಳಿಸಿತು. ವಿದೇಶಿ ಬ್ಯಾಂಡ್ ಕರ್ಣಕಠೋರವಾಗಿ ಕರ್ಕಶ ಶಬ್ದ ಮಾಡಲಿಲ್ಲ. ಸುಶ್ರಾವ್ಯ ನಾಗಸ್ವರ ಇಂಪಾಗಿ ಮೊಳಗಿತು. ಗಾಂಧೀ ದಂಪತಿಗಳು ಸಾರೋಟದಲ್ಲಿ ಕೂಡಲು ಒಪ್ಪಲಿಲ್ಲ. ಬಿಡಾರಕ್ಕೆ ನಡೆಯುತ್ತಲೇ ಬಂದರು. ಬಂಗಲೆಯ ಬಾಗಿಲ ಹೊರಗೆ ಸುಮಂಗಲಿಯರು ಆರತಿ ಬೆಳಗಿ, ಹಾಡಿ, ಹರಸಿ ಬರಮಾಡಿಕೊಂಡರು. ಅಲ್ಲಿಂದ ಮೊದಲಾಯಿತು ನಾಗಸ್ವರಕ್ಕೆ ಮನ್ನಣೆ. ಪತಾಕೆಗಳು ಸ್ವದೇಶಿ ಆದುವು. ತಳಿರುತೋರಣಗಳ, ಪುಷ್ಪಗಳ ಅಲಂಕಾರ ಸಾರ್ವತ್ರಿಕವಾಯಿತು. ಎಲ್ಲವೂ ಗಾಂಧೀಜಿ ಪ್ರಭಾವ. ಆಚರಣೆಯಲ್ಲೂ ಸ್ವದೇಶಿ, ವಿದೇಶಿಯ ಅಂಧ ಅನುಕರಣೆ ಅನವಶ್ಯಕ, ತಿರಸ್ಕೃತ ಈ ರೀತಿಯಾಗಿ ದೇಶದ ತುಂಬ ಸಂಚಾರಿಸಿ ಸ್ವದೇಶಿಯ ಬಗ್ಗೆ ಪ್ರಚಾರ ಕೈಗೊಂಡರು. ಕರ್ನಾಟಕದಲ್ಲಿ ೧೯೨೪ರಲ್ಲಿ ಬೆಳಗಾವಿಯಲ್ಲಿ ಭಾರತೀಯ ಕಾಂಗ್ರೆಸ್ಸಿನ ವಾರ್ಷಿಕ ಮಹಾಸಮ್ಮೇಳನ ಅದ್ದೂರಿಯಾಗಿ ನಡೆಯಿತು. ಈ ಸಭೆಗೆ ಮಹಾತ್ಮಗಾಂಧಿಯವರೇ ಅಧ್ಯಕ್ಷರು. ಇದೊಂದೇ ಅಧಿವೇಶನಕ್ಕೆ ಅವರು ಅಧ್ಯಕ್ಷರಾಗಿದ್ದುದು. ತಾತ್ಕಾಲಿಕ ಕಾಂಗ್ರೆಸ್ ನಗರ ವಿಜಯನಗರ ಆಗಿತ್ತು. ನೀರಿಗಾಗಿ ಅಗೆದಿದ್ದ ಸರೋವರ ಪಂಪಾಸರೋವರ ಆಗಿತ್ತು. ಖಾದಿಯಿಂದ ನಿರ್ಮಿತವಾಗಿದ್ದ ಗಾಂಧೀ ಕುಟೀರ ವಿದ್ಯಾರಣ್ಯ ಆಶ್ರಮ ಆಗಿತ್ತು. ಎಲ್ಲ ಅಲಂಕಾರಗಳು ಖಾದಿಮಯ. ಕರ್ನಾಟಕದ ಗತವೈಭವ ಹೆಜ್ಜೆ ಹೆಜ್ಜೆಗೂ ಸ್ಮರಿಸಿಕೊಳ್ಳುವಂತೆ ಆಗಿತ್ತು. ಸ್ವದೇಶಿ ಮನೋಭಾವ ಉಕ್ಕಿ ಹರಿಯುವಂತೆ ಮಾಡಿತ್ತು ಗಾಂಧೀ ಪ್ರಭಾವ.

ಗಾಂಧಿಯವರ ಪ್ರಭಾವ ಸಮುದ್ರದಾಚೆಯ ರಾಷ್ಟ್ರಗಳಿಗೂ ಪಸರಿಸಿತ್ತು. ಆ ಕಾಲಕ್ಕೆ ನಾರಾಯಣ ಸುಬ್ಬರಾವ್ ಹರ್ಡೇಕರ್ ಮತ್ತು ಕೆಲವು ಕನ್ನಡಿಗರು ಉಚ್ಚ ಶಿಕ್ಷಣದಲ್ಲಿ ತೊಡಗಿದ್ದರು. ಭಾರತದಲ್ಲಿ ಗಾಂಧೀಜಿ ನಡೆಸುತ್ತಿದ್ದ ಚಳವಳಿ ಸೂಜಿಗಲ್ಲು ಕಬ್ಬಿಣವನ್ನು ಸೆಳೆಯುವಂತೆ ಹರ್ಡೇಕರರನ್ನು ಅಮೆರಿಕದಿಂದ ಭಾರತಕ್ಕೆ ಸೆಳೆಯಿತು. ಇವರು ಬಂದ ಮೇಲೆ ಮಹಾತ್ಮರ ಅನುಯಾಯಿಯಾದರು.

ಶಿಸ್ತು ಸದಾಕಾಲಕ್ಕೂ ಅಗತ್ಯ. ಕಾಂಗ್ರೆಸ್ ಅಧಿವೇಶನದಲ್ಲಿ ಅಶಿಸ್ತು, ಅನಾರೋಗ್ಯ ಪರಿಸ್ಥಿತಿ ಎದ್ದು ಕಾಣಿಸುತ್ತಿತ್ತು. ಗಾಂಧೀಜಿ ಸ್ವತಃ ಸ್ವಯಂಸೇವಕರಾಗಿ ಕಸ ಗುಡಿಸಿದರು, ಪಾಯಿಖಾನೆ ತೊಳೆದರು. ಹರ್ಡೀಕರ್ ಇದನ್ನೆಲ್ಲ ಗ್ರಹಿಸಿದರು. ಶಿಸ್ತಿನ ಸ್ವಯಂಸೇವಕರನ್ನು ಸಿದ್ಧಗೊಳಿಸಲು 'ಹಿಂದೂಸ್ತಾನಿ ಸೇವಾದಳ' ಸ್ಥಾಪಿಸಿದರು. ಕರ್ನಾಟಕದಲ್ಲಿ ನೂರಾರು ತರುಣರು ಹಿಂದೂಸ್ತಾನಿ ಸೇವಾದಳದ ಶಿಕ್ಷಣ ಪಡೆದು ಶಿಸ್ತಿನ ಸ್ವಯಂಸೇವಕರಾದರು. ಈ ಹಿಂದೂಸ್ತಾನಿ ಸೇವಾದಳದಲ್ಲಿ ದಾವಣಗೆರೆ ಜಿಲ್ಲೆಯಿಂದ ಅನೇಕ ಪ್ರತಿನಿಧಿಗಳು ಭಾಗವಹಿಸಿದ್ದರು. ಉತ್ತಮ ಶಿಕ್ಷಣ ಪಡೆದವರು ಭಾರತದ ನಾನಾ ಭಾಗಗಳಿಗೆ ಹೋಗಿ ಸ್ವದೇಶಿ ಮತ್ತು ಸೇವಾದಳದ ಶಿಕ್ಷಣ ಕೊಟ್ಟರು.[೯] ಕರ್ನಾಟಕದ ಜನರ ಮನಸ್ಸಿನಲ್ಲಿ ಈ ಬಗೆಯ ಪ್ರಯತ್ನಗಳಿಂದ ಸ್ವದೇಶಿ ಚಳವಳಿಯು ನೆಲೆಯೂರಲು ಸಾಧ್ಯವಾಯಿತು. ಮಹಾತ್ಮ ಗಾಂಧಿಯವರು ಭಾರತವನ್ನು ಸ್ವಲ್ಪ ಸ್ವಲ್ಪವಾಗಿ ಸ್ವಾತಂತ್ರ್ಯದ ಕಡೆಗೆ ತೆಗೆದುಕೊಂಡು ಹೋದರು. ಸ್ವದೇಶಿ ಬಗ್ಗೆ ಪ್ರೇಮ ಹಾಗೂ ರಾಷ್ಟ್ರಪ್ರೇಮದ ಮಹತ್ವವನ್ನು ಗಾಂಧೀಜಿಯವರು ಜನರಿಗೆ ಮನವರಿಕೆ ಮಾಡಿಕೊಡುವ ಮೂಲಕ ವಿದೇಶಿಯರ ಆಳ್ವಿಕೆಯಲ್ಲಿ ತಟಸ್ಥರಾಗಿ ಇದ್ದು ಬಿಡುವ ಪ್ರವೃತ್ತಿಯನ್ನು ಖಂಡಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲ ಭಾಗದ ಜನರೂ ಭಾಗವಹಿಸಬೇಕೆಂದು ಗಾಂಧೀಜಿ ಕರೆಕೊಟ್ಟರು.

ಗಾಂಧೀಜಿಯವರ ಕರೆಗೆ ಕರ್ನಾಟಕದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಉತ್ತಮ ಪ್ರತಿಸ್ಪಂದನೆ ದೊರಕಿತು. ಸ್ವದೇಶಿ ಚಳವಳಿಯ ಸಂಕೇತವಾದ ಖದ್ದರ್ ಕರ್ನಾಟಕದಲ್ಲಿ ಪ್ರಾರಂಭದಿಂದಲೂ ಕಾಣಿಸಿಕೊಂಡಿತು. ಖಾದಿ ಆಂದೋಲನದ ಪರಿಣಾಮವಾಗಿ ವಿದೇಶಿ ವಸ್ತುಗಳನ್ನು ಕರ್ನಾಟಕದ ಎಲ್ಲ ಕಡೆ ಬಹಿರಂಗವಾಗಿ ಸುಡಲಾಯಿತು. ಹರ್ಡೀಕರ್ ಮಂಜಪ್ಪನವರು ಗಾಂಧೀಜಿಯವರ ಕಟ್ಟ ಅನುಯಾಯಿಯಾಗಿದ್ದರಲ್ಲದೆ ಅವರನ್ನು 'ಕರ್ನಾಟಕದ ಗಾಂಧಿ' ಎಂದು ಕೂಡ ಕರೆಯಲಾಗುತ್ತಿತ್ತು. ಹರ್ಡೀಕರರ ಅಧ್ಯಕ್ಷತೆಯಲ್ಲಿ ಮೊಟ್ಟಮೊದಲು ಕರ್ನಾಟಕ ಖಾದಿ ಸಮ್ಮೇಳನವು ಧಾರವಾಡದಲ್ಲಿ ನಡೆಯಿತು. ಹುಕ್ಕೇರಿಕರ್, ಎಚ್.ಆರ್. ವೆಂಕಟ ರಾಮಯ್ಯ ಹಾಗೂ ಜಾಲಿಹಾಳ್ ಅನಂತರಾಂವ್ ಅವರ ಸಂಯುಕ್ತ ಪ್ರಯತ್ನದ ಫಲವಾಗಿ ೧೯೩೦ರ ದಶಕದಲ್ಲಿ ಅಖಿಲ ಕರ್ನಾಟಕ ಸ್ವದೇಶಿ ಸಭಾ ಪ್ರಾರಂಭವಾಯಿತು. ವಿದೇಶಿ ವಸ್ತುಗಳ ಮಾರಾಟದ ವಿರುದ್ಧ ಮುಷ್ಕರ ಹೂಡಿ ವ್ಯಾಪಾರಿಗಳ ಸಂಘಟನೆಗಳು ಪ್ರತಿಭಟನೆ ವ್ಯಕ್ತಪಡಿಸಿದವು. ಕಾರವಾರ, ದಾವಣಗೆರೆ, ಕೊಟ್ಟೂರು, ಕುಂದಾಪುರ ಹಾಗೂ ಮಂಗಳೂರು ಇವು ಸ್ವದೇಶಿ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದವು. ವಿದೇಶಿ ವಸ್ತು ನಿರಾಕರಣೆಯಲ್ಲಿ ಹೆಂಗಸರೂ ಸಹ ಮನೆಮನೆಗೆ ಹೋಗಿ ಅವುಗಳನ್ನು ಕಲೆಹಾಕಿ ಬೆಂಕಿಯಲ್ಲಿ ಸುಡುವ ಕಾರ್ಯದಲ್ಲಿ ತೊಡಗಿದರು.[೧೦] ಮಹಾತ್ಮಗಾಂಧೀಜಿಯವರ ಸೂತ್ರ ಸ್ವದೇಶಿ. ಅವರು ಅದನ್ನು ಹೀಗೆ ವಿವರಿಸಿದರು: "ಅದು ನಮ್ಮ ಅಂತರಂಗದಲ್ಲಿರುವ ಒಂದು ಭಾವನೆ. ದೂರದ್ದನ್ನು ಬಿಟ್ಟು, ನಮ್ಮ ಹತ್ತಿರದ ಸುತ್ತುಮುತ್ತಲಿನ ಉಪಯೋಗ ಮತ್ತು ಅದರ ಸೇವೆಗೆ ನಮ್ಮನ್ನು ಮಿತಗೊಳಿಸುವ ಭಾವನೆ" ಎಂದೇ ಅವರು ದೈಹಿಕಶ್ರಮಕ್ಕೆ ಹೆಚ್ಚು

ಮಹತ್ವ ಕೊಟ್ಟಿರು. ಅದನ್ನು ಅವರು "ಅನ್ನದ ದುಡಿಮೆ ಮತ್ತು ಚರಕಾ" ಎಂದು ಕರೆದರು. ಮಹಾತ್ಮಗಾಂಧೀಜಿಯವರು ಕರ್ನಾಟಕದಲ್ಲಿ ಪ್ರವಾಸ ಕೈಗೊಂಡಾಗ ದಾವಣಗೆರೆ ಜಿಲ್ಲೆಗೆ ಭೇಟಿ ಕೊಟ್ಟರು. ಇವರು ಸ್ವದೇಶಿಯ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡಿಸಿದರು. ಗಾಂಧೀಜಿಯವರು ದಾವಣಗೆರೆಗೆ ಪ್ರಪ್ರಥಮವಾಗಿ ೧೯೨೭ರಲ್ಲಿ ಬಂದರು. ಇವರು ಬಂದು ಹೋದ ಮೇಲೆ ಜನರಲ್ಲಿ ಸ್ವಾತಂತ್ರ್ಯದ ಕಲ್ಪನೆಯು ಮೂಡಿಬಂತು.

ಗಾಂಧೀಜಿಯವರ ಪ್ರಭಾವದಿಂದ ದಾವಣಗೆರೆ ಜಿಲ್ಲೆಯಲ್ಲಿ ವಿವಿಧ ಚಳವಳಿಗಳು ಪ್ರಾರಂಭವಾದವು. ಅದರಲ್ಲಿ ಮುಖ್ಯವಾಗಿ ಸ್ವದೇಶಿ ಚಳವಳಿಯು ದಾವಣಗೆರೆಯಲ್ಲಿ ಯಶಸ್ವಿಯಾಯಿತು. ೧೯೩೧ರಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರು ಬ್ರಿಟಿಷರ ದಬ್ಬಾಳಿಕೆಯನ್ನು ಕರ್ನಾಟಕದ ಜನತೆಗೆ ತಿಳಿಸಲು ಚಿತ್ರದುರ್ಗಕ್ಕೆ ಬಂದರು. ಆಗ ದಾವಣಗೆರೆಯಲ್ಲಿಯೇ ಭಾರತೀಯ ರಾಷ್ಟ್ರೀಯತೆ ಎನ್ನುವ ಕಿರುಹೊತ್ತಿಗೆಯನ್ನು ಪ್ರಕಟಿಸಿದರು. ೧೯೩೨ರಲ್ಲಿ ಕಾನೂನುಭಂಗ ಚಳವಳಿಗೆ ದಾವಣಗೆರೆಯ ಖಾದಿಕೇಂದ್ರವು ಎಲ್ಲ ಸ್ವಾತಂತ್ರ್ಯ ಹೋರಾಟದ ರಾಜಕೀಯ ಚಟುವಟಿಕೆಗಳಿಗಾಗಿ ಪ್ರಮುಖ ಸ್ಥಳವಾಗಿತ್ತು. ಈಗಿನ ಬಿ.ಟಿ.ಗಲ್ಲಿಯ ಕೊನೆಯಲ್ಲಿ ಎಲ್ಲ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು. ೧೯೩೨ರಲ್ಲಿ ನಡೆದ ಸ್ವದೇಶಿ ಚಳವಳಿಯಲ್ಲಿ ಖಾದಿಕೇಂದ್ರದ ಕಾರ್ಯಕರ್ತರು ದಾವಣಗೆರೆಯ ಪ್ರತಿ ಅಂಗಡಿಯ ಮುಂದೆಯೂ ವಿದೇಶಿ ವಸ್ತುಗಳ ವಿರುದ್ಧ ಚಳವಳಿ ನಡೆಸಿ ಯಶಸ್ವಿಯಾದರು. ೧೯೩೨ರ ಮಾರ್ಚ್ ತಿಂಗಳಿನ ಹೋಳಿಹಬ್ಬದ ದಿನ ದಾವಣಗೆರೆಯಲ್ಲಿ ವಿದೇಶಿ ವಸ್ತುಗಳ ದಹನ ಕಾರ್ಯ ನಡೆಯಿತು.[೨] ಮಹಾತ್ಮ ಗಾಂಧೀಜಿಯವರು ದಾವಣಗೆರೆಗೆ ಎರಡನೆ ಸಾರಿ ಬಂದದ್ದು ೦೨.೦೩.೧೯೩೪ ರಲ್ಲಿ. ಇದು ಅಲ್ಲಿನ ರಾಜಕೀಯ ಚಳವಳಿಯಲ್ಲಿಯ ಒಂದು ಪ್ರಮುಖ ಘಟನೆ. ರೈಲು ನಿಲ್ದಾಣದಿಂದ ಇವರನ್ನು ಸ್ವಾಗತಿಸಲಾಯಿತು. ದಾವಣಗೆರೆಯ ಹರಿಜನ ಹಾಸ್ಟೆಲ್ ಕಟ್ಟಡಕ್ಕೆ ಆಸ್ತಿಭಾರ ಹಾಕಿದರು. ನಂತರ ತಮ್ಮ ಭಾಷಣದಲ್ಲಿ ಗಾಂಧೀಜಿಯವರು ತಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿದ ದಾವಣಗೆರೆಯ ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ಸ್ವಾತಂತ್ರ್ಯವನ್ನು ಗಳಿಸುವವರೆಗೂ ಸ್ಫೂರ್ತಿಯುತವಾಗಿ ಹೋರಾಡಲು ಜನತೆಗೆ ಕರೆಕೊಟ್ಟರು. ಈ ಜಿಲ್ಲೆಯ ಅನೇಕ ಸಂಘ-ಸಂಸ್ಥೆಯವರು ಗಾಂಧೀಜಿಯವರಿಗೆ ಸ್ವಾಗತ ನೀಡಿ, ಬಿನ್ನವತ್ತಳೆಯನ್ನು ಅರ್ಪಿಸಿ, ಕೂಡಿಸಿದ್ದ ನಿಧಿಯೊಂದನ್ನು ಅರ್ಪಿಸಿದರು. ಇವರ ಸಂದೇಶದ ಮೇರೆಗೆ ದಾವಣಗೆರೆಯಲ್ಲಿ ವಿವಿಧ ಚಳವಳಿಗಳು ಉಗ್ರಸ್ವರೂಪವನ್ನು ಪಡೆದವು.[೩]

೧೯೩೬ ರಿಂದ ೧೯೪೭ರ ವರೆಗಿನ ವರ್ಷಗಳು ಜಿಲ್ಲೆಯ ಇತ್ತೀಚಿನ ಇತಿಹಾಸದಲ್ಲಿ ಮಹತ್ವದ ವರ್ಷಗಳು. ಜಿಲ್ಲೆಯ ಹಳ್ಳಿ-ಹಳ್ಳಿಯಲ್ಲಿಯೂ ರಾಷ್ಟ್ರೀಯತೆಯ ಭಾವನೆ ಮೂಡಿಬಂದ ವರ್ಷಗಳಿವು. ಪ್ರತಿಯೊಬ್ಬನ ಜಡತೆಯನ್ನು ತೊಡೆದು ಕಾರ್ಯೋನ್ಮುಖನನ್ನಾಗಿ ಮಾಡಿದ ಅನೇಕ ಪ್ರಮುಖ ಘಟನೆಗಳ ಕಾಲವಿದು. ೧೯೩೬ನೇ ಜನವರಿ ೨೬ರಂದು ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಅಂದೇ ಜಿಲ್ಲೆಯ ಜಿಲ್ಲಾಧಿಕಾರಿಗಳು

ಎರಡು ತಿಂಗಳುಗಳವರೆಗೆ ರಾಷ್ಟ್ರಧ್ವಜವನ್ನು ಹಾರಿಸದಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿದರು. ಕಾಂಗ್ರೆಸ್ ಸಪ್ತಾಹವನ್ನು ೧೯೩೯ ಮೇ ತಿಂಗಳಲ್ಲಿ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಆಚರಿಸಲಾಯಿತು. ಪ್ರತಿದಿನವೂ ಮೆರವಣಿಗೆ ಮತ್ತು ರಾಜಕೀಯ ಸಭೆಗಳನ್ನು ಏರ್ಪಡಿಸಲಾಗಿತ್ತು. ಸೇಂದಿ ಅಂಗಡಿಗಳ ಮುಂದೆ ಕಾಂಗ್ರೆಸ್ ನಾಯಕರು ಪಿಕೆಟಿಂಗ್ ಪ್ರಾರಂಭಿಸಿದರು.[೧೪] ೧೯೩೭ರ ಶಿವಪುರದ ಧ್ವಜ ಸತ್ಯಾಗ್ರಹ, ೧೯೩೯ರ ಅರಣ್ಯ ಚಳವಳಿ, ೧೯೩೯ ರಿಂದ ೪೦ ರಲ್ಲಿನ ಕಾನೂನುಭಂಗ ಚಳವಳಿಗಳು ರೈಲು ತಡೆ, ರಸ್ತೆ ತಡೆಗಳು ಈ ಎಲ್ಲದರ ಪ್ರಭಾವವಾಗಿ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ಸ್ವಯಂ ಸಿದ್ಧತೆಯನ್ನು ಪಡೆದ ಪೂರ್ಣಪ್ರಮಾಣದ ಹೋರಾಟವಾಗಿ ಪರಿಣಮಿಸಿತು. ಇಲ್ಲಿಂದ ನಿರಂತರವಾಗಿ ನಡೆದ ಪಿಕೆಟಿಂಗ್‌ಗಳು, ವಿಧ್ವಂಸಕ ಕೃತ್ಯಗಳು, ಭೂಗತ ಚಟುವಟಿಕೆಗಳು, ಪತ್ರಿಕಾ ಪ್ರಚಾರ ಮತ್ತು ಕ್ಷಿಪ್ರಗತಿಯ ಯೋಜನೆಗಳು ಎಷ್ಟೊಂದು ಪ್ರಮುಖವಾದುವೆಂದರೆ ಒಬ್ಬೊಬ್ಬ ಸಾಮಾನ್ಯ ಪ್ರಜೆಯೂ ತನ್ನ ದೈನಂದಿನ ವೈಯಕ್ತಿಕ ಮಾರ್ಗವಾಗಿ ಹೋರಾಟವನ್ನು ನಡೆಸುವಂತೆ ಆಯಿತು. ಸತ್ಯಾಗ್ರಹಿಗಳನ್ನು ಪ್ರೋತ್ಸಾಹಿಸುವ ಕಾರ್ಯವಂತೂ ಭರದಿಂದ ಬಿರುಸಿನಿಂದ ಸಾಗಿತ್ತು. ಮೈಸೂರು ಚಲೋ ಚಳವಳಿಯು ೧೯೪೭ರವರೆಗೆ ನಡೆಯಿತು.[೧೫] ಇದು ಹೋರಾಟದ ಅಂತಿಮ ಹಂತವಾಗಿ ಕಂಡುಬರುತ್ತದೆ.

ಕ್ವಿಟ್ ಇಂಡಿಯಾ ಚಳವಳಿಯು ದಾವಣಗೆರೆ ಜಿಲ್ಲೆಯ ರಾಜಕೀಯ ಹೋರಾಟಕ್ಕೆ ಒಂದು ಹೊಸ ಸ್ವರೂಪವನ್ನು ಕೊಟ್ಟಿತು. ದಾವಣಗೆರೆಯಲ್ಲಿ ಕಾರ್ಮಿಕರು ಚಳವಳಿಗೆ ಸಂಪೂರ್ಣ ಬೆಂಬಲ ವನ್ನು ನೀಡಿದರು. ವಿದ್ಯಾರ್ಥಿಗಳು ತರಗತಿಗಳಿಗೆ ಬಹಿಷ್ಕಾರ ಹಾಕಿ ಚಳವಳಿಗೆ ಸೇರಿದರು. ಅನೇಕ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಇಂತಹ ಸಂದರ್ಭದಲ್ಲಿ ಸರ್ಕಾರವು ಸೈನ್ಯವನ್ನು ಬಳಸಿ ಚಳವಳಿಯನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿತು. ನಾಗಪ್ಪಹುಲ್ಲೂರ್ ದಾವಣಗೆರೆಯಲ್ಲಿ ಸೈನಿಕ ಅಧಿಕಾರಿಯನ್ನು ತಡೆದಾಗ ನಡೆದ ಗೋಲಿಬಾರಿನಲ್ಲಿ ಮೃತನಾಗಿ ಕರ್ನಾಟಕದ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಅಮರನಾದ. ರೈಲು ನಿಲ್ದಾಣವನ್ನು ಚಳವಳಿಗಾರರು ಸುಟ್ಟುಹಾಕಿದರು. ರಾತ್ರಿ ಓಡಾಡುವ ರೈಲುಗಳನ್ನು ಜಿಲ್ಲೆಯಲ್ಲಿ ವಿಧ್ವಂಸ ಕೃತ್ಯಕ್ಕೆ ಹೆದರಿದ ಸರ್ಕಾರವು ಒಂದು ತಿಂಗಳಗಳ ಕಾಲ ನಿಲ್ಲಿಸಿತು. ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಅಂಚೆಕಚೇರಿ ಲೂಟಿ ಮಾಡಿ, ಟೆಲಿಗ್ರಾಫ್ ತಂತಿಗಳನ್ನು ನಾಶಪಡಿಸಲಾಯಿತು. ಸರ್ಕಾರದ ಉಗ್ರಾಣಗಳಿಗೆ ಮುತ್ತಿಗೆ ಹಾಕಲಾಯಿತು. ಜಿಲ್ಲೆಯಲ್ಲಿ ಮೆರವಣಿಗೆ ಮತ್ತು ಭಾಷಣಗಳಾದವು. ಬಳ್ಳಾರಿ ಸಿದ್ಧಮ್ಮ, ಖಾದಿ ಸಿದ್ದಲಿಂಗಪ್ಪ, ಇಟಗಿ ವೇದಮೂರ್ತಿ, ಕಾಸಲ ಶ್ರೀನಿವಾಸಶೆಟ್ಟರು, ಬಳ್ಳಾರಿ ಮುರುಗಯ್ಯ, ಕೆ.ಟಿ. ಜಂಬಣ್ಣ ಮತ್ತು ಜೆಳ್ಳುಳ್ಳಿ ಷಣ್ಮುಖಪ್ಪ ಇವರು ಪ್ರಮುಖ ಪಾತ್ರವಹಿಸಿದ್ದರು.[೧೬] ದಾವಣಗೆರೆಯಲ್ಲಿ ದಿಟ್ಟ ಹೋರಾಟ ಗಾರರಾಗಿ ಶ್ರೀ ಎಸ್. ನಿಜಲಿಂಗಪ್ಪನವರೊಂದಿಗೆ ಮೂರು ಬಾರಿ, ಮತ್ತೆ ಇನ್ನೊಮ್ಮೆ ಸಹ ಜೈಲು ಸೇರಿದ ಶ್ರೀ ಕೊಟಗಿ ಸಿದ್ದಲಿಂಗಪ್ಪನವರು ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ ಮತ್ತು ಮೈಸೂರು ಚಳವಳಿಗಳಲ್ಲಿ ಸಕ್ರೀಯ ಪಾತ್ರಧಾರಿಗಳಾಗಿದ್ದರು. ಹುಟ್ಟು ಹೋರಾಟಗಾರರಾಗಿದ್ದ

ಇವರನ್ನು ೫ ವರ್ಷಗಳ ಕಠಿಣ ಶಿಕ್ಷೆಗೆ ಗುರಿ ಮಾಡಿ ಚಿತ್ರದುರ್ಗ, ಬೆಂಗಳೂರು, ತುಮಕೂರು ಮತ್ತು ಹಾಸನ ಸೆರೆಮನೆಗಳಲ್ಲಿ ಇಡಲಾಗಿತ್ತು. ಇವರ ಸಹೋದರ ಕೊಟ್ರೆನಂಜಪ್ಪ, ಸಹೋದರಿ ಬಳ್ಳಾರಿ ಸಿದ್ದಮ್ಮ ಮತ್ತು ಮನೆಮಂದಿಯೆಲ್ಲ ಹೋರಾಟದಲ್ಲಿ ಭಾಗವಹಿಸಿದ್ದರು.

ಉಗ್ರಗಾಮಿಗಳೆಂದೇ ಹೆಸರಾದ ಇಟಗಿ ವೇದಮೂರ್ತಿಯವರು ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ವಿದ್ಯಾರ್ಥಿ ದಿಸೆಯಲ್ಲಿದ್ದಾಗಲೇ ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಬೆಂಗಳೂರಿನಿಂದ ದಾವಣಗೆರೆಗೆ ಬಂದು ನೇತಾಜಿ ಪತ್ರಿಕೆಯ ಮೂಲಕ ಅಖಂಡ ಕರ್ನಾಟಕ ನಿರ್ಮಾಣಕ್ಕೆ ಕರೆಕೊಟ್ಟ ಮೊದಲ ಯುವಕ ವೇದಮೂರ್ತಿ. ದಾವಣಗೆರೆಯಲ್ಲಿ ಏರ್ಪಡಿಸಿದ್ದ ಗಾಂಧೀ ಮೈದಾನದಲ್ಲಿ ಜರುಗಿದ ಬೃಹತ್ ಸಭೆಯಲ್ಲಿ ತನ್ನ ಬಂದೂಕು ಎತ್ತಿ ಸಾಂಕೇತಿಕವಾಗಿ ಗುಂಡು ಹಾರಿಸಿದರು. ವರ್ಷಗಟ್ಟಲೆ ಅಜ್ಞಾತವಾಸದಲ್ಲಿದ್ದು ಮನೆ ಮತ್ತು ಸಂಸಾರವನ್ನು ತೊರೆದು ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದರು. ಶ್ರೀ ಕಾಸಲ ಶ್ರೀನಿವಾಸಶೆಟ್ಟರು ದಲಿತರ ಸೇವೆಯ ಅಗ್ರೇಸರರೆಂದೇ ಹೆಸರು ಪಡೆದವರು. ಬಳ್ಳಾರಿ ಸಿದ್ಧಮ್ಮನವರು ಎಲ್ಲಾ ಕಾರ್ಯಗಳಲ್ಲೂ ಪ್ರೋತ್ಸಾಹ ನೀಡುತ್ತ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲ್ಗೊಂಡವರು. ಇವರು ೧೯೩೮ರ ಏಪ್ರಿಲ್‌ನ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಪ್ರಪ್ರಥಮ ಮಹಿಳೆ. ೧೯೩೯ರ ಅರಣ್ಯ ಸತ್ಯಾಗ್ರಹದಲ್ಲಿ ಇವರು ಬಂಧಿತರಾದರು. ಗಾಂಧಿ ಸೇವಾಶ್ರಮದಲ್ಲಿ ತರಬೇತಿ ಪಡೆದು ಮಾತೃಮಂದಿರದ ಮಹಾಮಾತೆಯೆಂದೇ ಕರೆಯಲ್ಪಟ್ಟಿದ್ದರು. ಇವರ ನೆನಪಿಗಾಗಿ ದಾವಣಗೆರೆಯಲ್ಲಿ ಇವರ ಹೆಸರಿನಲ್ಲಿ ಒಂದು ಪಾರ್ಕ್‌ನ್ನು ನಿರ್ಮಿಸಲಾಯಿತು. ಇದನ್ನು 'ಬಳ್ಳಾರಿ ಸಿದ್ಧಮ್ಮಪಾರ್ಕ್' ಎಂದು ಕರೆಯಲಾಗುತ್ತದೆ.[೧೭]

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬರುವುದು ಖಚಿತವಾಗಿತ್ತು. ಬ್ರಿಟಿಷ್ ಭಾರತದಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಸಂಸ್ಥಾನ ಒಕ್ಕೂಟವನ್ನು ಸೇರುವ ಬಗ್ಗೆ ಅಥವಾ ಜವಾಬ್ದಾರಿ ಸರ್ಕಾರವನ್ನು ರಚಿಸುವ ಬಗ್ಗೆ ಯಾವುದೇ ರೀತಿಯ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ. ಆಗಸ್ಟ್ ೯ ರಂದು ಮೈಸೂರು ಕಾಂಗ್ರೆಸ್ ಸಭೆ ಸೇರಿ 'ಮೈಸೂರು ಚಲೋ' ಸತ್ಯಾಗ್ರಹವನ್ನು ಪ್ರಾರಂಭಿಸಲು ನಿರ್ಧರಿಸಿತು. ಟಿ. ಸುಬ್ರಮಣ್ಯ, ಕೆ.ಸಿ. ರೆಡ್ಡಿ ಮತ್ತು ರಾಜಶೇಖರ ಹಿರೇಮಠ ಮುಂತಾದವರು ಜಿಲ್ಲೆಯಲ್ಲಿ ಮಿಂಚಿನ ವೇಗದಲ್ಲಿ ಸಂಚರಿಸಿ ಜನರನ್ನು ಕೊನೆಯ ಹೋರಾಟಕ್ಕೆ ತಯಾರು ಮಾಡಿದರು. ಜಿಲ್ಲೆಯಿಂದ ಅನೇಕ ಹೋರಾಟಗಾರರು ಮೈಸೂರಿಗೆ ಪ್ರಯಾಣ ಮಾಡಿದರು. ಜಿಲ್ಲೆಯಲ್ಲಿ ಚಳವಳಿಯನ್ನು ತೀವ್ರಗೊಳಿಸಲಾಯಿತು. ಈ ಚಳವಳಿಯಲ್ಲಿ ನೂರಾರು ಜನರನ್ನು ಜೈಲಿಗೆ ಹಾಕಲಾಯಿತು. ಆದರೂ ಚಳವಳಿ ಬಹಳ ಉಗ್ರಸ್ವರೂಪ ಪಡೆಯಿತು. ಸರ್ಕಾರವು ಇದನ್ನು ತಡೆದುಕೊಳ್ಳಲಾರದೆ ಅಕ್ಟೋಬರ್ ಮಧ್ಯಭಾಗದಲ್ಲಿ ಹೇಳಿಕೆಯೊಂದನ್ನು ಹೊರಡಿಸುವುದರ ಮೂಲಕ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿ ಪ್ರಜಾಸರ್ಕಾರದ ಸ್ಥಾಪನೆಮಾಡಿತು. ಈ

ಹೇಳಿಕೆಯೊಡನೆ ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯು ಮುಕ್ತಾಯವಾಯಿತು. ಈ ರೀತಿಯಾಗಿ ಹೋರಾಟವು ಭಿನ್ನ ಭಿನ್ನ ಸ್ವರೂಪಗಳನ್ನು ಪಡೆದುಕೊಂಡು ನಡೆಯಿತು. ಸ್ವದೇಶಿ ಚಳವಳಿಯು ಈ ಎಲ್ಲ ಹೋರಾಟಗಳಿಗೆ ಪ್ರೇರಕಶಕ್ತಿಯಾಗಿ ಕಂಡುಬಂತು. ಸ್ವದೇಶಿ ಚಳವಳಿಯು ಯಾವುದೋ ಒಂದು ಸಂದರ್ಭದಲ್ಲಿ, ಒಂದು ಘಟನೆಯ ವಿರುದ್ಧ ಹುಟ್ಟಿಕೊಂಡದ್ದಾದರೂ, ನಂತರ ನಡೆದ ಎಲ್ಲ ಹೋರಾಟಗಳ ಸಂದರ್ಭಗಳಲ್ಲೂ ಸ್ವದೇಶಿ ಪ್ರಜ್ಞೆ ಬಲವಾಗಿ ಕೆಲಸ ಮಾಡಿತು. ಸ್ವಾತಂತ್ರ್ಯೋತ್ತರ ಅವಧಿಯಲ್ಲೂ ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ಸಾಧನೆಗೆ ಸ್ವದೇಶಿ ಮಂತ್ರವನ್ನು ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ಎಸ್. ಚಂದ್ರಶೇಖರ್, **ಕರ್ನಾಟಕ ಚರಿತ್ರೆ ಸಂಪುಟ-೭**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೪೧

೨. ಆರ್.ಸಿ. ಮುಜುಂದಾರ್, (ಅನು.), ಕೆ.ಎಸ್. ನಾರಾಯಣಸ್ವಾಮಿ, **ಸ್ವಾತಂತ್ರ್ಯ ಸಂಗ್ರಾಮ ಭಾಗ-ಒಂದು**, ಸಂಪುಟ ೨೩, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೯೮, ಪು. ೪೪

೩. ಹೆಚ್.ವಿ. ಶ್ರೀನಿವಾಸಮೂರ್ತಿ, ಆರ್. ರಾಮಕೃಷ್ಣನ್, **ಸಮಗ್ರ ಕರ್ನಾಟಕ ಚರಿತ್ರೆ**, ಓರಿಯಂಟ್ ಲಾಂಗಮನ್ ಲಿಮಿಟೆಡ್, ಶೃಂಗಾರ ಶಾಪಿಂಗ್ ಸೆಂಟರ್, ಬೆಂಗಳೂರು, ೧೯೯೫, ಪು. ೪೩೦

೪. ಬಿಪನ್ ಚಂದ್ರ (ಅನು.), ಆರ್.ಎಲ್. ಅನಂತರಾಮಯ್ಯ, **ಸ್ವಾತಂತ್ರ್ಯದ ಹೋರಾಟ**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸ ದೆಹಲಿ, ೧೯೭೪ ಮತ್ತು ೧೯೮೮, ಪು. ೧೦೦

೫. ನಾರಾಯಣಶಾಸ್ತ್ರಿ, **ರಾಷ್ಟ್ರೀಯ ಮಹಾಪುರುಷರು**, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೮, ಪು. ೪೮

೬. ಅದೇ, ಪು. ೬೦

೭. ಅದೇ, ಪು. ೮೪

೮. ಅದೇ, ಪು. ೪೩

೯. ವಿ.ಎಸ್. ನಾರಾಯಣರಾವ್, **ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ**, ಐಬಿಎಚ್, ಬೆಂಗಳೂರು, ೧೯೮೦, ಪು. ೫೩

೧೦. ಅದೇ, ಪು. ೪೫

೧೧. ಅದೇ, ಪು. ೧೪೧

೧೨. **ಹೋರಾಟದ ನೆನಪು**, ಸ್ಮರಣ ಸಂಚಿಕೆ, ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಮ್ಮೇಳನ, ೧೯೯೬, ಪು. ೨೦

೧೩. ಸ್ವಾತಂತ್ರ್ಯ ಹೋರಾಟಗಾರರ ವರದಿ, ಮೌಖಿಕ ಸಂದರ್ಶನ

೧೪. ಎಂ.ವಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿ, **ಚಂದ್ರವಳ್ಳಿ**, ಜಿಲ್ಲಾ ಕೌನ್ಸಿಲ್ ಇತಿಹಾಸ ಸಂಶೋಧನ, ಚಿತ್ರದುರ್ಗ, ೧೯೭೬, ಪು. ೧೦೯

೧೫. ಎಂ.ಜಿ. ಈಶ್ವರಪ್ಪ, **ಶತಮಾನದ ದಾವಣಗೆರೆ**, ಚಂಪಲಾಲ್ ಬಿ. ಡೆಲ್ಬರಿಯಾ, ದಾವಣಗೆರೆ, ೨೦೦೧, ಪು. ೩೫

೧೬. ಅದೇ, ಪು. ೧೧೧

೧೭. ಅದೇ, ಪು. ೪೩

೧೮. ಅದೇ, ಪು. ೧೧೨

* * *

ಅಧ್ಯಾಯ ೪

ಗಾಂಧೀಜಿಯ ಆಗಮನ

ಗಾಂಧೀಜಿಯ ಆಗಮನ

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದದ್ದು ೧೯೧೪ರಲ್ಲಿ. ಆ ವೇಳೆಗೆ ಭಾರತದಲ್ಲಿ ಅವರು ಒಂದಷ್ಟು ಪ್ರಚಾರವನ್ನು ಪಡೆದುಕೊಂಡಿದ್ದರು. ಅವರು ತದನಂತರ ಕರ್ನಾಟಕಕ್ಕೆ ಮೊಟ್ಟ ಮೊದಲು ಆಗಮಿಸಿದ್ದು ೧೯೧೯ರಲ್ಲಿ. ೧೯೨೭ ಆಗಸ್ಟ್ ತಿಂಗಳಿನಲ್ಲಿ ಗಾಂಧೀಜಿ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡರು. ಅವರು ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಹರಿಹರ, ಹೊನ್ನಾಳಿ ಮುಂತಾದ ಪ್ರದೇಶಗಳಲ್ಲಿ ಪ್ರವಾಸ ಮಾಡಿದರು. ಗಾಂಧೀಜಿಯ ಜೊತೆಯಲ್ಲಿ ಕಸ್ತೂರಬಾ, ದೇಶಪಾಂಡೆ, ಗಂಗಾಧರರಾಯರು, ರಾಜಾಜಿ, ದೇವದಾಸಗಾಂಧಿ, ಮಣಿಬೇನ್ ಪಟೇಲ್, ಮಹಾದೇವ ದೇಸಾಯಿ, ಲಕ್ಷ್ಮಿ, ಮೃದುಲಾಬೇನ್ ಇಷ್ಟು ಜನ ಗಾಂಧೀಜಿಯವರ ಜೊತೆ ಬಂದಿದ್ದರು. ದಿನಾಂಕ ೧೧ ಮತ್ತು ೧೨ ಆಗಸ್ಟ್ ೧೯೨೭ ದಾವಣಗೆರೆಯಲ್ಲಿ ಕಾರ್ಯಕ್ರಮ ನಡೆಸಿದರು.[೧]

ದಾವಣಗೆರೆಯ ಸ್ವಾಗತ ಸಮಿತಿಯಲ್ಲಿ ಬ್ರಹ್ಮಪ್ಪತವನಪ್ಪನವರು, ಹಾಕಂಹಾಜಿ ಶೇಟ್, ಕಾಸಲ್ ಶ್ರೀನಿವಾಸ್ ಶೆಟ್ಟರು, ಬೋಂದಾಡೆ ಬಾಳಪ್ಪನವರು, ಹರಿಹರಪ್ಪನವರು ಇನ್ನು ಮುಂತಾದವರು ಇದ್ದರು. ಆಗ ಕೆ.ಟಿ. ಜಂಬಣ್ಣ, ಶ್ರೀಮತಿ ಬಳ್ಳಾರಿ ಸಿದ್ದಮ್ಮ, ಖಾದಿ ಸಿದ್ದಪ್ಪ, ಗಾಂಜಿವೀರಪ್ಪ, ಶಿವಾನಂದಸ್ವಾಮಿ, ರಾಚಯ್ಯ ಮಳೀಮಠ, ಬಾಲಕೃಷ್ಣರಾವ್ ಇವರೊಂದಿಗೆ ಅನೇಕರು ಒಗ್ಗೂಡಿ ದಾವಣಗೆರೆಯಲ್ಲಿ ಸಂಘಟನೆಯೊಂದನ್ನು ಆರಂಭಮಾಡಿದರು.[೨] ಈ ಸ್ವಾಗತ ಸಮಿತಿಯ ಮುಖಂಡರು ಸುಮಾರು ೫,೦೦೦ ರೂಪಾಯಿಯ ನಿಧಿಯೊಂದನ್ನು ಸಂಗ್ರಹಿಸಿಕೊಟ್ಟರು. ದಾವಣಗೆರೆಯಲ್ಲಿ ನಡೆದ ಸಭೆಗೆ ಸಾವಿರಾರು ಮಂದಿ ಸೇರಿದ್ದರು. ಗಾಂಧೀಜಿ ಅಲ್ಲಿ ಮಾಡಿದ ಭಾಷಣವೂ ಸುದೀರ್ಘವಾದದ್ದಾಗಿತ್ತು. ಅಲ್ಲಿನ ವರ್ತಕರಿಗೆ ಪಾಪದ ಅರ್ಥಶಾಸ್ತ್ರಕ್ಕೆ ಮಡಿಲು ಕಟ್ಟಬೇಡಿರಿ, ಪುಣ್ಯದ ಅರ್ಥಶಾಸ್ತ್ರವನ್ನು ಅನುಸರಿಸಿರಿ ಎಂದು ಕಿವಿಮಾತು ಹೇಳಿದರು. ಈಗಿನ ಕಾಲದಲ್ಲಿ ಪಾಪದ ಅರ್ಥಶಾಸ್ತ್ರಕ್ಕೆ ಬೆಲೆ ಹೆಚ್ಚುತ್ತಿದೆ. ಕೆಲವರ ಕೈಯಲ್ಲೇ ಹಣ ಸೇರುತ್ತದೆ. ಅದು ಎಲ್ಲರಲ್ಲೂ ಹಂಚಿ ಹೋಗುತ್ತಿಲ್ಲ ಎಂದರು.

ಮೈಸೂರು ಸಂಸ್ಥಾನದ ಉತ್ತರದ ತುತ್ತತುದಿಯಲ್ಲಿರುವ ದಾವಣಗೆರೆ ಅಂದು ದೊಡ್ಡ ವ್ಯಾಪಾರಕೇಂದ್ರವಾಗಿತ್ತು. ಅದು ಸಂಸ್ಥಾನದ ಹತ್ತಿ ಮತ್ತು ಶೇಂಗಾ ಬೆಳೆಯ ಕೇಂದ್ರವಾಗಿತ್ತು. ತುಂಗಭದ್ರಾ ನದಿಯ ದಂಡೆಯ ಮೇಲಿರುವ ಈ ಪ್ರದೇಶದಲ್ಲಿ ಖಾದಿಗೆ ವಾತಾವರಣ ಅನುಕೂಲಕರವಾಗಿತ್ತು. ಅಲ್ಲಿ ಖಾದಿಧಾರಿಗಳೂ ಹೆಚ್ಚಾಗಿದ್ದರು. ಗಾಂಧೀಜಿಯವರು ದಾವಣಗೆರೆಯಿಂದ ಹೊನ್ನಾಳಿಗೆ,

ಅಲ್ಲಿಂದ ಶಿವಮೊಗ್ಗಕ್ಕೆ, ಶಿವಮೊಗ್ಗದಿಂದ ಸಾಗರಕ್ಕೆ ಹೋಗುವಾಗ ಅನೇಕ ಹಳ್ಳಿಗಳ ಮೂಲಕ ಹೋಗಬೇಕಾಗಿತ್ತು. ದಾರಿಯ ಎರಡೂ ಕಡೆಗಳಲ್ಲಿ ಹಳ್ಳಿಯ ಜನರು ಗುಂಪು ಗುಂಪಾಗಿ ಶಾಂತವಾಗಿ ಕೂಡಿದ್ದರು. ಗಾಂಧೀಜಿಗೆ ನಮಸ್ಕಾರ ಮಾಡಿ ನಿಧಿಯನ್ನು ನೀಡಬೇಕು ಎಂಬುದು ಅವರ ಉದ್ದೇಶ ವಾಗಿತ್ತು. ದಾವಣಗೆರೆ ಹತ್ತಿ ಗಿರಣಿಗಳ ಊರು. ಹತ್ತಿ ವ್ಯಾಪಾರಿಗಳಾದ ಶಿರೂರ ಮನೆತನದ ಹೆಂಗಸರು ಹತ್ತಿ ಬಟ್ಟೆಯನ್ನು ತಯಾರಿಸುತ್ತಿದ್ದರು. ಅವರೆಲ್ಲರೂ ಗಾಂಧೀಜಿಯ ಆಗಮನದ ನಿರೀಕ್ಷೆಯಲ್ಲಿದ್ದರು. ಹೊನ್ನಾಳಿಯ ಸಬ್‌ರಿಜಿಸ್ಟ್ರಾರು ಶಾಲೆಯ ಮಕ್ಕಳು ಮತ್ತು ಆತನ ಮನೆಯವರ ಜೊತೆ ಗಾಂಧೀಜಿಗೆ ನೂಲಿನ ಲಾಡಿಗಳನ್ನು ಅರ್ಪಿಸಿದರು. ಹೊನ್ನಾಳಿಯ ಬಿನ್ನವತ್ತಳೆಯನ್ನು ಉರ್ದು ಭಾಷೆಯಲ್ಲಿ ಖಾದಿಧಾರಿಯಾಗಿದ್ದ ನವಾಬ ಷೇರ್‌ಖಾನ್ ಓದಿದನು. ದಾವಣಗೆರೆಯಲ್ಲಿ ನಿಧಿಯ ನಿರೀಕ್ಷಿಸಿದಷ್ಟು ದೊಡ್ಡದಾಗಿಯೇ ಇತ್ತು. ಉಳಿದ ಕಡೆ ನಡೆದ ಹೆಂಗಸರ ಸಭೆಗಳಿಗಿಂತ ದಾವಣಗೆರೆ ಹೆಂಗಸರ ಸಭೆಯು ಯಶಸ್ವಿಯಾಯಿತು. ಅವರು ಸ್ಥಳದಲ್ಲೇ ೫೦೦ ರೂಪಾಯಿ ನಿಧಿಯನ್ನು ಕೂಡಿಸಿ ಕೊಟ್ಟರು. ಒಡವೆಗಳನ್ನು ಸಹ ಕೊಟ್ಟರು. ದಾವಣಗೆರೆಯ ವಿದ್ಯಾರ್ಥಿಗಳು ಅವರ ಶಿಕ್ಷಕರ ಮುಖಂಡತ್ವದಲ್ಲಿ ಶುದ್ಧ ಖಾದೀಧಾರಿಗಳಾಗಿ, ಸ್ವಯಂ ಸೇವಕರಾಗಿ ಕೆಲಸ ಮಾಡಿದರು. ಅವರು ಸಭೆಯಲ್ಲಿ ಗಾಂಧೀಜಿಗೆ ೩೪೯ ರೂಪಾಯಿಗಳ ನಿಧಿಯನ್ನು ಕೊಟ್ಟರು. ಹಿಂದಿನ ವಾರದಲ್ಲಿ ಶ್ರೀ ಪೂಜಾರಿಯವರು ೨,೦೦೦ ರೂಪಾಯಿಯ ಖಾದಿ ಮಾರಾಟ ಮಾಡಿದ್ದರು.

ಮೈಸೂರಿನ ಉತ್ತರಕ್ಕಿಂತ ದಕ್ಷಿಣದಲ್ಲಿ ಅಸ್ಪೃಶ್ಯತೆಯ ಬಿಗಿ ಹೆಚ್ಚು. ಆದರೆ ಸಭೆಗಳಲ್ಲಿ ಉಳಿದವರ ಜೊತೆಗೆ ಆದಿಕರ್ನಾಟಕರು, ಜಾಡಮಾಲಿಗಳು, ಭಂಗಿಗಳು ಕುಳಿತದ್ದು ಇತಿಹಾಸದಲ್ಲಿ ಇದೇ ಮೊದಲನೆಯದ್ದಾಗಿತ್ತು. ಗಾಂಧೀಜಿ ಅಸ್ಪೃಶ್ಯರೆಲ್ಲರನ್ನು ಮಾಂಸ ಭಕ್ಷಣ ಬಿಡುವಂತೆ, ಗೋಮಾಂಸ ತಿನ್ನದಂತೆ, ಗೋಹತ್ಯ ಮಾಡದಂತೆ, ಹೆಂಡ ಕುಡಿಯದಂತೆ ಸಲಹೆಕೊಟ್ಟರು. ಗಾಂಧೀಜಿ ತಮ್ಮ ಭಾಷಣದಲ್ಲಿ ಮಾತನಾಡುತ್ತಿದ್ದಂತೆ ಆದಿಕರ್ನಾಟಕರ ಮುಖಂಡ ಒಬ್ಬ ಮುಂದೆ ಬಂದು ಇನ್ನು ಮುಂದೆ ಗೋಮಾಂಸ, ಮಾಂಸ, ಹೆಂಡ ಯಾವುದನ್ನು ಮುಟ್ಟುವುದಿಲ್ಲ ಎಂದು ಶಪಥ ಮಾಡಲು ಗಾಂಧೀಜಿಯ ಅಪ್ಪಣೆ ಬೇಡಿದ. ಅವನ ತರುವಾಯ ಮತ್ತೊಬ್ಬ, ನಂತರ ಮತ್ತೊಬ್ಬ, ಹೀಗೆ ಅವರ ಮುಖ್ಯಸ್ಥರೆಲ್ಲರೂ ಬಂದು ಶಪಥ ಮಾಡಿದರು. ಅವರಲ್ಲಿ ಒಬ್ಬ ಪುರಸಭಾ ಸದಸ್ಯ, ಒಬ್ಬ ವಿದ್ಯಾರ್ಥಿ, ಒಬ್ಬ ಶಿಕ್ಷಕ, ಒಬ್ಬ ಭೂಮಾಲಿಕ.

ಹೊನ್ನಾಳಿಯಲ್ಲಿ ಆದಿಕರ್ನಾಟಕದವರಿಗಾಗಿ ಬೇರೆಯದೇ ಸಭೆ ಇರಲಿಲ್ಲ. ಊರಿನ ಸಭೆಯಲ್ಲಿ ಗಾಂಧೀಜಿ ಅವರಿಗಾಗಿ ನಾಲ್ಕು ಮಾತುಗಳನ್ನು ಹೇಳಿದರು. ದಾವಣಗೆರೆಯ ಸುದ್ದಿಯನ್ನು ಯಾರೂ ಇಲ್ಲಿ ಪ್ರಸ್ತಾಪಿಸಲಿಲ್ಲ. ಆದರೂ ಗಾಂಧೀಜ ಭಾಷಣ ಮಾಡುತ್ತಿದ್ದಂತೆಯೇ ಒಬ್ಬರಾದ ಮೇಲೊಬ್ಬರು ಎದ್ದು ಬಂದು ಶಪಥ ಮಾಡಿದರು. ಅವರಲ್ಲಿ ಒಬ್ಬ ಈ ಶಪಥ ಮಾಡಿದರೆ ಮೇಕೆಯ ಮಾಂಸ ತಿನ್ನುವುದಕ್ಕೆ ಅಡ್ಡಿಯಾಗುತ್ತದೆಯೇ ಎಂದು ಕೇಳಿದ. ಆಗ ಗಂಗಾಧರರಾಯರು ಇಲ್ಲ, ಆಗುವುದಿಲ್ಲ ಎಂದು ಭರವಸೆ ಕೊಟ್ಟರು. ಆಗ ಅವನು ಶಪಥ ಮಾಡಿದ. ಇನ್ನೊಬ್ಬನಿಗೆ ಏನೋ ಸಂಕೋಚ

ಹಿಂದುಮುಂದು ನೋಡುತ್ತ ಎದ್ದು ಬಂದು ಆಕಳನ್ನು ಕೊಲ್ಲುವುದಿಲ್ಲ, ಗೋಮಾಂಸ ತಿನ್ನುವುದಿಲ್ಲ, ಸತ್ತ ದನದ ಮಾಂಸ ತಿನ್ನುವುದಿಲ್ಲ, ಆದರೆ ಮೋಚಿಯ ಕೆಲಸವನ್ನು ನಾನು ಹೇಗೆ ಬಿಡಲಿ? ತೊಗಲಿನ ಕೆಲಸ ಮಾಡಬಹುದಲ್ಲ ಎಂದು ಕೇಳಿ ಶಪಥ ಮಾಡಿದ. ಹೀಗೆ ಗಾಂಧೀಜಿಯವರ ಮಾತಿನಿಂದ ಆದಿಕರ್ನಾಟಕ ಜನರು ಪರಿವರ್ತನೆ ಆದರು. ತಮ್ಮ ಬದುಕಿನಲ್ಲಿ ಇದೊಂದು ಮಹಾ ಸಾಹಸ ಎಂದು ಗಾಂಧೀಜಿ ವಿನೋದದಿಂದ ಹೇಳಿದರು. 'ನಿಮ್ಮ ಕಸುಬಿನ ಮೇಲೆ, ನಾನು ಮಾಡಿದ ಅಹಿಂಸಾತ್ಮಕ ಟೀಕೆಯಿಂದ ನೀವು ಶತ್ರುಗಳಾಗಲಿಲ್ಲ, ಮಿತ್ರರೇ ಆದಿರಿ' ಎಂದು ಹೇಳಿದರು. ಪ್ರವಾಸಿ ಮಂದಿರ ನದಿಯ ದಂಡೆಯ ಮೇಲೆ ಇದ್ದು, ಅವರಿಗೆ ಸಾಬರಮತಿಯ ನೆನಪನ್ನು ತಂದಿತು.[೪]

ಗಾಂಧೀಜಿ ಮೈಸೂರು ಪ್ರಾಂತ್ಯದಲ್ಲಿ ಪ್ರವಾಸ ಮಾಡುತ್ತಿದ್ದ ಸಂದರ್ಭದಲ್ಲಿ ಗುಜರಾತಿನಲ್ಲಿ ನೆರೆ ಬಂದಿತ್ತು, ಜುಲೈ ೨೪ರಂದು ಸತತವಾದ ಭಾರಿ ಮಳೆ ಆರಂಭವಾಗಿ ಒಂದು ವಾರದವರೆಗೂ ಎಡೆಬಿಡದೆ ಸುರಿಯಿತು. ದೊಡ್ಡ ದೊಡ್ಡ ಪ್ರದೇಶಗಳು ಜಲಾವೃತವಾದವು. ಒಂದು ಮನೆಯೂ ಉಳಿಯಲಿಲ್ಲ. ಬೆಳೆ ಮತ್ತು ಜಾನುವಾರುಗಳೆಲ್ಲ ಕೊಚ್ಚಿ ಹೋದವು. ಮನುಷ್ಯರು ಮರಗಳ ತುದಿಯನ್ನೇರಿ ಕುಳಿತು ಊಟವಿಲ್ಲದೆ ಒಂದು ವಾರವನ್ನು ಕಳೆದರು. ಆ ಪ್ರದೇಶಗಳಲ್ಲಿ ಅವಿಶ್ರಾಂತ ವಾಗಿ ದುಡಿಯುತ್ತ ಪರಿಹಾರ ಕಾರ್ಯಗಳನ್ನು ಕೈಗೊಳ್ಳುತ್ತಿದ್ದ ವಲ್ಲಭಭಾಯಿ ಪಾಟೇಲರೊಂದಿಗೆ ಗಾಂಧೀಜಿ ಸಂಪರ್ಕ ಇಟ್ಟುಕೊಂಡಿದ್ದರು. ಅನೇಕ ಆಪ್ತರು ಅವರನ್ನು ಗುಜರಾತಿಗೆ ಬರುವಂತೆ ಸೂಚಿಸಿದರು. ಅದಕ್ಕೆ ಗಾಂಧೀಜಿ ಹೀಗೆ ಹೇಳಿದರು, "ನಾನು ಅಲ್ಲಿಗೆ ಹೋಗುವುದರಿಂದ ಸಹಾಯಕ್ಕಿಂತ ಅಡಚಣೆಯೇ ಹೆಚ್ಚು, ನೆರವು ನೀಡುವಂತೆ ಇಲ್ಲಿಂದಲೂ ಜನರನ್ನು ಪ್ರಾರ್ಥಿಸಬಲ್ಲೆ." ಅಂತಹ ಸಂದರ್ಭದಲ್ಲಿ ಆಗಸ್ಟ್ ತಿಂಗಳಿನಲ್ಲಿ ಗಾಂಧೀಜಿ ತಮ್ಮ ಪ್ರವಾಸವನ್ನು ಮೈಸೂರಿನ ತುತ್ತತುದಿಯಾದ ದಾವಣಗೆರೆಯಿಂದ ಆರಂಭಿಸಿದರು. ಅನಂತರ ದಕ್ಷಿಣದ ಶಿವಮೊಗ್ಗಕ್ಕೆ ಬಂದರು. ದಾರಿಯ ಮಧ್ಯದಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ಜನರು ತಮ್ಮ ಗೌರವ ಸಲ್ಲಿಸಲು ಮತ್ತು ಕಾಣಿಕೆಯನ್ನು ನೀಡಲು ರಸ್ತೆಯ ಎರಡು ಕಡೆಗಳಲ್ಲಿ ನಿಶ್ಯಬ್ಧವಾಗಿ ಕುಳಿತಿರುತ್ತಿದ್ದರು. ಈ ಕಾಣಿಕೆ ಸುಮಾರು ೬೦೦ ರೂ. ಗಳಷ್ಟಾಗಿದ್ದಿತು. ದಾವಣಗೆರೆಯ ಸಾರ್ವಜನಿಕ ಭಾಷಣವು ಸೈತಾನನ ಆರ್ಥಿಕ ನೀತಿಗೆ ವಿರುದ್ಧವಾದ ಭಗವಂತನ ಆರ್ಥಿಕ ನೀತಿಯ ವಿಶ್ಲೇಷಣೆಗೆ ಪ್ರಧಾನವಾಗಿ ಮೀಸಲಾಗಿತ್ತು. ನಂತರ ಗಾಂಧೀಜಿಯವರು ಹರಿಹರಕ್ಕೆ ಹೋಗಿ ಹರಿಹರದ ಹರಿಹರೇಶ್ವರ ದೇವಸ್ಥಾನದ ಮುಂದೆ ಈ ರೀತಿ ಭಾಷಣವನ್ನು ಮಾಡಿದರು, "ದೇವರು ತನ್ನಂತೆಯೆ ಮಾನವನನ್ನು ಸೃಷ್ಟಿಸಿದನಾದರೆ ಮಾನವನು ತನ್ನಂತೆ ದೇವರನ್ನು ಸೃಷ್ಟಿಸಿದನೆಂದು ಹೇಳಲಾಗುತ್ತದೆ. ಇಂದು ನಾವು ನಮ್ಮ ದೇವಾಲಯಗಳಲ್ಲಿ ಕಾಣುತ್ತಿರುವುದು ನಿರ್ಜೀವ ಭಕ್ತರಾದ ನಮ್ಮ ನಿರ್ಜೀವ ಪ್ರತಿರೂಪಗಳೆಂಬುದರಲ್ಲಿ ಅಚ್ಚರಿಯೇನಿಲ್ಲ. ಅವುಗಳನ್ನು ಭಗವಂತನ ಸಜೀವ ಸ್ವರೂಪಗಳನ್ನಾಗಿ ನಾವು ಮಾರ್ಪಡಿಸಬೇಕಾದರೆ ನಮ್ಮ ಬದುಕಿನಲ್ಲಿ ಸಂಕ್ರಾಂತಿಯಾಗಬೇಕು. ನಮ್ಮ ಕೋಮುವಾರು ತಿಕ್ಕಾಟಗಳನ್ನು ಕೊನೆಗಾಣಿಸಬೇಕು. ದಲಿತರಿಗೆ ನೆರವು ನೀಡಬೇಕು ಮತ್ತು ಹಸನಾದ ಬಾಳನ್ನು ಬದುಕಬೇಕು. ಹಿಂದೂ ತ್ರಿಮೂರ್ತಿತ್ವದಲ್ಲಿ

ಹರಿ ಸ್ಥಿತಿಕರ್ತನಾದರೆ, ಹರ ಲಯಕರ್ತ, ಸಿರಿವಂತರು ಬಡವರಿಗೆ ರಕ್ಷಣೆಯ ಆಸರೆ ನೀಡದೆ ಅವರನ್ನು ತುಳಿಯವುದನ್ನು ಕಂಡಾಗ ಭಗವಂತನು ಹರನ ಉಗ್ರ ಸ್ವರೂಪವನ್ನು ತಳೆದು ಸರ್ವ ನಾಶದಲ್ಲಿ ತೊಡಗುತ್ತಾನೆ. ಬಡವ ಮತ್ತು ಬಲ್ಲಿದವರಿಬ್ಬರೂ ಸಮಭಾವದಿಂದ ಬೆರೆತಾಗ ಹರಿಹರರಿಬ್ಬರೂ ಒಂದುಗೂಡುತ್ತಾರೆ. ದೇಶಕ್ಕೆ ಚರಕದ ಕಾಣಿಕೆ ಕೊಡುವುದರ ಮೂಲಕ ಹರಿಹರೇಶ್ವರನ ಜೀವಂತ ಪ್ರತಿಮೆಯನ್ನು ಸ್ಥಾಪಿಸಬೇಕೆಂಬುದು ನನ್ನ ಮಹಾತ್ವಾಕಾಂಕ್ಷೆ, ಚರಕವು ತ್ಯಾಗದ ಸಂಕೇತ, ದೇವತಾ ಮೂರ್ತಿ ಪ್ರತಿಷ್ಠಾಪನೆಗೆ ತ್ಯಾಗವು ಅತ್ಯಗತ್ಯ."[೪]

ಆದಿಕರ್ನಾಟಕ ಸಭೆಯಲ್ಲಿ ಗಾಂಧೀಜಿಯು ಮಾಡಿದ ಭಾಷಣಗಳು ಬಹಳ ಪರಿಣಾಮಕಾರಿ ಆಗಿದ್ದವು. ಅಲ್ಲಿ ಅವರು ಆದಿಕರ್ನಾಟಕ ಜನರನ್ನು ಉದ್ದೇಶಿಸಿ ಈ ರೀತಿ ಮಾತನಾಡಿದರು, "ಕೈಮಗ್ಗದ ಕಸುಬು, ಮೋಚಿಯ ಕಸುಬು, ಎರಡೂ ದೇಶಕ್ಕೆ ಅತ್ಯಗತ್ಯ. ನೀವು ಮೇಳಗಾರರು, ಓಲಗ ಬಾರಿಸುತ್ತ ಸ್ವರ ಸಹಾಯದಿಂದ ನೀವು ಜನಗಳನ್ನು ಭಗವಂತನ ಹತ್ತಿರ ಕರೆದೊಯ್ಯಬಲ್ಲಿರಿ. ಪರದೇಶೀ ಬಟ್ಟೆ, ಗಿರಿಣಿಯ ನೂಲನ್ನು ಕೂಡ ಬಿಡಬೇಕೆಂದು ಸ್ವದೇಶಿ ಚಳವಳಿಯ ಬಗ್ಗೆ ನೇಕಾರರಿಗೆ ಹೇಳುತ್ತಿದ್ದೇನೆ. ಈ ದೇಶದಲ್ಲಿ ಗಿರಿಣಿಗಳು ಆರಂಭವಾದ ಮೇಲೆ ದಿನೇ ದಿನೇ ಕೈಮಗ್ಗದವರ ಸಂಖ್ಯೆ ಕ್ಷೀಣವಾಗುತ್ತಿದೆ. ಕೆಲವು ವರ್ಷಗಳ ಹಿಂದೆ ಇದ್ದುದರ ಅರ್ಧದಷ್ಟು ಕೂಡ ಈಗ ಇಲ್ಲ. ದೇಶದಲ್ಲಿ ನಡೆಯುವ ಎಲ್ಲ ನೆಯ್ಗೆಯನ್ನು ತಾನೇ ಮಾಡಬೇಕೆಂದು ಗಿರಣಿಗಳ ಉದ್ದೇಶ, ಇದರಿಂದ ಕೈಮಗ್ಗದವರ ಕಸಬು ಹಾಳಾಗುತ್ತದೆ. ಯುರೋಪಿನಲ್ಲಿ ಹೀಗೆಯೇ ಆಯಿತು. ನಿರುದ್ಯೋಗಿಗಳಾದ ನೇಕಾರರಿಗೆ ನೂಲುಗಾರರಿಗೆ ಅಲ್ಲಿ ಬೇರೆ ಉದ್ಯೋಗ ಸಿಕ್ಕಿತು. ಇಲ್ಲಿ ಇವರಿಗೆ ಯಾವ ಉದ್ಯೋಗವೂ ಇಲ್ಲ, ಆದ್ದರಿಂದ ಅನಾಥರಾಗಿದ್ದಾರೆ. ಈಗ ಮೋಜಿಗಳನ್ನುದ್ದೇಶಿಸಿ ಒಂದೆರಡು ಮಾತು, ಮೋಜಿಗಳೂ ಕೂಡ ಕೈಮಗ್ಗದವರಂತೆ ಕೆಲವೊಂದು ನಿಯಮಗಳನ್ನು ಪಾಲಿಸಬೇಕು. ನೇಕಾರರು ವಿದೇಶಿಯ ಅಥವಾ ಗಿರಿಣಿಯ ನೂಲನ್ನು ಹೇಗೆ ಬಳಸಕೂಡದೋ ಹಾಗೆಯೇ ನೀವಾದರೂ ಕೊಂದ ದನಗಳ ಚರ್ಮ ಬಳಸಕೂಡದು. ತಾವಾಗಿಯೇ ಸತ್ತ ದನಗಳ ಚರ್ಮವನ್ನು ಬಳಸಿಕೊಳ್ಳಬೇಕು. ನಿಮಗೆ ಉತ್ಸಾಹವರ್ಧಕವೆನಿಸುವಂತಿದ್ದರೆ ಒಂದು ವಿಷಯ ತಿಳಿಸಬಯಸುತ್ತೇನೆ. ಅದೇನೆಂದರೆ ನಾನೂ ಒಂದಾನೊಂದು ಕಾಲಕ್ಕೆ ಮೋಚಿಯ ಕೆಲಸವನ್ನು ಮಾಡಿದೆ, ಇಂದೂ ಮಾಡಬಲ್ಲೆ, ನಮ್ಮ ಆಶ್ರಮದಲ್ಲಿ ತೊಗಲನ್ನು ಹದಮಾಡುವ ವಿಭಾಗ ಇದೆ. ಅಲ್ಲಿ ಸತ್ತ ದನಗಳ ಚರ್ಮವನ್ನು ಹದಗೊಳಿಸಲಾಗುತ್ತದೆ. ಈ ಚರ್ಮವನ್ನು ಮೋಚಿಗಳಿಗೆ ಮಾರುತ್ತೇವೆ, ನೀವು ಬರೇ ಮೋಚಿಗಳಾದರೆ ಸಾಲದು, ಅದರಿಂದ ಹಣ ಬರುತ್ತದೆ. ಆದರೆ ಗೋರಕ್ಷಕರಾಗಿ ಪುಣ್ಯಗಳಿಸಿ, ಹಿಂದೂಗಳು ನಾವು, ನಮಗೆ ಗೋಮಾತೆ ಪ್ರಿಯ, ಪೂಜ್ಯ, ನಾನು ಮಾಡುತ್ತಿರುವ ಗೋರಕ್ಷಣೆ ಕೆಲಸದಲ್ಲಿ ನೆರವಾಗಿ."[೫]

೧೯೩೪ರಲ್ಲಿ ಹರಿಜನ ಅಭಿವೃದ್ಧಿಗಾಗಿ ಮೈಸೂರು ಪ್ರಾಂತ್ಯದಲ್ಲಿ ಪ್ರವಾಸ ಕೈಗೊಂಡಾಗ ದಾವಣಗೆರೆ ನಗರಕ್ಕೆ ಎರಡನೇ ಸಾರಿ ಬಂದರು. ದಿನಾಂಕ ೦೨.೦೩.೧೯೩೪ ರಂದು ರೈಲು

ನಿಲ್ದಾಣದಿಂದ ಆಗಿನ ತಂಬಾಕುಪೇಟೆ, ಕಾಳಮ್ಮನ ಗುಡಿ ರಸ್ತೆಯಲ್ಲಿ ಹರಿಜನ ಕೇರಿಗೆ ಬಂದರು. ಅವರನ್ನು ಬಹಳ ಉತ್ಸಾಹ ಸಡಗರದಿಂದ ಸ್ವಾಗತಿಸಲಾಯಿತು. ಅವರ ಜೊತೆಯಲ್ಲಿ ದಾವಣಗೆರೆಯ ಸ್ವಾತಂತ್ರ್ಯ ಹೋರಾಟಗಾರರಾದ ಕೊಟಗಿ ಸಿದ್ದಲಿಂಗಪ್ಪ, ಇಟಗಿ ವೇದಮೂರ್ತಿ, ಅಬ್ದುಲ್‌ಹಕ್, ಶಾಮನೂರು ಬಸವರಾಜಪ್ಪ, ಗೊಳಸಂಗಿ ಶಿವಯೋಗಪ್ಪ, ಶ್ರೀ ಹಳ್ಳಿಕೇರಿ ಗುದ್ದೆಪ್ಪ, ಕಳ್ಳಿತಿಪ್ಪಣ್ಣಶಾಸ್ತ್ರಿ, ಕಾಸಲ್ ಶ್ರೀನಿವಾಸ ಶೆಟ್ಟರು, ಶ್ರೀ ಮಂಜಪ್ಪನವರು, ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು, ರಾಚಯ್ಯ ಮಳಿಮಠ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ನಗರದ ಅನೇಕ ಗಣ್ಯರು ಇದ್ದರು.[೬]

ಹಾವೇರಿಯಿಂದ ದಾವಣಗೆರೆಗೆ ರೈಲಿನಲ್ಲಿ ಗಾಂಧೀಜಿ ಹೊರಟರು. ದಾವಣಗೆರೆಯಲ್ಲಿ ರೈಲು ನಿಲ್ದಾಣ ಜನಸಂದಣಿಯಿಂದ ಕಿಕ್ಕಿರಿದಿತ್ತು. ದಾರಿಯಲ್ಲಿ ರಾಣಿಬೆನ್ನೂರು ನಿಲ್ದಾಣದಲ್ಲಿ ಆ ಊರಿನ ಜನ ಗಾಂಧೀಜಿಯನ್ನು ಸತ್ಕರಿಸಿ, ಹರಿಜನ ನಿಧಿಗೂ, ಬಿಹಾರದ ನಿಧಿಗೂ ನಿಧಿಯನ್ನು ಸಮರ್ಪಿಸಿದರು.

ದಾವಣಗೆರೆಯಲ್ಲಿ ಎಲ್ಲೆಲ್ಲೂ ಉತ್ಸಾಹ, ಸಂಭ್ರಮದ ವಾತಾವರಣವಿತ್ತು. ಗಾಂಧೀಜಿ ಹರಿಜನ ಕೇರಿಯ ನಡುವೆ ಹಾದು ಬಂದರು. ಆ ಕೇರಿಯ ಸ್ವಚ್ಛತೆ, ಸೌಂದರ್ಯಗಳು ಗಾಂಧೀಜಿಯವರ ಮನ ಸೆಳೆದವು. ಅಲ್ಲಿ ಒಂದು ಬಾವಿ, ಅದಕ್ಕೊಂದು ಪಂಪು, ಹೆಂಗಸರಿಗೆ ಒಂದು ಗೃಹದ ಕೊಠಡಿ, ಪಕ್ಕದಲ್ಲಿಯೇ ಒಂದು ಉದ್ಯಾನವಿತ್ತು. ಕೇರಿಯಲ್ಲಿ ಮನೆಗಳೆಲ್ಲವೂ ಎತ್ತರವಾದ ತಳಹದಿಯ ಮೇಲೆ ಚೆನ್ನಾಗಿ ನಿರ್ಮಿಸಲ್ಪಟ್ಟಿದ್ದವು. ಎರಡೂ ಸಾಲುಗಳ ನಡುವೆ ಅಗಲವಾದ ಬೀದಿ ಮರಗಳು, ಅದಕ್ಕೆ ಸುತ್ತಲೂ ಜಗಲಿ ಇತ್ತು. ಅದರಲ್ಲಿ ಎಲ್ಲರೂ ಕುಳಿತುಕೊಳ್ಳುತ್ತಿದ್ದರು. ಅನಂತಶರ್ಮನೆಂಬ ಬಿ.ಎ. ಪದವೀಧರವಾಗಿದ್ದ ಬ್ರಾಹ್ಮಣನೊಬ್ಬ ಆ ಕೇರಿಯಲ್ಲಿ ವಾಸವಾಗಿ, ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದ. ದಾವಣಗೆರೆಯ ಮಹಿಳೆಯರ ಸಭೆಯೊಂದನ್ನು ಮುಗಿಸಿಕೊಂಡು ಗಾಂಧೀಜಿ ಹರಿಜನ ವಿದ್ಯಾರ್ಥಿಗಳ ಗೃಹ ಒಂದಕ್ಕೆ ಶಂಕುಸ್ಥಾಪನೆ ಮಾಡಿದರು. ದಾವಣಗೆರೆಯ ಪೌರಸಭೆ ಆ ನಿವೇಶನವನ್ನು ಉಚಿತವಾಗಿ ಕೊಟ್ಟಿದ್ದಲ್ಲದೆ, ಕಟ್ಟಡಕ್ಕೆ ಹಣ ಸಹಾಯವನ್ನು ಮಾಡಿತು. ದಾವಣಗೆರೆಯಲ್ಲಿ ಹರಿಜನ ಸೇವೆ ಪ್ರಗತಿಪರ ಆಗಿದ್ದುದನ್ನು ಕಂಡು ಗಾಂಧೀಜಿ ಊರಿನವರನ್ನು ಅಭಿನಂದಿಸಿದರು. ಹರಿಜನ ಶಬ್ದಕ್ಕೆ ಬದಲಾಗಿ 'ಆದಿಜನ' ಎಂಬ ಶಬ್ದವನ್ನು ಬಳಸಬೇಕು ಎಂಬ ಸೂಚನೆಗೆ ಉತ್ತರ ಕೊಡುತ್ತಾ, 'ಆದಿಜನ' ಎಂದರೆ ಪುರಾತನ ಕಾಲದಲ್ಲಿ ಇದ್ದವರು ಎಂದು ಅರ್ಥವಾಗುತ್ತದೆ, ಅದರಲ್ಲಿ ತಿರುಳು ಇಲ್ಲ, ಹರಿಜನ ಶಬ್ದವು ಬಹಳ ಅರ್ಥಗರ್ಭಿತವಾದದ್ದು ಎಂದು ಹೇಳಿದರು.[೭]

ಗಾಂಧೀಜಿಯವರು ದಾವಣಗೆರೆಗೆ ಬಂದಿದ್ದರು ಎಂಬ ವಿಷಯ ಬಹಳಷ್ಟು ಜನರಿಗೆ ಇಂದು ತಿಳಿದಿರಲಾರದು, ತಿಳಿದಿರುವವರು ಬಹಳ ಕಡಿಮೆ. ಸ್ವಾತಂತ್ರ್ಯ ಹೋರಾಟಗಾರರನ್ನು ಕೇಳಿದರೆ ಎಲ್ಲಾ ವಿಷಯ ತಿಳಿಯುತ್ತದೆ, ಆದರೆ ಇಂದು ಅವರು ಇಲ್ಲವಾಗುತ್ತಿದ್ದಾರೆ. ೧೯೨೭ರಲ್ಲಿ ದಾವಣಗೆರೆಗೆ ಗಾಂಧೀಜಿಯವರ ಆಗಮನವಾದಂದಿನಿಂದ ಅಲ್ಲಿ ಸ್ವಾತಂತ್ರ್ಯ ಚಳವಳಿಗಳು ಆರಂಭಗೊಂಡವು. ಆದರೆ ಬೆರಳೆಣಿಕೆಯಷ್ಟು ಮಂದಿ ಮಾತ್ರ ಚಳವಳಿಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಸ್ವಾತಂತ್ರ್ಯ

ಹೋರಾಟದ ಜ್ವಾಲೆ ದೇಶದ ತುಂಬೆಲ್ಲ ಪ್ರಸರಿಸಿತ್ತು. ಇದರ ಪ್ರಭಾವದಿಂದ ದಾವಣಗೆರೆಯ ಜನತೆ ದೂರ ಉಳಿಯಲು ಸಾಧ್ಯವಾಗಲಿಲ್ಲ. ೧೯೩೦ರ ಹೊತ್ತಿಗೆ ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚುತ್ತಾ ಹೋದಂತೆಲ್ಲ ಅಕ್ಷರಸ್ಥರು ಗಾಂಧೀಜಿಯವರ ಆಕರ್ಷಣೆಯಿಂದ ಅವರ ಅನುಯಾಯಿಗಳಾದರು.

ಗಾಂಧೀಜಿಯವರ ಆಕರ್ಷಣೆಗೆ ಒಳಗಾದವರನ್ನು ಎರಡು ಗುಂಪುಗಳನ್ನಾಗಿ ಮಾಡಬಹುದು, ಒಂದು ಗುಂಪು ಗಾಂಧೀಜಿಯವರ ಅಹಿಂಸೆ, ಸತ್ಯಾಗ್ರಹದ ಮಾದರಿಯ ಚಳವಳಿಯನ್ನು ಒಪ್ಪಿಕೊಂಡವರು, ಮತ್ತೊಂದು ಗುಂಪು ಗಾಂಧೀಜಿಯವರ ಆಕರ್ಷಣೆಗೆ ಒಳಗಾಗಿಯೂ ತೀವ್ರವಾದಿಗಳನ್ನು ಒಪ್ಪಿಕೊಂಡವರು. ಅಂತಹವರಲ್ಲಿ ಇಟಗಿ ವೇದಮೂರ್ತಿಯವರು ಹಾಗೂ ಮುರಿಗೆಪ್ಪನವರು ಪ್ರಮುಖರು. ಗಾಂಧೀಜಿ ಯವರನ್ನು ಶ್ರದ್ಧಾಪೂರ್ವಕವಾಗಿ ಒಪ್ಪಿಕೊಂಡವರಲ್ಲಿ ಪ್ರಮುಖರೆಂದರೆ, ಎಸ್. ನಿಜಲಿಂಗಪ್ಪ, ಹರಿಹರದ ಗುಂಡೂರಾಯರು, ಬಳ್ಳಾರಿ ಸಿದ್ಧಮ್ಮನವರು, ಕಾಸಲ ಶ್ರೀನಿವಾಸ ಶೆಟ್ಟರು, ಬಳ್ಳಾರಿ ವಾಸುದೇವರಾವ್ ಇನ್ನೂ ಮುಂತಾದವರು. ಹೋರಾಟದ ಮಾದರಿಗಳು ಭಿನ್ನವಾಗಿದ್ದರೂ ಅವರುಗಳು ಅನೇಕ ಬಾರಿ ಒಟ್ಟಾಗಿ ಚಳವಳಿಗೆ ಯುವಕರನ್ನು ಆಕರ್ಷಿಸಿ, ಸಂಘಟಿಸಿದರು. ಇದರ ಫಲವಾಗಿ ಚಿತ್ರದುರ್ಗ ಹಾಗೂ ದಾವಣಗೆರೆಯ ಯುವಕರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹಚ್ಚಿದರು. ಎಲ್ಲೆಲ್ಲೂ ಹೋರಾಟದ ಉತ್ಸಾಹವನ್ನು ತುಂಬಿ ಚಳವಳಿಯನ್ನು ತೀವ್ರಗೊಳ್ಳುವಂತೆ ಮಾಡಿದರು. ಜನರ ಮನಸ್ಸಿನ ಮೇಲೂ ಇದರ ಪ್ರಭಾವವುಂಟಾಗಿ ಚಳವಳಿಗಾರರಿಗೆ ತನು ಮನ ಧನಗಳ ಸಹಾಯ, ಸಹಕಾರಗಳನ್ನು ನೀಡಿ ಪ್ರೋತ್ಸಾಹಿಸಿದರು.

ದಾವಣಗೆರೆ ಸ್ವಾತಂತ್ರ್ಯ ಹೋರಾಟದ ಮುಖ್ಯ ಕೇಂದ್ರ ಸ್ಥಳಗಳಲ್ಲಿ ಒಂದಾಯಿತು. ಸ್ವದೇಶಿ ಚಳವಳಿ ಮತ್ತು ಕಾನೂನು ಭಂಗ ಚಳವಳಿಯ ಪ್ರಭಾವ ದೇಶದುದ್ದಕ್ಕೂ ಹಬ್ಬಿ ದಾವಣಗೆರೆಯ ಜನತೆಯ ಮೇಲೂ ಪರಿಣಾಮ ಉಂಟುಮಾಡಿತು. ಚಿತ್ರದುರ್ಗ ಹಾಗೂ ದಾವಣಗೆರೆಗಳಲ್ಲಿ ಪ್ರತಿಭಟನೆ, ಹರತಾಳ, ವ್ಯಾಪಕವಾಗಿ ಹಬ್ಬಿತು. ಈ ಸಂದರ್ಭದಲ್ಲಿ ಹರ್ಡೇಕರ್ ಮಂಜಪ್ಪನವರು ಈ ಭಾಗಕ್ಕೆ ಭೇಟಿ ನೀಡಿದ ನಂತರ ಜನರು ಮತ್ತಷ್ಟು ಉತ್ಸಾಹಗೊಂಡರು, ಹೋರಾಟ ತೀವ್ರ ಗೊಂಡಿತು. ಹೋರಾಟದ ವರದಿಯನ್ನು ತರಿಸಿಕೊಂಡ ಗಾಂಧೀಜಿಯವರು, ದಾವಣಗೆರೆಗೆ ಭೇಟಿ ನೀಡಲು ನಿರ್ಧರಿಸಿದರು. ಗಾಂಧೀಜಿಯವರು ಮಾರ್ಚ್ ೨, ೧೯೩೪ರಂದು ದಾವಣಗೆರೆಗೆ ಆಗಮಿಸಿ ಜನರನ್ನು ಉದ್ದೇಶಿಸಿ ಮಾತನಾಡಿದರು. ಡಾ. ಶಂಕರಪ್ಪನವರು ಹೇಳುವಂತೆ "ದೇಶಕ್ಕೆ ಸ್ವಾತಂತ್ರ್ಯ ದೊರಕುವವರೆಗೆ ಹೋರಾಟ ನಿಲ್ಲಿಸುವುದಿಲ್ಲ" ಎಂದು ಜನರೆಲ್ಲರೂ ಒಕ್ಕೊರಲಿನಿಂದ ಕೂಗಿ ಹೇಳಿದರಂತೆ. ದಾವಣಗೆರೆಯಲ್ಲಿ ಉಳಿಯುವ ಸಂದರ್ಭ ಬಂದಾಗ ದಿವಂಗತ ಕಾಸಲ್ ಶ್ರೀನಿವಾಸ ಶೆಟ್ಟರು ಹಾಗೂ ಉಳಿದವರೆಲ್ಲ ಒಟ್ಟಾಗಿ ಸೇರಿ ಎರಡು ದಿನಗಳ ಕಾಲ ದಾವಣಗೆರೆಯಲ್ಲಿ ಉಳಿಯುವಂತೆ ಕೇಳಿಕೊಂಡರಂತೆ. ಶಿವಳ್ಳಿ ಸಿದ್ದಪ್ಪನವರು ಹೇಳುವಂತೆ ಗಾಂಧೀಜಿಯವರು 'ಬಿಲ್‌ಕುಲ್' ನಿರಾಕರಿಸಿದರಂತೆ. ಜನತೆಯ ಒತ್ತಾಯ ಹೆಚ್ಚಾದಂತೆ ಶರತ್ತಿನ ಮೇಲೆ ಉಳಿಯಲು ಒಪ್ಪಿದರು.

ಶರತ್ತೇನೆಂದರೆ ನಗರದಲ್ಲಿ ಹರಿಜನ ವಿದ್ಯಾರ್ಥಿನಿಲಯ ಸ್ಥಾಪನೆಯಾಗಬೇಕು. ಅದಕ್ಕೆ ಸ್ಥಳವನ್ನು ದಾನ ನೀಡಬೇಕು ಮತ್ತು ಕಟ್ಟಡಕ್ಕೆ ಹಣ ಸಂಗ್ರಹಿಸಬೇಕು ಎಂಬುದು. ದಿವಂಗತ ಕಾಸಲ್ ಶ್ರೀನಿವಾಸ ಶೆಟ್ಟರು, ಮುರಿಗೆಪ್ಪನವರು ಇನ್ನೂ ಮುಂತಾದವರು ಗಾಂಧೀಜಿಯ ಮಾತಿಗೆ ತಕ್ಷಣವೆ ಒಪ್ಪಿಗೆ ನೀಡಿ ೦೨.೦೩.೧೯೩೪ರಂದೇ ಹರಿಜನ ಹಾಸ್ಟೆಲ್‌ವೊಂದಕ್ಕೆ ಶಂಕುಸ್ಥಾಪನೆ ಸಮಾರಂಭಕ್ಕೆ ಗಾಂಧೀಜಿಯವರನ್ನು ಒಪ್ಪಿಸಿದರಂತೆ. ಗಾಂಧೀಜಿಯವರನ್ನು ನಿವೇಶನದ ಸ್ಥಳಕ್ಕೆ ಕರೆತಂದರು. ಗಾಂಧೀಜಿಯವರೆ ಸ್ವತಃ ಇನ್ನೂರು ಹೆಜ್ಜೆಗಳನ್ನು ಚಚ್ಚೌಕರವಾಗಿ ಅಳೆದು ತೋರಿಸಿ, ಹರಿಜನ ವಿದ್ಯಾರ್ಥಿ ನಿಲಯಕ್ಕೆ ನಿವೇಶನವನ್ನು ದಾನವಾಗಿ ಪಡೆದ ನಂತರ, ಅಂದೇ ವಿದ್ಯಾರ್ಥಿ ನಿಲಯಕ್ಕೆ ಅಡಿಗಲ್ಲು ಸಮಾರಂಭವೇರ್ಪಟ್ಟಿತು. ಈ ಸಮಾರಂಭದಲ್ಲಿ ಗಾಂಧೀಜಿಯವರಿಗೆ ಹಾಕಿದ ಹೂವಿನ ಹಾರವನ್ನು ಹರಾಜಿಗೆ ಹಾಕಲಾಯಿತು. ಹರಾಜಿನಿಂದ ಬಂದ ಹಣವನ್ನು ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲು ಗಾಂಧೀಜಿಯವರು ಒಪ್ಪಿಗೆ ನೀಡಿದರು.

ಗಾಂಧೀಜಿಯವರು ಸ್ವಹಸ್ತದಿಂದ ಇಂತಹ ಕಟ್ಟಡಗಳಿಗೆ ಅಡಿಗಲ್ಲು ಹಾಕಿರುವುದು ಇಡೀ ಭಾರತದಲ್ಲಿ ಎರಡು ಕಟ್ಟಡಗಳಿಗೆ ಮಾತ್ರ. ಅಂತಹ ಕಟ್ಟಡಗಳಲ್ಲಿ ದಾವಣಗೆರೆಯ ಹರಿಜನ ವಿದ್ಯಾರ್ಥಿ ನಿಲಯದ ಕಟ್ಟಡವೂ ಒಂದು ಎಂಬುದು ನಗರದ ಹೆಗ್ಗಳಿಕೆಯೂ ಹೌದು. ಈಗ ದೊರೆತಿರುವ ಮಾಹಿತಿಯ ಪ್ರಕಾರ ಇದು ಮೊದಲನೆಯ ಹರಿಜನ ವಿದ್ಯಾರ್ಥಿ ನಿಲಯ. ಇದಾದ ನಂತರ ಮುರಗಿಮಠದವರು ಇನ್ನೊಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಇಂದು ದಾವಣಗೆರೆಯಲ್ಲಿ ಅನೇಕ ಜಾತಿಯ ವಿದ್ಯಾರ್ಥಿ ನಿಲಯಗಳು ಸ್ಥಾಪನೆಗೊಂಡಿವೆ. ಇಷ್ಟೊಂದು ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೆ 'ಹರಿಜನ ವಿದ್ಯಾರ್ಥಿ ನಿಲಯ' ಸ್ಫೂರ್ತಿಯಾಗಿದೆ. ಗಾಂಧೀಜಿಯ ನಿಸ್ಪೃಹದ ಕಾಳಜಿ ಅಗೋಚರವಾಗಿ ಎಲ್ಲ ಜಾತಿಯ ಜನರ ಮೇಲೂ ಪ್ರಭಾವ ಬೀರಿದೆ. ಗಾಂಧೀಜಿಯವರ ಮಹತ್ತರ ಪ್ರಭಾವವು ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೆ ಅಷ್ಟೇ ಕಾರಣವಾಗಲಿಲ್ಲ. ಅವರ ದಾವಣಗೆರೆಯ ಭೇಟಿ ಸ್ವಾತಂತ್ರ್ಯ ಹೋರಾಟದ ಧಿಕ್ಕನ್ನೆ ಬದಲಾಯಿಸಿತು. ಇವರ ಪ್ರಭಾವವು ದೇಶದ ತುಂಬೆಲ್ಲ ಮುಂದುವರೆಯಿತು. ದಾವಣಗೆರೆಯಲ್ಲಿ ಅನೇಕ ಚಳವಳಿಗಳು ನಡೆದವು. ದಾವಣಗೆರೆಯಲ್ಲಿ ಗಾಂಧೀಜಿಯವರ ಪ್ರಭಾವದಿಂದ ಚಳವಳಿಗಳು ಯಶಸ್ವಿಯಾದವು.[೮]

೧೯೩೨ರಲ್ಲಿ ನಡೆದ ಸ್ವದೇಶಿ ಚಳವಳಿಯಲ್ಲಿ ಖಾದಿ ಕೇಂದ್ರದ ಕಾರ್ಯಕರ್ತರು ದಾವಣಗೆರೆಯ ಪ್ರತಿ ಅಂಗಡಿಯ ಮುಂದೆಯು ವಿದೇಶಿ ಬಟ್ಟೆಗಳ ವಿರುದ್ಧ ಚಳವಳಿ ನಡೆಸಿ ಯಶಸ್ವಿಯಾದರು. ಮಾರ್ಚ್ ತಿಂಗಳಿನ ಹೋಳಿ ಹಬ್ಬದ ದಿನ ದಾವಣಗೆರೆಯಲ್ಲಿ ವಿದೇಶಿ ವಸ್ತುಗಳ ದಹನ ಕಾರ್ಯ ನಡೆಯಿತು. ೧೯೩೪ರಲ್ಲಿ ಹಾಸ್ಟೆಲ್ ಶಂಕು ಸ್ಥಾಪನೆಯು ಆದ ನಂತರ ಇದರ ಖಜಾಂಚಿಯಾಗಿದ್ದವರು ಶ್ರೀ ಚನ್ನಗಿರಿ ರಂಗಪ್ಪನವರು. ಆ ಸಂದರ್ಭದಲ್ಲಿ ದಾವಣಗೆರೆಯ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಒಡವೆಗಳನ್ನು ದಾನ ಮಾಡಿದರು.[೯]

೧೯೩೪ರ ಮಾರ್ಚ್ ೨ ಶುಕ್ರವಾರ ಸಾಯಂಕಾಲ ಸುಮಾರು ನಾಲ್ಕು ಗಂಟೆಗೆ ಮಹಾತ್ಮ ಗಾಂಧೀಜಿಯವರು ಗಂಗಾಧರರಾವ್ ದೇಶಪಾಂಡೆ ಮತ್ತು ಠಕ್ಕರ್ ಬಾಪಾರವರೊಂದಿಗೆ ಹರಿಜನೋದ್ಧಾರ ಕಾರ್ಯಕ್ಕಾಗಿ ಹಣ ಸಂಗ್ರಹಿಸಲು ದಾವಣಗೆರೆಯಿಂದ ಹರಪನಹಳ್ಳಿ ಮಾರ್ಗವಾಗಿ ಬಳ್ಳಾರಿ ಜಿಲ್ಲಾ ಸಂಚಾರವನ್ನು ಆರಂಭಿಸಿದರು. ಹರಪನಹಳ್ಳಿಯಲ್ಲಿ ಗಾಂಧೀಜಿಯವರು ಒಂದು ಪುಟ್ಟ ಭಾಷಣ ಮಾಡಿದರು. ಅವರು ಸಂಜೆ ಪ್ರೌಢಶಾಲೆಯ ಒಂದು ಕೋಣೆಯಲ್ಲಿ ತಂಗಿದ್ದರು. ಶೆಟ್ಟರ ಚೂಡಪ್ಪನವರ ಖಾದಿ ಅಂಗಡಿಗೂ ಭೇಟಿಕೊಟ್ಟರು. "ಹಮ್ ಬನಿಯಾ ಹೈ ಪೈಸೆ ಲಾವ್" ಎಂದರು ಗಾಂಧೀಜಿ, ಆಗ ಚೂಡಪ್ಪ ಹತ್ತು ರೂಪಾಯಿ ಕೊಟ್ಟು ಕನ್ನಡದಲ್ಲಿ 'ಗಾಂಧಿ' ಎಂಬ ಸಹಿ ಪಡೆದರು. ಗಾಂಧೀಜಿಯವರ ಕನ್ನಡದ ಕೈಬರಹಕ್ಕೆ ಶಾಲೆಯಲ್ಲಿ ನೂರಾರು ರೂಪಾಯಿ ಸಂಗ್ರಹವಾಯಿತು. ಹರಪನಹಳ್ಳಿ ನೆಲ್ಲುಕುದುರಿ ಗುರುಬಸಪ್ಪ, ಇಜಾರಿ ವಸುಪಾಲಪ್ಪ, ಇಜಂತಕರ್ ಶಂಕ್ರಪ್ಪ ಇವರು ಬೆಳ್ಳಿ ನಾಣ್ಯಗಳನ್ನು ಬೆಳ್ಳಿ ತಟ್ಟೆಯಲ್ಲಿಟ್ಟು ಗಾಂಧೀಜಿಗೆ ಅರ್ಪಿಸಿದರು. ಗಾಂಧೀಜಿ ಅದನ್ನು ತಟ್ಟೆ ಸಹಿತ ಹರಾಜು ಹಾಕಿದರು. ಹರಾಜಿನಲ್ಲಿ ಹಣ ಕೊಟ್ಟು ತಮ್ಮ ತಟ್ಟೆಗಳನ್ನು ತಾವೇ ಪಡೆದರು. ಅಲ್ಲಿಂದ ಹರಿಹರಕ್ಕೆ ಹೋಗುವಾಗ ಟೀಕೂರು ಸುಬ್ರಹ್ಮಣ್ಯಂ, ಇಜಾರಿ ವಸುಪಾಲಪ್ಪ, ಟಿ.ಬಿ. ಕೇಶವರಾವ್ ಗಾಂಧೀಜಿಯವರನ್ನು ಅನುಸರಿಸಿ ಬಂದರು. ದಾರಿಯಲ್ಲಿ ದುಗ್ಗಾವತಿ, ತೆಲಗಿ, ನೀಲಗುಂದಗಳಲ್ಲಿ ಅಲ್ಲಿ ಸೇರಿದ್ದ ಜನರು ಗಾಂಧೀಜಿಗೆ ನಿಧಿಯನ್ನು ಅರ್ಪಿಸಿದರು.

ಗಾಂಧೀಜಿಯವರು ಹರಪನಹಳ್ಳಿಗೆ ಬಂದು ಹೋದ ಮೇಲೆ ಅಲ್ಲಿ ಸ್ವಾತಂತ್ರ್ಯ ಚಳವಳಿ ಉಗ್ರರೂಪವನ್ನು ತಾಳಿತು. ಅಲ್ಲಿ ಬ್ರಿಟಿಷರ ವಿರುದ್ಧ ಅನೇಕ ಹೋರಾಟಗಳು ನಡೆದವು. ಅವುಗಳ ಮುಖಂಡತ್ವವನ್ನು ಇಜಾರಿ ವಸುಪಾಲಪ್ಪನವರೇ ವಹಿಸಿಕೊಂಡಿದ್ದರು.[೧೦] ಗಾಂಧೀಜಿಯವರ ಮಾರ್ಗದರ್ಶನದಂತೆ ಹಾಗೂ ಅವರು ಹಾಕಿಕೊಟ್ಟ ಬುನಾದಿಯ ಮೇಲೆ ಹೋರಾಟಗಳು ರೂಪುಗೊಂಡವು. ರಾಷ್ಟ್ರನಾಯಕನಾಗಿ ಬಿಂಬಿತರಾಗಿದ್ದ ಗಾಂಧೀಜೀಯವರ ದಾವಣಗೆರೆ ಭೇಟಿ ಸಹಜವಾಗಿಯೇ ಸ್ಥಳೀಯರಲ್ಲಿ ಸ್ವಾತಂತ್ರ್ಯ ಹೋರಾಟದ ಕುರಿತು ಕುತೂಹಲ ಮತ್ತು ಜಾಗೃತಿಯನ್ನು ಮೂಡಿಸಿತು.

ಅಡಿಟಿಪ್ಪಣಿಗಳು

೧. ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮ, **ಗಾಂಧೀ ಮತ್ತು ಕರ್ನಾಟಕ**, ಶ್ರೀರಾಮಚಂದ್ರ ಉಡಪಿ ಪ್ರಕಾಶನ, ಮೈಸೂರು ರಾಜ್ಯ ಗಾಂಧೀಸ್ಮಾರಕ ನಿಧಿ, ೧೯೭೦, ಪು. ೨೧೩

೨. ಸ್ವಾತಂತ್ರ್ಯ ಹೋರಾಟಗಾರರ ವರದಿ

೩. ಅದೇ ಪು. ೨೧೪

೪. ಡಿ.ಜಿ. ತೆಂಡೂಲ್ಕರ್, **ಮಹಾತ್ಮ ಸಂಪುಟ-೨**, ಪಬ್ಲಿಕೇಷನ್ ಡಿವಿಜನ್ ಮಿನಿಸ್ಟ್ರಿ ಆಫ್ ಇನ್‌ಫಾರ್‌ಮೇಶನ್ ಅಂಡ್ ಬ್ರಾಡ್‌ಕಾಸ್ಟಿಂಗ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ೧೯೭೫, ಪು. ೪೩೨

೫. ಅದೇ ಪು. ೨೧೯

೬. ಸ್ವಾತಂತ್ರ್ಯ ಹೋರಾಟಗಾರರ ವರದಿ

೭. ಅದೇ ಪು. ೨೭೫

೮. ಎಂ.ಜಿ. ಈಶ್ವರಪ್ಪ, **ಶತಮಾನದ ದಾವಣಗೆರೆ**, ಚಂಪಲಾಲ್ ಬಿ.ಡೆಲ್ಲಾರಿಯಾ ಪ್ರಕಾಶನ, ದಾವಣಗೆರೆ, ೨೦೦೧, ಪು. ೩೦

೯. ಟಿ. ಗಿರಿಜ, **ದಾವಣಗೆರೆ : ಇದು ನಮ್ಮ ಜಿಲ್ಲೆ**, ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧, ಪು. ೪೮

೧೦. ಕುಂ.ಬಾ. ಸದಾಶಿವಪ್ಪ, **ಹಲವು ಹನ್ನೊಂದು ಹರಪನಹಳ್ಳಿ**, ಮಾಲತೇಶ ಪ್ರಕಾಶನ, ಹರಪನಹಳ್ಳಿ, ೨೦೦೨, ಪು. ೨೯

* * *

ಅಧ್ಯಾಯ ೫

ಹತ್ತಿ, ಹತ್ತಿಮಿಲ್‌ಗಳು ಮತ್ತು ಖಾದಿ ಉದ್ದಿಮೆ

ಅಧ್ಯಾಯ ೫

ಹತ್ತಿ, ಹತ್ತಿಮಿಲ್‌ಗಳು ಮತ್ತು ಖಾದಿ ಉದ್ದಿಮೆ

ಹತ್ತಿ

ವ್ಯಾಪಾರಸ್ಥರಾಗಿ ಭಾರತಕ್ಕೆ ಆಗಮಿಸಿದ ಬ್ರಿಟಿಷರು ಕ್ರಮೇಣ, ತಮ್ಮ ವಸಾಹತು ನೀತಿಯನ್ನು ಜಾರಿಗೊಳಿಸುವುದರ ಮೂಲಕ, ಭಾರತವನ್ನು ತಮ್ಮ ಅಧೀನಕ್ಕೆ ತಂದುಕೊಂಡರು. ಈ ಕೆಲಸಕ್ಕೆ ಅವರು ಬಳಸಿದ ಹಾದಿ ಮತ್ತು ತಂತ್ರ ವಿಭಿನ್ನವಾದದ್ದು. ಕೃಷಿ ಪ್ರಧಾನ ದೇಶವಾದ ಭಾರತದಲ್ಲಿ ಅವರು ಕೃಷಿಯನ್ನೇ ಅಸ್ತ್ರವನ್ನಾಗಿ ಬಳಸಿಕೊಂಡರು. ಕೃಷಿಯನ್ನು ವಾಣಿಜ್ಯೀಕರಿಸುವುದು ವಸಾಹತು ತಂತ್ರಗಳಲ್ಲೊಂದು. ಭಾರತದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು ಬ್ರಿಟಿಷರ ಉದ್ದೇಶವಾಗಿರಲಿಲ್ಲ. ಬ್ರಿಟನ್ನಿನ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾವಸ್ತುಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸುವುದು ಅವರ ಉದ್ದೇಶವಾಗಿತ್ತು. ಈ ಕಾರಣದಿಂದಾಗಿ ಅನೇಕ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಬಡ್ತಿ ಹೊಂದಿದವು. ಹತ್ತಿಯೂ ಅವುಗಳಲ್ಲಿ ಒಂದು.

ಬ್ರಿಟಿಷರು ಭಾರತದಲ್ಲಿ ನಡೆಸಿದ ಹತ್ತಿ ರಾಜಕೀಯ ಗಮನಾರ್ಹವಾದದ್ದು. ಹತ್ತಿಯನ್ನು ಬೆಳೆಯುವುದಕ್ಕೆ ವ್ಯಾಪಕ ಬೆಂಬಲ ನೀಡಲಾಯಿತು. ಇದರರ್ಥ ಕೃಷಿಕರಿಗೆ ಇಲ್ಲವೆ ಕುಶಲಕರ್ಮಿಗಳಿಗೆ ಲಾಭವಾಯಿತು ಎಂದಲ್ಲ. ಬ್ರಿಟಿಷ್ ವರ್ತಕರು, ಸ್ಥಳೀಯ ಶ್ರೀಮಂತ ವರ್ತಕರು, ಶ್ರೀಮಂತ ಜಮೀನ್ದಾರರು ಮತ್ತು ಮಧ್ಯವರ್ತಿಗಳು ಇದರ ಸಂಪೂರ್ಣ ಲಾಭವನ್ನು ಪಡೆದುಕೊಂಡರು. ಇವರಲ್ಲಿ ಅನೇಕರು ಹತ್ತಿ ಮಿಲ್‌ಗಳನ್ನೂ ಸ್ಥಾಪಿಸಿಕೊಂಡರು. ಇವರು ಹೊಸ ತಂತ್ರಜ್ಞಾನವನ್ನು ಯುರೋಪಿನಿಂದ ಪಡೆದುಕೊಂಡರು. ಈ ಕಾರಣದಿಂದಾಗಿ ಹತ್ತಿ ಬೆಳೆಯುವ ಹೊಸ ಹೊಸ ಎಸ್ಟೇಟ್‌ಗಳು ಹುಟ್ಟಿಕೊಳ್ಳಲಾರಂಭಿಸಿದವು. ಅಮೆರಿಕಾದಲ್ಲಿ ಆಂತರಿಕ ಕಲಹ ಕಾಣಿಸಿಕೊಂಡು ಅಲ್ಲಿಂದ ಯುರೋಪಿಗೆ ಕಳುಹಿಸಲಾಗುತ್ತಿದ್ದ ಹತ್ತಿಯಲ್ಲಿ ಇಳಿಮುಖ ಕಾಣಿಸಿಕೊಂಡಾಗ ಸಹಜವಾಗಿಯೇ ಭಾರತದ ಹತ್ತಿ ಬೆಳೆಯುವ ಪ್ರದೇಶಗಳು ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಂಡವು.[೧]

ಬ್ರಿಟಿಷರು ಈ ವಾಣಿಜ್ಯ ಬೆಳೆಯನ್ನು ಬಳಸಿಕೊಂಡಿರುವ ರೀತಿ ಭಾರತದ ಅರ್ಥವ್ಯವಸ್ಥೆಗೆ ಮಾರಕವಾಗಿತ್ತು. ಕೈಗಾರಿಕಾ ಪ್ರಧಾನ ದೇಶವಾದ ಬ್ರಿಟನ್ ಹತ್ತಿಯನ್ನು ತನ್ನ ದೇಶದ ಕೈಗಾರಿಕಾಭಿವೃದ್ಧಿಗೆ ಬೇಕಾಗುವ ರೀತಿಯಲ್ಲಿ ಬಳಸಿಕೊಂಡಿತು. ಭಾರತದ ಕೃಷಿಕರು, ಹತ್ತಿ ಗಿರಣಿಗಳನ್ನು ನಡೆಸುತ್ತಿದ್ದವರು, ಸ್ಥಳೀಯ ಹತ್ತಿ ವ್ಯಾಪಾರಸ್ಥರೆಲ್ಲರೂ ಈ ಬೆಳವಣಿಗೆಯಿಂದ ಕಂಗಾಲಾದರು. ಹೊಸ ತಂತ್ರಜ್ಞಾನದೊಂದಿಗೆ ಸಿದ್ಧವಾಗಿ ಭಾರತಕ್ಕೆ ಪ್ರವೇಶಿಸಿದ ಹತ್ತಿ ಬಟ್ಟೆಗಳು ನಯವಾಗಿ, ಆಕರ್ಷಕವಾಗಿ, ಕಡಿಮೆ ಬೆಲೆಯಿಂದ ಕೂಡಿದ್ದವು. ಇದು ಸ್ಥಳೀಯ ಗ್ರಾಮ ಮತ್ತು ನಗರ

ವ್ಯವಸ್ಥೆಗಳೆರಡರ ಮೇಲೂ ಕೆಟ್ಟ ಪರಿಣಾಮಗಳನ್ನು ಬೀರಿತು. ಬ್ರಿಟನ್ನಿನ ಅರ್ಥವ್ಯವಸ್ಥೆಗೆ ಪೂರಕವಾದ ಅರ್ಥವ್ಯವಸ್ಥೆಯೊಂದು ಕಾಣಿಸಿಕೊಳ್ಳಲಾರಂಭಿಸಿತು. ಇದರ ವಿರುದ್ಧ ಭಾರತದಲ್ಲಿ ಹೋರಾಟಗಳು ಕಾಣಿಸಿಕೊಂಡವು. ಗಾಂಧೀಜಿಯವರು ತಮ್ಮ ಸ್ವದೇಶಿ ಹೋರಾಟದಲ್ಲಿ ಹತ್ತಿಯನ್ನೇ ಪ್ರಧಾನವಾಗಿ ಆಯ್ಕೆಮಾಡಿಕೊಂಡರು. ಸ್ಥಳೀಯವಾಗಿ ಉತ್ಪಾದನೆಗೊಳ್ಳುವ ಹತ್ತಿ ಬಟ್ಟೆಗಳನ್ನೇ ಬಳಸಬೇಕು ಹಾಗೂ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಬೇಕೆಂದು ಕರೆಕೊಟ್ಟರು. ಹತ್ತಿ ಬೆಳೆಗೆ ಪ್ರಸಿದ್ಧವಾಗಿದ್ದ ದಾವಣಗೆರೆಯಲ್ಲಿ ಸಹಜವಾಗಿಯೇ ಗಾಂಧಿ ನೇತೃತ್ವದ ಈ ಹೋರಾಟ ತುಂಬ ಚುರುಕಿನಿಂದ ಹಾಗೂ ಉಗ್ರವಾಗಿ ನಡೆಯಿತು.[೨]

ಹತ್ತಿ ಮಿಲ್‌ಗಳು

ಹತ್ತೊಂಬತ್ತನೆ ಶತಮಾನದ ಆರಂಭದಲ್ಲಿ ಫ್ರಾನ್ಸಿಸ್ ಬುಕನನ್ ಮೈಸೂರು ರಾಜ್ಯದಲ್ಲಿ ಪ್ರವಾಸ ಕೈಗೊಂಡನು. ಕಲ್ಕತ್ತದಲ್ಲಿನ ಈಸ್ಟ್ ಇಂಡಿಯಾ ಕಂಪನಿಯ ಆಜ್ಞೆಯ ಮೇರೆಗೆ ದಕ್ಷಿಣ ಭಾರತದ ಕೆಲವೊಂದು ಭಾಗಗಳ ಸಂಪನ್ಮೂಲಗಳನ್ನು ಕುರಿತು ವರದಿಯನ್ನು ಕಂಪನಿಗೆ ಒಪ್ಪಿಸಿದನು. ಈ ಭಾಗದಲ್ಲಿ ಬರುವ ಭೂಮಿ, ನೀರು, ಕೃಷಿ, ಕಲೆ, ಖನಿಜ ಸಂಪತ್ತು, ಕೈಗಾರಿಕೆ, ಗ್ರಾಮೀಣ ಉದ್ದಿಮೆಗಳು, ಗುಡಿಕೈಗಾರಿಕೆಗಳು, ಇಲ್ಲಿನ ಜನರ ಪರಿಸ್ಥಿತಿಯನ್ನು ಕುರಿತು ವಿವರಗಳನ್ನು ಒಪ್ಪಿಸುವುದು ಅವನ ಮುಖ್ಯ ಉದ್ದೇಶವಾಗಿತ್ತು. ಕ್ರಿ.ಶ. ೧೮೦೧ರಲ್ಲಿ ಕುದುರೆಗಳ ಮೇಲೆ ಹಲವು ಜನರ ತಂಡದೊಡನೆ ಅವನು ಪ್ರವಾಸ ಕೈಗೊಂಡನು. ಅವನ ವರದಿ ಮೂರು ಸಂಪುಟಗಳಲ್ಲಿ ಕ್ರಿ.ಶ. ೧೮೦೭ರಲ್ಲಿ ಪ್ರಕಟವಾಯಿತು.[೩]

ಕ್ರಿ.ಶ. ೧೮೦೧ರ ಏಪ್ರಿಲ್ ತಿಂಗಳು ಬುಕನನ್ ಶಿವಮೊಗ್ಗದ ಕಡೆಯಿಂದ ದಾವಣಗೆರೆ ಕಡೆಗೆ ಬಂದನು. ಮಲೆಬೆನ್ನೂರು, ಹರಿಹರ, ಬಸವಾಪಟ್ಟಣ, ಸಾಸ್ವೆಹಳ್ಳಿ, ದಾವಣಗೆರೆ, ಕೊಡಗನೂರು, ಬೀಮಸಮುದ್ರ, ಚಿತ್ರದುರ್ಗ ಅವನ ಪ್ರವಾಸದ ಮಾರ್ಗಗಳು. ಏಪ್ರಿಲ್ ೧೧ ರಂದು ಬುಕನನ್ ದಾವಣಗೆರೆಯಲ್ಲಿ ಉಳಿದುಕೊಂಡನು. ಅವನು ತನ್ನ ವರದಿಯಲ್ಲಿ ದಾವಣಗೆರೆಯು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು ಹಾಗೂ ದಾವಣಗೆರೆಯ ಸುತ್ತಮುತ್ತ ಹತ್ತಿಯನ್ನು ಬೆಳೆಯಲಾಗುತ್ತಿತ್ತು ಎಂಬುದಾಗಿ ತಿಳಿಸಿದ್ದಾನೆ. ದಾವಣಗೆರೆ ನಗರದಲ್ಲಿ ಹಲವಾರು ಹತ್ತಿ ಮಿಲ್‌ಗಳು ಇದ್ದು, ಅನೇಕ ಜನರು ಅವುಗಳಲ್ಲಿ ದುಡಿಯುತ್ತಿದ್ದರು ಎನ್ನುವ ಮಾಹಿತಿಯೂ ಆ ವರದಿಯಿಂದ ತಿಳಿದುಬರುತ್ತದೆ.[೪] ಕರ್ನಾಟಕದ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯು ಪ್ರಮುಖವಾದುದು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಭಾಗವಾಗಿದ್ದ ದಾವಣಗೆರೆಯಲ್ಲಿ ನಡೆದ ಸ್ವದೇಶಿ ಚಳವಳಿ ಅಲ್ಲಿನ ಹತ್ತಿ ಉತ್ಪಾದನೆಯಿಂದಾಗಿ ಕರ್ನಾಟಕದಲ್ಲಿಯೇ ಅತ್ಯಂತ ಮಹತ್ವದ್ದಾಗಿ ಕಂಡುಬಂತು. ದಾವಣಗೆರೆಯಲ್ಲಿ ಅನೇಕ ಹತ್ತಿ ಮಿಲ್‌ಗಳು ಸ್ಥಾಪನೆ ಆದವು. ದಾವಣಗೆರೆಯನ್ನು ಕರ್ನಾಟಕದ 'ಮ್ಯಾಂಚೆಸ್ಟರ್' ನಗರವೆಂಬುದಾಗಿ ಕರೆಯಲಾಗುತ್ತಿತ್ತು.

ದಾವಣಗೆರೆಯೂ ಹತ್ತಿ ಉತ್ಪಾದನೆಗೆ ಪ್ರಸಿದ್ಧಿ ಆಗಿತ್ತು. ಇಲ್ಲಿ ಆರಂಭಗೊಂಡ ಹತ್ತಿ ಗಿರಣಿಗಳು ದಾವಣಗೆರೆಯಲ್ಲಿ ಹೊಸ ಕೈಗಾರಿಕಾ ವಾತಾವರಣವೊಂದನ್ನು ಹುಟ್ಟುಹಾಕಿದವು. ಸ್ವದೇಶಿ ಚಳವಳಿಯಲ್ಲಿ ಹತ್ತಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಇಂಗ್ಲೆಂಡಿನ ಮ್ಯಾಂಚೆಸ್ಟರ್ ನಗರ ಹತ್ತಿ ನೂಲಿನ ಬಟ್ಟೆಗೆ ಜಗತ್ತಿನಲ್ಲಿ ಪ್ರಸಿದ್ಧವಾದ ನಗರವಾಗಿತ್ತು. ಅದರಂತೆ ದಾವಣಗೆರೆ ಸಹ ಹತ್ತಿ, ನೂಲು, ಬಟ್ಟೆ ತಯಾರಿಕೆಯಿಂದ ಕರ್ನಾಟಕ, ಭಾರತದಾದ್ಯಂತ ಪ್ರಸಿದ್ಧಿಯಾಗಿ ಕೈಗಾರಿಕಾ ಕೇಂದ್ರವೆನಿಸಿತ್ತು.

ವಸಾಹತು ಆಳ್ವಿಕೆಯ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಹುಟ್ಟಿಕೊಂಡ ಹತ್ತಿ ಮಿಲ್‌ಗಳೆಂದರೆ: ದಿ ದಾವಣಗೆರೆ ಕಾಟನ್ ಮಿಲ್ ಲಿಮಿಟೆಡ್, ಶ್ರೀ ಶಂಕರ್ ಟೆಕ್ಸ್‌ಟೈಲ್ ಮಿಲ್ ಲಿಮಿಟೆಡ್ ಮತ್ತು ಶ್ರೀ ಗಣೇಶ ಟೆಕ್ಸ್‌ಟೈಲ್ ಮಿಲ್ ಲಿಮಿಟೆಡ್.

ದಿ ದಾವಣಗೆರೆ ಕಾಟನ್ ಮಿಲ್ ಲಿಮಿಟೆಡ್ ದಾವಣಗೆರೆಯಲ್ಲಿ ಸ್ಥಾಪನೆ ಆಯಿತು. ದಾವಣಗೆರೆ ಕರ್ನಾಟಕ ರಾಜ್ಯದ ಮ್ಯಾಂಚೆಸ್ಟರ್ ಆದದ್ದು ರಾಜನಹಳ್ಳಿ ಹನುಮಂತಪ್ಪನವರು ಸ್ಥಾಪಿಸಿದ ಕಾಟನ್ ಮಿಲ್‌ನಿಂದ ಎಂದು ಹೇಳಬಹುದು. ಇವರು ಮೊದಲು ಚಿಕ್ಕದಾಗಿ ಹತ್ತಿ ವ್ಯಾಪಾರ ಮಾಡುತ್ತಿದ್ದರು. ಆಗ ಅವರು ಹತ್ತಿ ಮಿಲ್‌ನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದರು. ಇವರು ೧೯೩೩ರಲ್ಲಿ ಹತ್ತಿ ಮಿಲ್‌ನ ಬಗ್ಗೆ ಯೋಜನೆ ಹಾಕಿಕೊಂಡಿದ್ದರು. ಆದರೆ ಇವರು ಸ್ಥಾಪನೆ ಮಾಡಬೇಕೆಂದು ಹೊರಟ ಸಂದರ್ಭ ಅಷ್ಟು ಮಹತ್ವದ್ದಾಗಿರಲಿಲ್ಲ ಅನೇಕ ತೊಂದರೆಗಳನ್ನು ಎದುರಿಸಬೇಕಾಯಿತು. ಹತ್ತಿ ಬಟ್ಟೆ ಉದ್ಯಮಕ್ಕೆ ಬೇಕಾಗಿದ್ದ ಯಂತ್ರೋಪಕರಣಗಳನ್ನು ಬೇರೆ ದೇಶಗಳಿಂದ ತರಿಸಿಕೊಳ್ಳಬೇಕಾಗಿತ್ತು. ನಮ್ಮ ದೇಶದಲ್ಲಿ ಇಂತಹ ಯಂತ್ರೋಪಕರಣಗಳ ಕೊರತೆ ಇತ್ತು.[೬] ಇಂತಹ ಸಂದರ್ಭದಲ್ಲಿ ರಾಜನಹಳ್ಳಿ ಹನುಮಂತಪ್ಪನವರು ಹಿಂಜರಿಯದೆ ಧೈರ್ಯದಿಂದ ೧೯೩೬ರಲ್ಲಿ ಹತ್ತಿ ಮಿಲ್‌ನ್ನು ಸ್ಥಾಪನೆ ಮಾಡಿದರು. ಈ ಮಿಲ್‌ನಲ್ಲಿ ನೂಲುವುದು, ನೇಯುವುದು, ರೇಯಾನ್ ಶಿಲ್ಕ್ ಮತ್ತು ಬಟ್ಟೆಗಳಿಗೆ ಬಣ್ಣ ಹಾಕುವುದು ಮುಂತಾದ ಕೆಲಸಗಳನ್ನು ಮಾಡಲಾಗುತ್ತಿತ್ತು. ಈ ಮಿಲ್‌ನಿಂದ ತಯಾರಾದ ನೂಲು ಮತ್ತು ಬಟ್ಟೆ ತನ್ನ ಒಳ್ಳೆಯ ಗುಣಮಟ್ಟದಿಂದ ರಾಜ್ಯ, ದೇಶ, ವಿದೇಶಗಳಲ್ಲಿ ಪ್ರಸಿದ್ಧಿಯನ್ನು ಪಡೆಯಿತು. ದಾವಣಗೆರೆ ಕಾಟನ್ ಮಿಲ್ ಎಂದು ಅಂದಿನಿಂದ ಪ್ರಖ್ಯಾತಿಯನ್ನು ಪಡೆಯಿತು. ಇದು ಕೈಗಾರಿಕಾ ಕ್ಷೇತ್ರದಲ್ಲಿ ದಾವಣಗೆರೆಯನ್ನು ಕೇಂದ್ರಬಿಂದುವನ್ನಾಗಿಸಿತು. ದಾವಣಗೆರೆಯಲ್ಲಿ ತಯಾರಾದ ಲಾಂಗ್‌ಕ್ಲಾತ್ ಬಟ್ಟೆ ಎಂದರೆ ಎಲ್ಲ ಕಡೆಯೂ ಪ್ರಖ್ಯಾತಿಯನ್ನು ಗಳಿಸಿತ್ತು. ದೊಡ್ಡ ವ್ಯಾಪಾರದ ಜೊತೆಗೆ ಚಿಲ್ಲರೆ ವ್ಯಾಪಾರಕ್ಕಾಗಿ ಷೋರೂಂ ತೆರೆಯಲಾಗಿತ್ತು. ಈ ಮಿಲ್ ಮೊದಲು ಕೇವಲ ೧೨ ಸಾವಿರ ಕದುರುಗಳ ಸಾಮರ್ಥ್ಯವನ್ನು ಹೊಂದಿದ್ದು, ಮುಂದೆ ೪೦ ಸಾವಿರವರೆಗೆ ಹೆಚ್ಚಿಸಲಾಯಿತು.

ಕಾಟನ್‌ಮಿಲ್ ಆಧುನಿಕ ಯಂತ್ರೋಪಕರಣಗಳನ್ನು ಹೊಂದಿದ್ದು ಅಭಿವೃದ್ಧಿಗಾಗಿ ಸುಮಾರು ೪೫ ವರ್ಷಗಳವರೆಗೆ ಹೆಚ್ಚು ಲಾಭವನ್ನು ಗಳಿಸಿ ಷೇರುದಾರರಿಗೆ ಲಾಭಾಂಶವನ್ನು ನೀಡಿತ್ತು. ಇವರಲ್ಲಿ

ಕಾರ್ಮಿಕರು ಹಗಲು ರಾತ್ರಿ ಕಷ್ಟಪಡುತ್ತಿದ್ದರು. ಕಾರ್ಮಿಕರಿಗೆ ವಸತಿ ಸೌಲಭ್ಯ, ಶಿಕ್ಷಣ, ಆಸ್ಪತ್ರೆ, ಸಾರಿಗೆ ಸೌಲಭ್ಯ ಮುಂತಾದ ಸೌಕರ್ಯಗಳನ್ನು ಮಾಲಿಕವರ್ಗ ವ್ಯವಸ್ಥಿತವಾಗಿ ಕಲ್ಪಿಸಿಕೊಟ್ಟಿತ್ತು. ಸುಮಾರು ೩ ಸಾವಿರದಿಂದ ೪ ಸಾವಿರ ಕಾರ್ಮಿಕರು ಈ ಕಾಟನ್ ಮಿಲ್‌ನಲ್ಲಿ ಶ್ರಮಪಡುತ್ತಿದ್ದರು. ಈ ಮಿಲ್ ಜನಗಳಿಗೆ ಉದ್ಯೋಗವನ್ನು ಸೃಷ್ಟಿಸಿದ್ದೇ ಅಲ್ಲದೆ ದಾವಣಗೆರೆಯಲ್ಲಿ ಕೈಗಾರಿಕಾ ವಾತಾವರಣವೊಂದನ್ನು ಸೃಷ್ಟಿಸಿತು.[೭]

ದಿ ಶಂಕರ್ ಟೆಕ್ಸಟೈಲ್ಸ್ ಮಿಲ್ ಲಿಮಿಟೆಡ್ ಇದು ಎರಡನೆಯ ಪ್ರಮುಖವಾದ ಹತ್ತಿ ಮಿಲ್. ಪೂನ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹರಿಹರದ ಟೋಲ್‌ಗೇಟ ಬಳಿ ೧೯೪೫ರಿಂದ ತನ್ನ ಕಾರ್ಯವನ್ನು ಪ್ರಾರಂಭಮಾಡಿತು. ಈ ಕಾರ್ಖಾನೆಯ ಮುಖ್ಯಸ್ಥಾಪಕರಾದ ದಿ. ಚಿಗಟೇರಿ ಮುರಿಗೆಪ್ಪ ಮತ್ತು ಗುಂಡಿ ಮಹದೇವಪ್ಪ ಇವರು ಮೊದಲಿನಿಂದಲು ಹತ್ತಿ ವ್ಯಾಪಾರಿಗಳಾಗಿದ್ದರು. ಹತ್ತಿಯ ಬೆಳೆ, ಮಿಲ್‌ನ ಅಭಿವೃದ್ಧಿ ಮತ್ತು ನಗರದ ಅಭಿವೃದ್ಧಿಗೆ ಹೆಚ್ಚು ಮಹತ್ವ ಕೊಟ್ಟಿದ್ದರು. ಇವರು ವ್ಯಾಪಾರಕ್ಕಾಗಿ ಮಾಡಿದ ಪ್ರವಾಸ ಇವರ ಬದುಕನ್ನು ಬದಲಾಯಿಸಿತು. ಬೆಂಗಳೂರಿನ ಬಿನ್ನಿ ಮಿಲ್ಸ್‌ಗೆ, ಪಾಂಡಿಚೇರಿಯಲ್ಲಿದ್ದ ಆಂಗ್ಲೋ ಫ್ರೆಂಚ್ ಮಿಲ್‌ಗೆ, ಕೊಯಮತ್ತೂರು ಕಾಟನ್ ಮಿಲ್‌ಗಳಿಗೆ ಇವರೇ ಅರಳೆಯನ್ನು ರಫ್ತು ಮಾಡುತ್ತಿದ್ದರು. ಅರಳೆ ವ್ಯಾಪಾರದಲ್ಲಿ ಹೆಚ್ಚು ಅನುಭವವನ್ನು ಪಡೆದುಕೊಂಡಿದ್ದರು. ಕರಾಚಿಗೆ ಹೋಗಿ ಅಲ್ಲಿ ಅರಳೆಯನ್ನು ತೆಗೆದುಕೊಂಡು ಅಲ್ಲಿಂದ ಸ್ಟೀಮರ್‌ಗಳ ಮೂಲಕ ಪಾಂಡಿಚೇರಿಗೆ ಸಾಗಿಸುತ್ತಿದ್ದರು. ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ ಹತ್ತಿ ಮತ್ತು ನೂಲಿನ ತಯಾರಿಕೆಯಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಈ ಮಿಲ್ ಆರಂಭದಲ್ಲಿ ೫೦೪೦ ಕದುರುಗಳ (ಸ್ಪಿಂಡ್‌ಲ್ಸ್) ಸಾಮರ್ಥ್ಯವನ್ನು ಹೊಂದಿತ್ತು. ಮುಂದೆ ಬರುತ್ತ ತನ್ನ ಸಾಮರ್ಥ್ಯವನ್ನು ೨೫೦೮೦ ಕದುರುಗಳವರೆಗೆ ಹೆಚ್ಚಿಸಿತು.[೮]

ಶ್ರೀ ಗಣೇಶ್ ಟೆಕ್ಸ್‌ಟೈಲ್ಸ್ ಮಿಲ್ ಲಿಮಿಟೆಡ್ ೧೯೪೬ರಲ್ಲಿ ಆರಂಭಗೊಂಡಿತು. ಇದರ ಸ್ಥಾಪಕರು ಗುಂಡಿ ಮಹದೇವಪ್ಪ ಮತ್ತು ಅವರ ಸಹೋದರರು. ಈ ಮಿಲ್ ಇವರ ಸ್ವಂತ ಶ್ರಮ. ಆಗ ದ್ವಿತೀಯ ಮಹಾಯುದ್ಧ ಪ್ರಾರಂಭವಾಗಿತ್ತು. ಆ ಸಂದರ್ಭದಲ್ಲಿ ದೇಶ ವಿದೇಶಗಳೊಂದಿಗಿನ ಆಮದು, ರಫ್ತು ವ್ಯಾಪಾರದಲ್ಲಿ ಏರುಪೇರುಗಳಾಗುತ್ತಿತ್ತು. ಅಂತಹ ಸಮಯದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ನಿಂದ ಹೊಸ ಯಂತ್ರೋಪಕರಣಗಳನ್ನು ತೆಗೆದುಕೊಂಡು ಬಂದು ಗಣೇಶ್ ಟೆಕ್ಸ್‌ಟೈಲ್ಸ್ ಮಿಲ್‌ನ್ನು ಸ್ಥಾಪನೆ ಮಾಡಲಾಯಿತು. ಈ ಯಂತ್ರೋಪಕರಣಗಳು ಕಣ್ಮರೆಯಾಗುವ ಸಂದರ್ಭದಲ್ಲಿ ಮತ್ತೆ ಮಿಲ್‌ನ್ನು ಹೊಸ ಮಾದರಿಯಲ್ಲಿ ಮಾಡಿ ಮಿಲ್‌ನ್ನು ಉಳಿಸಿಕೊಳ್ಳಲಾಯಿತು. ಇದು ಒಂದು ಪ್ರೈವೇಟ್ ಕಂಪನಿಯಾಗಿ ಸ್ಥಾಪನೆಗೊಂಡಿತು.[೯]

ಖಾದಿ ಉದ್ದಿಮೆ

ಪ್ರಾಚೀನ ಕಾಲದಿಂದಲೂ ಗ್ರಾಮಗಳಲ್ಲಿ ದಿನನಿತ್ಯ ಬಳಸುವ ವಸ್ತುಗಳನ್ನು ಗ್ರಾಮಗಳಲ್ಲಿಯೇ ಸಿಗುವ ಕಚ್ಚಾವಸ್ತುಗಳನ್ನು ಬಳಸಿ ಹಾಗೂ ಗ್ರಾಮಗಳಲ್ಲಿಯೇ ಸಾಧ್ಯವಾಗುವ ಕೌಶಲ್ಯದಿಂದ ಮತ್ತು ಬಂಡವಾಳದಿಂದ ಉತ್ಪಾದಿಸಲಾಗುತ್ತಿತ್ತು. ಹತ್ತಿ ಮತ್ತು ಹತ್ತಿ ಬಟ್ಟೆಗಳನ್ನು ಬೇರೆ ಬೇರೆ ದೇಶಗಳಿಗೂ ರಫ್ತು ಮಾಡಲಾಗುತ್ತಿತ್ತು. ಹೀಗಾಗಿ ಸ್ಥಳೀಯ ಅರ್ಥವ್ಯವಸ್ಥೆಯಲ್ಲಿ ಗುಡಿಕೈಗಾರಿಕೆಗಳು ಮತ್ತು ಗ್ರಾಮಕೈಗಾರಿಕೆಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದವು.[೧೦] ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಆರಂಭವಾಗಿ ಅದು ಪ್ರಪಂಚದೆಲ್ಲೆಡೆ ವಿಸ್ತರಿಸಲಾರಂಭಿಸಿದ ಮೇಲೆ ಹಲವಾರು ದೇಶಗಳ ಅರ್ಥವ್ಯವಸ್ಥೆಯಲ್ಲಿ ಹಲವಾರು ರೀತಿಯ ಬದಲಾವಣೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಬ್ರಿಟಿಷರು ಭಾರತವನ್ನು ತಮ್ಮ ಮಾರುಕಟ್ಟೆಯನ್ನಾಗಿ ಪರಿವರ್ತಿಸಿ, ಇಲ್ಲಿಂದ ಅಪಾರ ಪ್ರಮಾಣದ ಕಚ್ಚಾವಸ್ತುಗಳನ್ನು ರಫ್ತು ಮಾಡಲಾರಂಭಿಸಿದರು. ಆ ಕ್ಷಣದಲ್ಲಿ ನಡೆಯುತ್ತಿದ್ದ ಗ್ರಾಮಗಳ ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಗಾಂಧೀಜಿಯವರಿಗೆ ಬಹಳ ಸಮಯ ಬೇಕಾಗಲಿಲ್ಲ. ಸ್ವಲ್ಪ ಸಮಯದಲ್ಲಿ ಕಂಡು ಕೊಂಡರು.[೧೧] ಪ್ರತಿಯೊಬ್ಬ ಭಾರತೀಯನೂ ಖಾದಿ ಉದ್ದಿಮೆಯನ್ನು ಹೇಗೆ ಹೆಚ್ಚಿಸಬೇಕೆಂಬುದರ ಬಗ್ಗೆ ಮಹಾತ್ಮ ಗಾಂಧೀಜಿಯವರು ಈ ರೀತಿ ಹೇಳಿದರು, "ಇದು ಆರ್ಥಿಕ ಸ್ವಾತಂತ್ರ್ಯ ಹಾಗೂ ದೇಶದಲ್ಲಿ ಎಲ್ಲರೂ ಸಮಾನರೆಂಬ ಭಾವನೆಯ ಆರಂಭವನ್ನು ಸೂಚಿಸುತ್ತದೆ. ಖಾದಿಯನ್ನು ಅದರ ಆಂತರಿಕ ಧರ್ಮದೊಡನೆ ಸ್ವೀಕರಿಸಬೇಕು. ಇದರ ಅರ್ಥ ಸಂಪೂರ್ಣ ಸ್ವದೇಶ ಮನೋಭಾವ ಹಾಗೂ ಭಾರತದ ಎಲ್ಲ ಅವಶ್ಯಕತೆಗಳನ್ನು ದೇಶದಲ್ಲೆಯೆ ಪೂರೈಸಿಕೊಳ್ಳುವ ನಿರ್ಧಾರ ಅದೂ ಹಳ್ಳಿಗರ ಶ್ರಮ ಹಾಗೂ ಬುದ್ಧಿಗಳ ಸಹಾಯದಿಂದ ಈಗಿರುವ ಕಾರ್ಯ ವಿಧಾನವನ್ನು ಪರಿವರ್ತಿಸುವು ದೆಂದೇ ಅದರ ಅರ್ಥ. ಖಾದಿ ಭಾರತದ ಮಾನವಕುಲದ ಏಕತೆ. ಅದರ ಆರ್ಥಿಕ ಸ್ವಾತಂತ್ರ್ಯ ಹಾಗೂ ಸಮಾನತೆ ಇವುಗಳ ಸಂಕೇತ." "ಸ್ವರಾಜ್ಯದ ಆತ್ಮ ಸ್ವದೇಶಿ, ಸ್ವದೇಶಿಯ ಆತ್ಮ ಖಾದಿ" ಎಂದು ಗಾಂಧೀಜಿಯವರು ಬಹಿರಂಗವಾಗಿ ತಿಳಿಸಿದರು. ೧೯೦೫ರಲ್ಲಿ ಆರಂಭವಾದ ಸ್ವದೇಶಿ ಚಳವಳಿಯು ಸಾರ್ವಜನಿಕರ ಗಮನವನ್ನು ಆಕರ್ಷಿಸಿತು. ಖಾದಿ ಮತ್ತು ಗ್ರಾಮೋದ್ಯೋಗಗಳ ಬಗ್ಗೆ ಜನರಿಗೆ ಉತ್ಸಾಹ ಮತ್ತು ಸಂತೋಷವನ್ನು ಮತ್ತು ಸ್ಫೂರ್ತಿಯನ್ನು ನೀಡಿತು. ವಿದೇಶಿ ವಸ್ತ್ರ ಬಹಿಷ್ಕಾರ ವಿಷಯವನ್ನು ಕುರಿತು ಸಮಾಲೋಚಿಸುವಾಗ ಖಾದಿಯಿಂದಲ್ಲದೆ ಬೇರೆ ಮಾರ್ಗದಿಂದ ಇದು ಸಾಧ್ಯವಿಲ್ಲ ಎಂದು ಅವರು ಭಾವಿಸಿದರು.[೧೨] ೧೯೨೧ರಲ್ಲಿ ಖಾದಿಯು ದೇಶದ ಸಮಗ್ರ ಚಳವಳಿಯ ಒಂದು ಅಂಗವಾಗಿ ಬಿಟ್ಟಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ೧೯೨೩ರಲ್ಲಿ ಅಖಿಲ ಭಾರತ ಖಾದಿ ಮಂಡಲಿಯನ್ನು ಸ್ಥಾಪಿಸಿತು. ಇದರ ಮಾರ್ಗದರ್ಶನದಿಂದ ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಖಾದಿ ಮಂಡಲಿಗಳು ಕಾರ್ಯಚರಣೆಯಲ್ಲಿ ತೊಡಗಿದವು.

ಗಾಂಧೀಜಿಯವರ ಉದ್ದೇಶ ಸತತ ಖಾದಿ ಧಾರಣೆ, ಸ್ವದೇಶಿ ವಸ್ತುಗಳ ಬಳಕೆ ಮತ್ತು ವಿದೇಶಿ ವಸ್ತ್ರ ಬಹಿಷ್ಕಾರ. ಅವರು ಖಾದಿ ಧಾರಣೆಗೆ ಮಹತ್ವದ ಸ್ಥಾನಕೊಟ್ಟಿದ್ದರು. ಗಾಂಧೀಜಿಯವರ ಮಾತಿನಲ್ಲಿಯೇ ಹೇಳುವುದಾದರೆ, "ಪ್ರತಿದಿನ ರಾಟಿಯಿಂದ ನೂಲು ತೆಗೆಯಬೇಕು; ತಾವು ಬೆಳೆಸಿದ ಹತ್ತಿಯನ್ನು ಹೆಕ್ಕಿ, ಕಾಳು ಬಿಡಿಸಿ, ಹಂಜಿ ಮಾಡಿ, ನೂಲು ತೆಗೆದು, ನೇಕಾರನಿಗೆ ಕೊಟ್ಟು, ಕೈಮಗ್ಗದಲ್ಲಿ ಬಟ್ಟೆ ನೇಯಿಸಿ ತೊಡಬೇಕು. ಇದು ಸಾಧ್ಯವಿಲ್ಲದಿದ್ದಾಗ ಕೈರಾಟಿಯಲ್ಲಿ ನೂತ, ಕೈಮಗ್ಗದಲ್ಲಿ ನೇಯ್ದು ಖಾದಿ, ಅಧಿಕೃತ ಮಾರಾಟಗಾರರಿಂದ ಕೊಂಡು ಧರಿಸುವುದು ಎಲ್ಲರಿಗೂ ತೆರೆದ ಮಾರ್ಗ. ವಕೀಲ, ಸರ್ಕಾರಿ ನೌಕರ, ವೈದ್ಯ, ಶ್ರಮಜೀವಿ, ವಿದ್ಯಾರ್ಥಿ ಇತ್ಯಾದಿ ಯಾರೇ ಆಗಲಿ ಪ್ರತಿಯೊಬ್ಬ ಭಾರತೀಯನೂ ಖಾದಿ ಧರಿಸಬೇಕು".[೧೩] ಗಾಂಧೀಜಿಯವರು ಹತ್ತಿ ಗಿರಣಿಗಳ ಬಗ್ಗೆ ಮಾತನಾಡುತ್ತಾ, "ಹಿಂದೆ ನಮ್ಮ ದೇಶದಲ್ಲಿ ಹತ್ತಿಯಿಂದ ನೂಲು ತೆಗೆದು ಬಟ್ಟೆ ತಯಾರಿಸುವ ಹಲವು ಗಿರಣಿಗಳಿದ್ದವು. ಅಲ್ಲದೆ ಇಲ್ಲಿ ಬೆಳೆದ ಹತ್ತಿಯನ್ನು ಇಂಗ್ಲೆಂಡಿನ ಮ್ಯಾಂಚೆಸ್ಟರಿಗೆ ಕಳುಹಿಸುತ್ತಿದ್ದೆವು. ಅಲ್ಲಿ ಬಟ್ಟೆ ತಯಾರಾಗಿ ಭಾರತಕ್ಕೆ ಬರುತ್ತಿತ್ತು. ಈ ವಿದೇಶಿ ಬಟ್ಟೆ ತೊಡುವುದನ್ನು ನಮ್ಮ ಜನ ಉತ್ಸಾಹಪಡುತ್ತಿದ್ದರು. ಅಲ್ಲಿಂದ ಬಟ್ಟೆ ಮಾಡಿ ತರಿಸುವುದು ನಾಚಿಕೆಕೇಡು ಮತ್ತು ದೇಶದ್ರೋಹ. ಇದರಿಂದ ಎಷ್ಟೊಂದು ಹಣ ವಿದೇಶಕ್ಕೆ ಹರಿದು ಹೋಗುತ್ತದೆ. ನಮ್ಮ ದೇಶದ ನಿರುದ್ಯೋಗ, ಬಡತನಕ್ಕೆ ಇದೊಂದು ಪ್ರಮುಖ ಕಾರಣವಾಗಿದೆ. ಇದೇ ಹತ್ತಿಯನ್ನು ನಮ್ಮ ದೇಶದಲ್ಲಿ ಬಳಸಿಕೊಂಡರೆ ವಿದೇಶಕ್ಕೆ ಹರಿದು ಹೋಗುತ್ತಿದ್ದ ಹಣ ನಮ್ಮ ದೇಶದಲ್ಲಿ ಉಳಿಯುತ್ತದೆ. ನಮ್ಮ ನಾಡು ವ್ಯವಸಾಯದ ಬೀಡು. ನೂರರಲ್ಲಿ ಎಂಬತ್ತು ಜನ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಇವರಿಗೆ ವರ್ಷಪೂರ್ತಿ ಕೆಲಸ ಇರುವುದಿಲ್ಲ. ವರ್ಷದಲ್ಲಿ ಆರು ತಿಂಗಳು ಮಾತ್ರ ವ್ಯವಸಾಯದಲ್ಲಿ ತೊಡಗಿರುತ್ತಾರೆ. ಉಳಿದ ಆರು ತಿಂಗಳಲ್ಲಿ ಕೆಲಸ ಇರುವುದಿಲ್ಲ. ಅಂತಹ ಸಮಯದಲ್ಲಿ ಮನೆಯ ಹೆಂಗಸರು, ಪುರುಷರು, ಮಕ್ಕಳು ಎಲ್ಲರೂ ಕೈರಾಟಿಯಿಂದ ನೂಲು ತೆಗೆಯಬಹುದು. ಬಹಳ ಶ್ರಮ. ಅನುಭವ ಅನಗತ್ಯ. ಎಷ್ಟು ಸರಳ, ಖಾದಿಯಂತೆಯೇ ಜೀವನವೂ ಸರಳವಾಗಿರಲಿ, ಸ್ವದೇಶಿಮಯವಾಗಿರಲಿ ದೇಶಭಕ್ತಿಯಿಂದ ತುಂಬಿ ತುಳುಕುತ್ತಿರಲಿ" ಎಂಬ ಸಂದೇಶವನ್ನು ನಾಡಿನಾದ್ಯಂತ ನೀಡಿದರು.[೧೪]

ಜವಾಹರಲಾಲ್ ನೆಹರು ಅವರಿಗೂ ಇದೇ ಬುದ್ಧಿವಾದವನ್ನು ಹೇಳಿದರು. ನೆಹರುರವರು "ಕೈಯಲ್ಲಿ ರಾಟಿ ಸ್ವಾತಂತ್ರ್ಯದ ಸಂಕೇತ, ಬಡವಿಧವೆಗೆ ಮೂರು ಕಾಸು ಕೊಡಿಸುವ ಸಾಧನ" ಎಂದು ಹೇಳಿದರು.[೧೫]

ಕರ್ನಾಟಕದಲ್ಲಿ ಗಾಂಧೀಜಿಯವರ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಮೂಲೆಗುಂಪಾಗಿದ್ದ ಹಳೆಯ ರಾಟಿಗಳು ಮತ್ತೆ ಹೊರಬಂದವು. ನೂಲಲು ಸಿದ್ಧರಾದರು. ಅಷ್ಟೊಂದು ಜನಕ್ಕೆ ಬೇಕಾಗುವಷ್ಟು ರಾಟಿ ಇರಲಿಲ್ಲ. ಆದಕಾರಣ ಚರಕಗಳನ್ನು ತಯಾರಿಸುವ, ಕಾಳುಬಿಡಿಸಿ ಹತ್ತಿ ಎಕ್ಕುವ, ನೂಲು ತೆಗೆಯುವ, ಬತ್ತಿ ಮಾಡುವ ಮತ್ತು ಉಪಕರಣಗಳನ್ನು ತಯಾರಿಸುವವರಿಗೆ

ರೈತುಂಬ ಕೆಲಸ ದೊರೆಯಿತು. ಈ ಕೆಲಸವು ದಾವಣಗೆರೆ ಜಿಲ್ಲೆಯಲ್ಲಿ ಅತೀ ಹೆಚ್ಚು ಮಾಡುತ್ತಿದ್ದರು. ಕಮ್ಮಾರರ ಮತ್ತು ಬಡಗಿಗಳ ಸಣ್ಣ ಕಾರ್ಖಾನೆಗಳು ಅಲ್ಲಲ್ಲಿ ಸ್ಥಾಪಿತವಾದವು. ಖಾದಿಯಿಂದ ತಯಾರಿಸಿದ ಬಟ್ಟೆ ಒರಟು ಆಗಿರುತ್ತಿತ್ತು. ನಯವಾದ ಥಳುಕು ಮಿಳುಕಿನ ಉಡುಪು ಧರಿಸಿ ಕೊಳ್ಳುತ್ತಿದ್ದವರು ಖಾದಿ ಬಟ್ಟೆಯನ್ನು ತೊಡಲು ಹಿಂಜರಿಯುತ್ತಿದ್ದರು. ಇದಕ್ಕೆ ಗಾಂಧೀಜಿಯವರು ವಿದೇಶಿ ವಸ್ತ್ರ ವಿಷ ಸಮಾನ, ಆದಕಾರಣ ವಿಷವನ್ನು ನಾಶಮಾಡುವಂತೆ ವಿದೇಶಿ ವಸ್ತ್ರವನ್ನು ನಾಶಮಾಡಿ, ಬೆಂಕಿ ಇಟ್ಟು ಸುಡಿ ಎಂದು ಹೇಳಿದರು. ಗಾಂದೀಜಿಯವರ ಸಂದೇಶ ಹೊರಬಿದ್ದಂತೆ ಕರ್ನಾಟಕದಾದ್ಯಂತ ಬಹಿರಂಗ ಸಭೆಗಳು ನಡೆಯಲಾರಂಭಿಸಿದವು. ಸಭೆಯ ಕೊನೆಯಲ್ಲಿ ವಿದೇಶಿ ವಸ್ತ್ರದಹನ ನಡೆಯುತ್ತಿತ್ತು. ದಾವಣಗೆರೆಯಲ್ಲಿ ೧೯೩೧ರಲ್ಲಿ ಹೋಳಿಹಬ್ಬದಂದು ಮಂಡಿಪೇಟೆಯಲ್ಲಿ ವಿದೇಶಿ ವಸ್ತ್ರದಹನ ಮಾಡಲಾಯಿತು. ಎಷ್ಟೋ ಜನರು ತಮ್ಮ ಮೇಲಿನ ಉಡುಪುಗಳನ್ನು ಬೆಂಕಿಗೆ ಅರ್ಪಿಸಿ ಖಾದಿಯನ್ನು ಧರಿಸಿ ಹೋಗುತ್ತಿದ್ದರು.[೬]

ಖಾದಿ ಬಟ್ಟೆಯ ಬೇಡಿಕೆ ಹೆಚ್ಚಾದಂತೆ ಖಾದಿ ಉದ್ಯಮಗಳು ಹುಬ್ಬಳ್ಳಿ, ಗದಗ, ಚಿತ್ರದುರ್ಗ, ಬಿಜಾಪುರ, ದಾವಣಗೆರೆ ಮೊದಲಾದ ಸ್ಥಳಗಳಲ್ಲಿ ಸ್ಥಾಪನೆ ಆದವು. ಮೈಸೂರು ಸರ್ಕಾರ ಬದನವಾಳಿಯಲ್ಲಿ ಕೇಂದ್ರ ಸ್ಥಾಪಿಸಿತು. ಕೌಜಲಗಿ ಹನುಮಂತರಾಯರು ವಕೀಲ ವೃತ್ತಿಯನ್ನು ತೊರೆದು ಹುಬ್ಬಳ್ಳಿಯ ಬಳಿ ಖಾದಿಕೇಂದ್ರದ ವ್ಯವಸ್ಥಾಪಕರಾದರು. ದಾವಣಗೆರೆಯಲ್ಲಿ ಖಾದಿ ಸಿದ್ದಪ್ಪ ಖಾದಿಕೇಂದ್ರವನ್ನು ಸ್ಥಾಪಿಸಿದರು. ಕಾಸಲ ಶ್ರೀನಿವಾಸಶೆಟ್ಟಿ, ಇಟಗಿ ವೇದಮೂರ್ತಿ, ಕೊಟಗೆ ಸಿದ್ದಲಿಂಗಪ್ಪ, ಹರ್ಡೇಕರ್ ಮಂಜಪ್ಪ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ತಾವು ಖಾದಿಯನ್ನು ತೊಟ್ಟು ಇತರರಿಗೆ ಮಾರ್ಗದರ್ಶಕರಾದರು. ದಾವಣಗೆರೆ ಜಿಲ್ಲೆಯ ತುಂಬ ಸಂಚಾರ ಮಾಡಿ ಎಲ್ಲರು ಖಾದಿಯನ್ನು ಧರಿಸಬೇಕು ಎಂದು ಪ್ರಚಾರದ ಮೂಲಕ ತಿಳಿಸಿದರು. ದಾವಣಗೆರೆಗೆ ಗಾಂಧೀಜಿಯ ಆಗಮನದಿಂದ ಇಡೀ ಜಿಲ್ಲೆಯಲ್ಲಿ ವಿದ್ಯುತ್ ಸಂಚಾರವಾದಂತೆ ಆಯಿತು. ಎಲ್ಲರು ಖಾದಿಯನ್ನೇ ಧರಿಸಬೇಕು, ಬೇರೆ ಬಟ್ಟೆಯನ್ನು ಧರಿಸಬಾರದು ಎಂದು ಕರೆಕೊಟ್ಟರು. ಅಲ್ಲಿಂದ ದಾವಣಗೆರೆ ಜಿಲ್ಲೆಯಲ್ಲಿ ಖಾದಿ ಉದ್ಯಮವು ಪ್ರಬಲವಾಗಿ ಬೆಳೆಯಿತು. ಖಾದಿ ಉದ್ಯಮವು ಬ್ರಿಟಿಷ್ ವಸಾಹತು ನೀತಿಗೆ ಒಡ್ಡಿದ ಪ್ರಬಲ ಪ್ರತಿರೋಧವಾಗಿತ್ತು. ದಾವಣಗೆರೆ ಜಿಲ್ಲೆಯಲ್ಲಿ ಈ ರೀತಿಯ ಪ್ರಯತ್ನಗಳು ಸಾಕಷ್ಟು ನಡೆದವು. ಖಾದಿ ಮಾರಾಟ ಮಾಡುವ ಅಂಗಡಿಗಳು ದಾವಣಗೆರೆ ಜಿಲ್ಲೆಯಲ್ಲಿ ಸ್ಥಾಪಿತವಾದವು. ಸ್ವಾತಂತ್ರ್ಯ ಹೋರಾಟಗಾರರು ಪ್ರತಿಯೊಬ್ಬರು ಖಾದಿ ಬಟ್ಟೆಯನ್ನು ತೊಟ್ಟು ಚಳವಳಿ ಮಾಡುತ್ತಿದ್ದರು. ಖಾದಿ ಒಂದು ಪ್ರಮುಖವಾದ ಅಸ್ತ್ರವಾಗಿತ್ತು. ದಾವಣಗೆರೆಯಲ್ಲಿ ಪ್ರಪ್ರಥಮವಾಗಿ ಕೆ.ಎಸ್. ಸಿದ್ದಪ್ಪ ಖಾದಿ ಭಂಡಾರವನ್ನು ಸ್ಥಾಪನೆ ಮಾಡಿದರು. ನಂತರ ಇವರ ಹೆಸರು ಖಾದಿ ಸಿದ್ದಪ್ಪ ಎಂದಾಯಿತು. ಖಾದಿ ನಗರವಾಸಿಗಳ ಉಡುಪಾಯಿತು. ರಾಟೆ ಬಡವರ ಗುಡಿಸಲಿಗೆ ಬಂದಿತು. ಟೋಪಿ ವಿದ್ಯಾರ್ಥಿಗಳ ತಲೆ ಮೇಲೆ ಬಂದಿತು. ಸ್ವಾತಂತ್ರ್ಯ ಹೋರಾಟಗಾರರಿಗೆ ಇದು ಅಸ್ತ್ರವಾಯಿತು.[೭]

ಖಾದಿ ಮೈಸೂರು ಅರಮನೆಯನ್ನು ಪ್ರವೇಶ ಮಾಡಿತು. ಮಹಾತ್ಮಗಾಂಧಿ ನಾಲ್ವಡಿ ಕೃಷ್ಣರಾಜ ಪ್ರಭುಗಳನ್ನು ಕಾಣಲು ಅರಮನೆಗೆ ಬರುವ ದಿನ ಗೊತ್ತು ಮಾಡಲಾಯಿತು. ಅಂದು ಅರಮನೆಯಲ್ಲಿದ್ದ ಮಖಮಲ್ ಪರದೆಗಳ ಸ್ಥಾನವನ್ನು ಖಾದಿ ಆಕ್ರಮಿಸಿಕೊಂಡಿತು. ಕುರ್ಚಿಯ ಮೇಲಿನ ಹಾಸುಗೆಗಳು ಖಾದಿ ಆದವು. ಮಹಾತ್ಮರನ್ನು ಭೇಟಿ ಮಾಡುವ ಮಹಾರಾಜರು ಸ್ವತಃ ಅಂದು ಸ್ವಚ್ಛ ಬಿಳಿಯ ಖಾದಿ ಉಡುಪು ತೊಟ್ಟಿದ್ದರು. ಗಾಂಧೀಜಿಯವರು ಇದನ್ನು ಕಂಡು ಸಂತೋಷಗೊಂಡರು. ಮಹಾರಾಜರಿಗೆ ರಾಟಿ ಕೊಟ್ಟರು. ಸರ್ಕಾರಿ ನೌಕರರು ಖಾದಿ ಧರಿಸಲು ಯಾವ ಭಯವಿಲ್ಲ ಎಂಬ ಆಜ್ಞೆ ಹೊರಟಿತು. ಈ ರೀತಿಯಾಗಿ ಖಾದಿಯು ನೆರಮನೆಯಿಂದ ಅರಮನೆಯವರೆಗೂ ಬೆಳೆಯಿತು.[೧೮]

ದಾವಣಗೆರೆಯಲ್ಲಿ ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರರ ಮನೆಯಲ್ಲೂ ಚರಕಗಳಿರುತ್ತಿದ್ದವು. ಮತ್ತು ಅದರಿಂದ ದಿನನಿತ್ಯ ನೂಲನ್ನು ತೆಗೆಯುತ್ತಿದ್ದರು. ಈ ರೀತಿ ತೆಗೆದ ನೂಲಿನಿಂದ ಬಟ್ಟೆಯನ್ನು ತಯಾರಿಸಲಾಗುತ್ತಿತ್ತು. ಇಂಗ್ಲೆಂಡಿನಲ್ಲಿ ಮೊದಲು ಮಗ್ಗಗಳಿಂದಲೇ ಬಟ್ಟೆ ತಯಾರಾಗುತ್ತಿತ್ತು. ಜೇಮ್ಸ್‌ವಾಟ್ ಕಂಡುಹಿಡಿದ ಸ್ಟೀಮ್ ಎಂಜಿನ್ನಿನ ಸಹಾಯದಿಂದ ಗಿರಣಿಗಳು ಸ್ಥಾಪನೆ ಆದವು. ಮನುಷ್ಯ ಕೈಗಳಿಂದ ಸಾಧಿಸುತ್ತಿದ್ದ ಅನೇಕ ಕೆಲಸಗಳು ಇದರಿಂದಾಗಿ ಯಾಂತ್ರಿಕವಾದವು. ಭಾರತದಲ್ಲಿನ ನೇಕಾರರು ಅವರ ಮಗ್ಗಗಳಿಂದ ಉತ್ತಮ ದರ್ಜೆಯ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಈ ಬಟ್ಟೆಗಳು ಇಂಗ್ಲೆಂಡ್ ಮತ್ತು ಇತರೆ ದೇಶಗಳಿಗೆ ರಫ್ತು ಆಗುತ್ತಿದ್ದವು. ಇದು ಬ್ರಿಟಿಷ್ ಸರ್ಕಾರಕ್ಕೆ ಇಷ್ಟವಾಗಲಿಲ್ಲ. ಭಾರತದ ಬಟ್ಟೆಗಳನ್ನು ಕೊಂಡವರಿಗೆ ಇಂಗ್ಲೆಂಡಿನ ಬಟ್ಟೆಗಳ ಅವಶ್ಯಕತೆ ಇರಲಿಲ್ಲ. ಮತ್ತು ಅದಕ್ಕೆ ಅವರ ಬಳಿ ಹಣವೂ ಉಳಿಯುತ್ತಿರಲಿಲ್ಲ. ಇದನ್ನು ತಡೆಯಲು ಬ್ರಿಟಿಷರು ರಫ್ತಿನ ಕಂದಾಯವನ್ನು ವಿಧಿಸಿದರು. ಇದರ ಪ್ರಕಾರ ಭಾರತದ ಬಟ್ಟೆಗಳನ್ನು ವಿದೇಶಗಳಲ್ಲಿ ಮಾರಬೇಕಾದರೆ ಬ್ರಿಟಿಷರಿಗೆ ಹೆಚ್ಚಿನ ಹಣವನ್ನು ಸುಂಕವಾಗಿ ಕೊಟ್ಟು ಅನುಮತಿ ಪಡೆಯಬೇಕಾಯಿತು. ಭಾರತವು ಕೇವಲ ಹತ್ತಿ ಬೆಳೆಯಬೇಕೆಂಬುದು ಬ್ರಿಟಿಷರ ಯೋಜನೆಯಾಗಿತ್ತು. ಹೀಗೆ ಇಲ್ಲಿ ಬೆಳೆದ ಹತ್ತಿಯನ್ನು ಅತ್ಯಂತ ಕಡಿಮೆ ಬೆಲೆಗೆ ಕೊಂಡು, ಅಲ್ಲಿ ಸಿದ್ಧವಸ್ತುಗಳನ್ನಾಗಿ ತಯಾರಿಸಿ, ಅದನ್ನು ಭಾರತೀಯರಿಗೆ ಹೆಚ್ಚಿನ ಬೆಲೆಯಲ್ಲಿ ಮಾರುವುದು ಅವರ ಉದ್ದೇಶವಾಗಿತ್ತು. ಈ ಕಾರಣದಿಂದ ಭಾರತದಲ್ಲಿ ಭಾರತೀಯರು ಬಟ್ಟೆ ಗಿರಣಿಗಳನ್ನು ಸ್ಥಾಪಿಸುವುದು ಅವರಿಗೆ ಸರಿಬೀಳುತ್ತಿರಲಿಲ್ಲ. ಭಾರತವನ್ನು ತಮ್ಮ ಮಾರುಕಟ್ಟೆಯನ್ನಾಗಿ ಪರಿವರ್ತಿಸುವ ಕೆಲಸವನ್ನು ಬ್ರಿಟಿಷರು ಮಾಡಿದರು. ಇದು ಸ್ಥಳೀಯ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರಿತು. ಬ್ರಿಟಿಷ್ ವಸಾಹತುಶಾಹಿಯ ಈ ರೀತಿಯ ಧೋರಣೆಯನ್ನು ವಿರೋಧಿಸಿಯೇ ಸ್ವದೇಶಿಯಂಥ ಹಲವಾರು ಹೋರಾಟಗಳು ಇಲ್ಲಿ ಕಾಣಿಸಿಕೊಂಡವು.[೧೯]

ಅಡಿಟಿಪ್ಪಣಿಗಳು

೧. ಎನ್.ಎಸ್. ಪರಮೇಶ್ವರ, ಎಸ್. ಶಂಕರ, **ಹತ್ತಿ-ಬಿಳಿಬಂಗಾರ**, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ೧೯೮೭, ಪು. ೨೦

೨. ಬಿ.ಎನ್. ಶ್ರೀ ಸತ್ಯನ್, **ಚಿತ್ರದುರ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್**, ಗವರ್ನ್‌ಮೆಂಟ್ ಪ್ರೆಸ್, ೧೯೬೭, ಪು. ೧೨೦

೩. ಫ್ರಾನ್ಸಿಸ್ ಬುಕನನ್, **ಎ ಜರ್ನಿ ಫ್ರಂ ಮದ್ರಾಸ್ ಥ್ರೋ ದ ಕಂಟ್ರೀಸ್ ಆಫ್ ಮೈಸೂರು, ಕೆನರಾ ಆಂಡ್ ಮಲಬಾರ್**, ಏಷಿಯನ್ ಎಜ್ಯುಕೇಷನಲ್ ಸರ್ವಿಸಸ್, ನ್ಯೂಡೆಲ್ಲಿ, ೧೯೮೮, ಸಂಪುಟ I, ಫಸ್ಟ್ ಪಬ್ಲಿಕೇಷನ್ ೧೮೦೭, ಪು. ೩೩೦

೪. ಎಂ.ಜಿ. ಈಶ್ವರಪ್ಪ, **ಶತಮಾನದ ದಾವಣಗೆರೆ**, ಚಂಪಾಲಾಲ್ ಬಿ. ಡೆಲ್ಹರಿಯಾ, ದಾವಣಗೆರೆ, ೨೦೦೧, ಪು. ೨೬

೫. ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮ, **ಗಾಂಧಿ ಮತ್ತು ಕರ್ನಾಟಕ**, ಮೈಸೂರು ರಾಜ್ಯ ಗಾಂಧೀ ಸ್ಮಾರಕ ನಿಧಿ, ಗಾಂಧೀಭವನ, ಬೆಂಗಳೂರು, ೧೯೭೦, ಪು. ೧೬೩

೬. ಅದೇ, ಪು. ೧೫೭

೭. ಅದೇ, ಪು. ೪೩

೮. ಟಿ. ಗಿರಿಜ, **ದಾವಣಗೆರೆ : ಇದು ನಮ್ಮ ಜಿಲ್ಲೆ**, ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧, ಪು. ೪೮

೯. ಟಿ. ಗಿರಿಜ, **ಚಿತ್ರದುರ್ಗ ಜಿಲ್ಲಾದರ್ಶಿನಿ**, ರೇಖಾ ಪ್ರಕಾಶನ, ದಾವಣಗೆರೆ, ೧೯೯೧, ಪು. ೫೧೧

೧೦. ಈಚನೂರು ಶಾಂತ, **ಮಹಾತ್ಮ ಗಾಂಧೀಜಿ**, ಪೃಥ್ವಿ ಪ್ರಕಾಶನ, ಬೆಂಗಳೂರು, ೧೯೯೬, ಪು. ೩೩

೧೧. ಸೂರ್ಯನಾಥ ಯು. ಕಾಮತ್, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೩**, ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ, ಬೆಂಗಳೂರು, ೧೯೮೫, ಪು. ೭೪

೧೨. ಮೋ.ಕ. ಗಾಂಧಿ, (ಅನು.), ಸ್ವಾ.ರಾ. ಕುಲಕರಣಿ, **ನನ್ನ ಕಲ್ಪನೆಯ ಸಮಾಜವಾದ**, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೮೭, ಪು. ೧೫೨

೧೩. ಪಿ.ಎಸ್. ನಾರಾಯಣರಾವ್, **ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ**, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೦, ಪು. ೭

೧೪. ಡಿ.ಜಿ. ತೆಂಡೂಲ್ಕರ್, **ಮಹಾತ್ಮ**, ಗಾಂಧೀಭವನ, ಮಾನಸಗಂಗೋತ್ರಿ, ಮೈಸೂರು, ೧೯೭೬, ಪು. ೫೧

೧೫. ಕೃಷ್ಣ ಚೈತನ್ಯ, (ಅನು.), ಭೈರರಾಜ, **ಭಾರತದ ಸ್ವಾತಂತ್ರ್ಯ ಕಥೆ**, ನ್ಯಾಪನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿ, ೧೯೭೮, ಪು. ೧೫

೧೬. ಕೆ. ಸಂಪದ್ಗಿರಿರಾವ್, **ಸ್ವರಾಜ್ಯ**, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೨, ಪು. ೬

೧೭. ಸ್ವಾತಂತ್ರ್ಯ ಹೋರಾಟಗಾರರ ನೇರ ಸಂದರ್ಶನ (ರೆಕಾರ್ಡಿಂಗ್)

೧೮. ಅದೇ, ಪು. ೧೧

೧೯. ಅದೇ, ಪು. ೨೬

* * *

ಅಧ್ಯಾಯ ೬

ಸ್ವದೇಶಿ ಚಳವಳಿಯ ರೂವಾರಿಗಳು

ಅಧ್ಯಾಯ ೬

ಸ್ವದೇಶಿ ಚಳವಳಿಯ ರೂವಾರಿಗಳು

ಸ್ವದೇಶಿ ಚಳವಳಿ ಬಂಗಾಳದಿಂದ ಪ್ರಾರಂಭವಾಗಿ ನಂತರ ದೇಶದ ತುಂಬೆಲ್ಲ ಹರಡಿತು. ಬಂಗಾಳದ ವಿಭಜನೆಯು ರಾಷ್ಟ್ರೀಯ ವಿಪತ್ತೆಂದು ಅನೇಕ ನಾಯಕರು ಭಾವಿಸಿದರು. ಲೋಕಮಾನ್ಯ ತಿಲಕರಂತೂ ಬಂಗಾಳ ವಿಭಜನೆಯನ್ನು ಉಗ್ರವಾಗಿ ಖಂಡಿಸಿದರು. ತಾವು ಹೋದ ಕಡೆಯೆಲ್ಲ ಸ್ವದೇಶಿ ವಸ್ತುಗಳ ಬಳಕೆ ಹಾಗೂ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದೇ ಸ್ವರಾಜ್ಯ ಸಂಪಾದನೆಗೆ ಸಾಧನವೆಂದು ಜನತೆಗೆ ತಿಳಿಸಿ ಹೇಳುತ್ತಿದ್ದರು. ಇವರ ಪ್ರಭಾವ ಹರ್ಡೇಕರ ಮಂಜಪ್ಪನವರ ಮೇಲೆ ಬೀರಿತು. ಮರಾಠಿ ಪತ್ರಿಕೆಗಳಲ್ಲಿ ಪ್ರಕಟವಾದ ಲಾಲಾ-ಬಾಲ-ಪಾಲರ ಭಾಷಣ ಹಾಗೂ ಲೇಖನಗಳನ್ನು ಮಂಜಪ್ಪನವರು ಕನ್ನಡಿಸಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ದಾವಣಗೆರೆಯಿಂದ ೧೯೦೬ರ ಸೆಪ್ಟೆಂಬರ್ ತಿಂಗಳಲ್ಲಿ 'ಧನುರ್ಧಾರಿ' ಪತ್ರಿಕೆ ಪ್ರಕಟವಾಯಿತು. ದಾವಣಗೆರೆಯಲ್ಲಿ ಇವರು ಸ್ವಾತಂತ್ರ್ಯಕ್ಕಾಗಿ ಜನಗಳಲ್ಲಿ ಉತ್ಸಾಹ ತುಂಬಿ ಸಂಘಟನೆ ಮಾಡಿದರು. ಸ್ವದೇಶಿ ಚಳವಳಿ ಬಗ್ಗೆ ಜನರಿಗೆ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಿಂದ ದಾವಣಗೆರೆ ಜಿಲ್ಲೆಯ ಜನತೆಯಲ್ಲಿ ಸ್ವಾತಂತ್ರ್ಯದ ಬಗ್ಗೆ ಉತ್ಸಾಹ ಮೂಡಿತು. ಅದು ಮುಂದೆ ಗಾಂಧೀಜಿಯವರ ಆಗಮನದಿಂದ ಇನ್ನಷ್ಟು ವ್ಯಾಪಕವಾಗಿ ಬೆಳೆಯಿತು.[೧]

ಬಂಗಾಳವನ್ನು ವಿಭಜಿಸಿದಾಗ ನಡೆದ ಸ್ವದೇಶಿ ಚಳವಳಿಯ ಪ್ರಭಾವ ಕರ್ನಾಟಕದ ಮೇಲೂ ಆಯಿತು. ಧಾರವಾಡ, ಬೆಳಗಾವಿ, ಅಳಗಾಣಾರ, ಗದಗ, ಬಾಗಲಕೋಟೆ, ಕಿತ್ತೂರು ಮತ್ತು ದಾವಣಗೆರೆ ಮುಂತಾದ ಕಡೆ ಪ್ರತಿಭಟನಾ ಸಭೆಗಳು ನಡೆದವು. ಇದನ್ನೇ ಸ್ವದೇಶಿ ಆಂದೋಲನದ ಉಗಮ ಎಂದು ಕರೆಯಬಹುದು. ಹಲವು ಕಡೆ ರಾಷ್ಟ್ರೀಯ ಶಾಲೆಗಳನ್ನು ಆರಂಭಿಸಲಾಯಿತು. ವಿದೇಶಿ ವಸ್ತುಗಳ 'ಹೋಳಿ' ಸಭೆ ಮೆರವಣಿಗೆಗಳು ೧೯೨೧-೨೨ ರಲ್ಲಿ ನಡೆದವು. ಆ ಸಂದರ್ಭ ದಲ್ಲಿ ಕರ್ನಾಟಕದ ೭೦ಕ್ಕೂ ಹೆಚ್ಚು ಜನರು ಬಂಧಿತರಾದರು. ಆದರೂ ವಿದೇಶಿ ವಸ್ತುಗಳ ದಮನ ಕಾರ್ಯ ಮುಂದುವರೆದಿತ್ತು.[೨] ಈ ಹೋರಾಟದಲ್ಲಿ ಪಾಲ್ಗೊಂಡ ಹಾಗೂ ಸ್ವಾತಂತ್ರ್ಯ ಸಿಗುವವರೆಗೂ ಅದನ್ನು ಮುಂದುವರಿಸಿದ ಕೆಲವು ಪ್ರಮುಖ ನಾಯಕರ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕೊಟಿಗಿ ಸಿದ್ದಲಿಂಗಪ್ಪನವರು ಸ್ವದೇಶಿ ಚಳವಳಿ, ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಹೋರಾಟ ಮತ್ತು ಮೈಸೂರು ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹುಟ್ಟು ಹೋರಾಟ ಗಾರರಾದ ಸಿದ್ದಲಿಂಗಪ್ಪನವರು ಪತ್ರಿಕಾ ವೃತ್ತಿಯಲ್ಲಿ ನಾಲ್ಕು ಬಾರಿ ಸೆರೆಮನೆ ಕಂಡವರು. ಐದು ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿ, ಚಿತ್ರದುರ್ಗ, ಬೆಂಗಳೂರು, ತುಮಕೂರು ಮತ್ತು ಹಾಸನ

ಸೆರೆಮನೆಗಳಲ್ಲಿ ಇವರನ್ನು ಇಡಲಾಗಿತ್ತು. ಒಂದು ವರ್ಷ ಸ್ಥಾನಬದ್ಧ ಕೈದಿಯಾಗಿ ಚಿಕ್ಕಮಗಳೂರು ಸೆರೆಮನೆಯಲ್ಲಿಡಲಾಗಿತ್ತು. ನಂತರ ಇವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ಮೊದಲಿನಿಂದಲೂ ಕಾಂಗ್ರೆಸ್ ಕಾರ್ಯಕರ್ತರಾಗಿ ಸಾರ್ವಜನಿಕ ಸಂಪರ್ಕವುಳ್ಳ ಇವರು ೧೯೩೦ರಿಂದ ೧೯೪೭ರವರೆಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡರು. ಇವರು ಬಾಪೂಜಿ ತತ್ವದಿಂದ ದೂರಸರಿದು ಸುಭಾಷರ ತತ್ವಪಾಲನೆಯನ್ನು ರೂಢಿಸಿಕೊಂಡರು. ಕೊಟ್ರೆನಂಜಪ್ಪ, ಇಟಗಿ ವೇದಮೂರ್ತಿ ಮುಂತಾದವರ ಸ್ನೇಹವೇ ಇದಕ್ಕೆ ಕಾರಣವಾಯಿತು. ಸ್ವತಃ ರಾಷ್ಟ್ರಗೀತೆಗಳನ್ನು ರಚಿಸಿ, ತಾವೇ ಹಾಡಿ ಜನರನ್ನು ಹೋರಾಟಕ್ಕೆ ಧುಮುಕುವಂತೆ ಪ್ರೇರೇಪಿಸುತ್ತಿದ್ದರು.[೩]

೧೯೦೧-೧೯೪೭ ರವರೆಗೆ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಬಳ್ಳಾರಿ ಸಿದ್ದಮ್ಮನವರದು ಇನ್ನೊಂದು ಪ್ರಮುಖ ಹೆಸರು. ದಾವಣಗೆರೆಯಲ್ಲಿ ಇವರ ಮುಖಂಡತ್ವದಲ್ಲಿ ೧೯೩೨ರಲ್ಲಿ ಸ್ವದೇಶಿ ಚಳವಳಿ ಆರಂಭವಾಯಿತು. ವಿದೇಶಿ ವಸ್ತ್ರಗಳ ದಹನ ಕಾರ್ಯವನ್ನು ಖಾದಿ ವಸ್ತ್ರಾಲಯ ಕಾರ್ಯಕರ್ತರು ಮಾಡಿದರು. ಪ್ರತಿಯೊಂದು ವಿದೇಶಿ ಬಟ್ಟೆಗಳ ಅಂಗಡಿಗಳ ಮುಂದುಗಡೆ ಪಿಕೆಟಿಂಗ್ ನಡೆಸಿದರು.[೪] ಇವರು ಸ್ವಯಂ ಪ್ರೇರಣೆಯಿಂದ ಸಮಾಜ ಸೇವಕರಾಗಿ ತೊಡಗಿಕೊಂಡಂತವರು. ಮಹಾತ್ಮ ಗಾಂಧೀಜಿಯವರ ಭೇಟಿ ಮತ್ತು ಸಲಹೆಗಳಿಂದ ಸ್ವದೇಶಿ ಚಳವಳಿಯಲ್ಲಿ ಪಾಲ್ಗೊಂಡರು. ಮೈಸೂರು ಕಾಂಗ್ರೆಸ್ ಸಮಿತಿಯ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಚಾರ ಮಾಡಿದರು. ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಭಗಿನೀ ಮಂಡಳಿಯ ಅಧ್ಯಕ್ಷರೂ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಆಗಿದ್ದರು. 'ಮಾತೃ ಮಂದಿರ' ಅಥವಾ ಪ್ರಸೂತಿಗೃಹಗಳನ್ನು ತೆರೆದರು. ದಾವಣಗೆರೆ, ಹೆಬ್ಬಾಳಗಳಲ್ಲಿ ಮಾತೃ ಮಂದಿರವನ್ನು ಸ್ಥಾಪಿಸಿದರು. ಬಡ ಸ್ತ್ರೀಯರಿಗೆ ಸಹಾಯವಾದರು. ದಾವಣಗೆರೆಯಲ್ಲಿ ಮಹಿಳಾ ಸಮಾಜ ಸ್ಥಾಪಿಸಿದರು. ಅಪ್ಪಟ ಖಾದಿಧಾರಿಯಾಗಿದ್ದ ಶ್ರೀಮತಿ ಸಿದ್ದಮ್ಮನವರು ೧೯೩೮ರ ಏಪ್ರಿಲ್‌ನಲ್ಲಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ದಿಟ್ಟತನದಿಂದ ಪಾಲ್ಗೊಂಡ ಪ್ರಥಮ ಮಹಿಳೆ ಎನಿಸಿದರು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೃಹತ್ ಸಮಾವೇಶದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ಜೈಲುವಾಸ ಅನುಭವಿಸಿದರು. ೧೯೩೯ರ ಅರಣ್ಯ ಸತ್ಯಾಗ್ರಹ ಸಮಯದಲ್ಲಿ ಎಸ್. ನಿಜಲಿಂಗಪ್ಪನವರ ಜೊತೆಯಲ್ಲಿ ಭಾಗವಹಿಸಿ ಜೈಲು ಶಿಕ್ಷೆಗೆ ಒಳಗಾದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ೧೯೪೭ರಲ್ಲಿ ನಡೆದ ಮೈಸೂರು ಚಲೋ ಸತ್ಯಾಗ್ರಹದಲ್ಲಿದ್ದು, ಕೋರ್ಟ್ ಕಟ್ಟಡದ ಮೇಲೆ ಧ್ವಜ ಹಾರಿಸಿ, ಪ್ರವೇಶ ತಡೆ ಹಾಕಿದರು.[೫]

ದಾವಣಗೆರೆಯಲ್ಲಿ ಖಾದಿಯನ್ನು ಪ್ರಚಾರ ಮಾಡಿದವರಲ್ಲಿ ಖಾದಿ ಸಿದ್ದಪ್ಪನವರು ಪ್ರಮುಖರು. ಖಾದಿ ಸಿದ್ದಪ್ಪನವರು ದಾವಣಗೆರೆಯಲ್ಲಿ ಮೊದಲ ಬಾರಿಗೆ ಸ್ವತಃ ಖಾದಿ ವಸ್ತ್ರಾಲಯ ಸ್ಥಾಪಿಸಿದರು. ನವಭಾರತ ಖಾದಿ ವಸ್ತ್ರಾಲಯ ಎಂದು ಅದಕ್ಕೆ ಹೆಸರಿಟ್ಟ ನಂತರ ಕೆ.ಎಸ್. ಸಿದ್ದಪ್ಪ ಎನ್ನುವ ಹೆಸರಿದ್ದ ಅವರು ಖಾದಿ ಸಿದ್ದಪ್ಪ ಎಂದೇ ಪರಿಚಿತರಾದರು. ಹರಿಜನ ಸೇವೆ, ಹಿಂದಿ ಪ್ರಚಾರ,

ಸೇವಾದಳ, ಸರ್ವೋದಯ ಸೇವಾ ಕೆಲಸ, ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಯ ಪ್ರಚಾರ ಮುಂತಾದ ಕೆಲಸಕಾರ್ಯಗಳಲ್ಲಿ ಇವರು ಸಕ್ರಿಯವಾಗಿ ತೊಡಗಿಕೊಂಡಿದ್ದರು. ಇವರು ಇತರ ಹೋರಾಟಗಾರರ ಜೊತೆ ೧೯೪೨ರಲ್ಲಿ ಮುಂಬೈನಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ಪತ್ರಿಕಾ ರಂಗದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ ಕೊಟಿಗೆ ಸಿದ್ದಲಿಂಗಪ್ಪ ಮತ್ತು ಇಟಗಿ ವೇದಮೂರ್ತಿ ಅವರಿಗೆ ಪ್ರೋತ್ಸಾಹವನ್ನು ನೀಡಿ ಹುರಿದುಂಬಿಸಿದವರು ಖಾದಿ ಸಿದ್ದಪ್ಪನವರು. ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ಪೋಲಿಸರ ದಬ್ಬಾಳಿಕೆಗೆ ಹೆದರದೆ ಖಾದಿ ಸಿದ್ದಪ್ಪ ಒಂದು ವರ್ಷ ಕಠಿಣ ಶಿಕ್ಷೆ ಅನುಭವಿಸಿದರು.

ಕಾಸಲ ಶ್ರೀನಿವಾಸಶೆಟ್ಟರು ದಾವಣಗೆರೆ ಜಿಲ್ಲೆಯಲ್ಲಿ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಇವರ ಹೋರಾಟ ಸ್ವದೇಶಿ ಚಳವಳಿಯಿಂದ ಆರಂಭವಾಗುತ್ತದೆ. ಸಮಾಜದ ದೀನದಲಿತರ ಮತ್ತು ದುರ್ಬಲ ಜನರ ಹಿತ ಸಾಧನೆಗಾಗಿ ಇಡೀ ಜೀವನವನ್ನು ಮುಡಿಪಾಗಿಟ್ಟರು. ರಾಷ್ಟ್ರೀಯ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಶ್ರೀನಿವಾಸ ಶೆಟ್ಟರು ಪಟ್ಟಶ್ರಮ ಅಪಾರ. ಹೆಣ್ಣು ಮಕ್ಕಳ ಕ್ಷೇಮಾಭ್ಯುದಯಕ್ಕಾಗಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಿಗೆ ಬೆಂಬಲ ನೀಡಿದರು. ಹರಿಜನ ವಿದ್ಯಾರ್ಥಿ ನಿಲಯದ ಉದ್ಘಾಟನೆಯನ್ನು ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ಹಸ್ತದಿಂದಲೇ ನೆರವೇರಿಸಿದ ಕೀರ್ತಿಗೆ ಕಾಸಲ ಶ್ರೀನಿವಾಸಶೆಟ್ಟರು ಪಾತ್ರರಾಗಿದ್ದರು. ಇವರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿ ಇವರ ಮುಖಂಡತ್ವದಲ್ಲಿ ವಿದೇಶಿ ವಸ್ತ್ರಗಳ ದಹನ ಕಾರ್ಯ ನಡೆಯಿತು. ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ ಮತ್ತು ಮೈಸೂರು ಚಲೋ ಚಳವಳಿಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡರು.[೬]

ದಾವಣಗೆರೆ ಜಿಲ್ಲೆಯಲ್ಲಿ ಸ್ವದೇಶಿ ಹೋರಾಟದ ಕುರಿತು ಬುಲಿಟಿನ್‌ಗಳ ಮೂಲಕ ಜನಜಾಗೃತಿ ಮೂಡಿಸಿದವರಲ್ಲಿ ಮಾಗಾನಹಳ್ಳಿ ಬಸವರಾಜಪ್ಪನವರು ಪ್ರಮುಖರು. ಬಸವರಾಜಪ್ಪನವರು ಮತ್ತು ಇಟಗಿ ವೇದಮೂರ್ತಿಯವರು ದಿನನಿತ್ಯ ಹರಪನಹಳ್ಳಿಗೆ ಬಂದು ಅಲ್ಲಿದ್ದ ಶಿವಾನಂದ ಪ್ರಿಂಟಿಂಗ್ ಪ್ರೆಸ್‌ನಿಂದ ಸಲಕರಣೆ ಪಡೆದು, ಅಲ್ಲಿ ಬುಲಿಟಿನ್ ತಯಾರಿಸಿಕೊಂಡು ದಾವಣಗೆರೆಗೆ ಬಂದು ಗುಪ್ತ ಪ್ರಚಾರವನ್ನು ಮಾಡುತ್ತಿದ್ದರು. ಈ ಗುಪ್ತ ಪ್ರಚಾರವೇ ಬಹಿರಂಗ ಹೋರಾಟಕ್ಕೆ ಜೀವ ತುಂಬುತ್ತಿದ್ದವು. ಬಸವರಾಜಪ್ಪ ಪೋಲಿಸರ ಕಣ್ಣಿಗೆ ಆಕಸ್ಮಿಕವಾಗಿ ಸಿಕ್ಕುಬಿಟ್ಟರು. ಇವರಿಗೆ ಎರಡು ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು. ೧೯೩೯-೪೨ ರವರೆಗೆ 'ಸ್ವಾತಂತ್ರ್ಯ ಕಹಳೆ' ಮತ್ತು 'ಭಾರತ ಸಂದೇಶ' ಎನ್ನುವ ಬುಲಿಟಿನ್‌ಗಳ ಮೂಲಕ ಜನಜಾಗೃತಿಯನ್ನುಂಟು ಮಾಡಿದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನರನ್ನು ಆಕರ್ಷಿತರನ್ನಾಗಿಸಲು ಗುಪ್ತ ಪ್ರಚಾರ ಮಾಡುತ್ತಿದ್ದರು.[೭] ಬಿ. ಮಲ್ಲಪ್ಪ ಮತ್ತು ಇಟಗಿ ವೇದಮೂರ್ತಿ ಇವರಿಬ್ಬರೂ ಬರಹಗಾರರಾಗಿದ್ದರು. ಮಗಾನಹಳ್ಳಿ

ಬಸವರಾಜಪ್ಪ ಕಂಪೋಜ್ ಮತ್ತು ಹ್ಯಾಂಡ್ ಪ್ರಿಂಟ್ ಮಾಡುತ್ತಿದ್ದರು. ಈ ರೀತಿಯಾಗಿ ಇವರು ಬುಲಿಟಿನ್ ಮೂಲಕ ಸ್ವದೇಶಿ ಹಾಗೂ ಇನ್ನಿತರ ಚಳವಳಿಗಳಿಗೆ ಸ್ಫೂರ್ತಿ ತುಂಬಿದರು.[೨]

ಇಜಾರಿ ವಸುಪಾಲಪ್ಪನವರು ಹರಪನಹಳ್ಳಿಯಲ್ಲಿ ೧೯೧೫ರಿಂದಲೇ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಶುಭ್ರವಾದ ಖಾದಿ ಬಿಳಿಬಟ್ಟೆಯ ಕುರ್ತಾ ಮಾದರಿಯ (ಶೀರ್ವಾನಿ) ಕೋಟು ಹಾಗೂ ಗಜದ ಲಂಡಪಂಚೆ, ಗಾಂಧೀ ಟೋಪಿ, ಕೈಯಲ್ಲಿ ಬೆತ್ತ ಹಿಡಿದು ನಡೆಯುತ್ತಿದ್ದ ಅವರು ಗಾಂಧೀಜಿಯವರ ಶೈಲಿಯಲ್ಲಿ ಜೀವನ ನಡೆಸುತ್ತಿದ್ದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಹರಪನಹಳ್ಳಿಯ ಡಾ. ರಾಮರಾಯರ ನೇತೃತ್ವದಲ್ಲಿ ೩೦ ಜನ ಸ್ವಯಂಸೇವಕರನ್ನು ಕರೆದುಕೊಂಡು ಹೋಗಿದ್ದರು. ಅವರಲ್ಲಿ ಅರಳಿಕಟ್ಟೆ ಪೂರ್ಣಚಾರ್, ಚಿಗಟೇರಿ ಮುದೇನೂರು ಕೊಟ್ರಬಸಪ್ಪನವರು ಪ್ರಮುಖರು. ವಸುಪಾಲಪ್ಪನವರು ಸ್ವದೇಶಿ ಚಳವಳಿಯ ಬಗ್ಗೆ ಅನೇಕ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಮಹಾತ್ಮ ಗಾಂಧಿಯವರ ನೇತೃತ್ವದ ಪ್ರತಿಯೊಂದು ಚಳವಳಿಯಲ್ಲಿ ತೊಡಗಿಸಿಕೊಂಡರಲ್ಲದೇ ಅನೇಕ ಜನರನ್ನು ಆ ಚಳವಳಿಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು. ೧೯೩೦ ರಲ್ಲಿ ಪಾನಪ್ರತಿಬಂಧಕ ಚಳವಳಿಯ ಅಂಗವಾಗಿ ಈಚಲ ಮರಗಳನ್ನು ಕಡಿಯುವ ಚಳವಳಿಯನ್ನು ಆರಂಭಿಸಿದರು. ೧೯೩೦ರಲ್ಲಿ ದೇಶದಾದ್ಯಂತ ಜರುಗಿದ ಈಚಲಮರ ಕಡಿಯುವ ಚಳವಳಿಯ ಅಂಗವಾಗಿ ಪ್ರಪ್ರಥಮವಾಗಿ ೧೫.೭.೧೯೩೦ರಲ್ಲಿ ಹರಪನಹಳ್ಳಿ ತಾಲೂಕಿನ ಕಂಚಿಕೇರಿ ಗ್ರಾಮದಲ್ಲಿ ವಸುಪಾಲಪ್ಪನವರ ಮಾರ್ಗದರ್ಶನದಲ್ಲಿ ಕಂಚಿಕೇರಿ ಕೆಂಚಪ್ಪನ ಜಮೀನಿನಲ್ಲಿ ದಯಾನಂದರಾಜು, ಕೆ.ಬಿ. ಕುಲಕರ್ಣಿ, ಬಾಲಾಜಿ ಮತ್ತು ಶೆಟ್ರ ಚೂಡಪ್ಪ ಮುಂತಾದವರು ಈಚಲ ಗಿಡವನ್ನು ಕಡಿದರು. ಈಚಲ ಮರವನ್ನು ಕಡಿಯುವ ಚಳವಳಿಯು ಹರಪನಹಳ್ಳಿಯಲ್ಲಿ ಸಂಘಟಿತವಾಗಿ, ದಾವಣಗೆರೆ ಜಿಲ್ಲೆಯಾದ್ಯಂತ ವ್ಯಾಪಿಸಿತು.

ಹರ್ಡೇಕರ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಹಾಗೂ ಇಜಾರಿ ವಸುಪಾಲಪ್ಪನವರ ಮುಖಂಡತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಯೋಧರನ್ನು ತರಬೇತಿ ಮಾಡುವ ಕಾರ್ಯ ಆರಂಭಗೊಂಡಿತು. ೧೯೩೨ರಲ್ಲಿ ಇವರ ಸಂಘಟನೆ ಮತ್ತು ಮಾರ್ಗದರ್ಶನದ ಪ್ರಭಾವದಿಂದ ಹರಪನಹಳ್ಳಿ ತಾಲೂಕಿನ ಕಣವಿಹಳ್ಳಿ ಗ್ರಾಮದಲ್ಲಿ ಪಟ್ಟಾ ಜಮೀನಿನಲ್ಲಿ ಎ.ಬಿ. ಕುಲಕರ್ಣಿಯವರ ನೇತೃತ್ವದಲ್ಲಿ ಕಂಚಿನಕೋಟೆ ಬ್ರಹ್ಮಪ್ಪ, ಇಜಾರಿ ಶ್ರೀಧರಪ್ಪ, ಅರಳಿಕಟ್ಟೆ ಪೂರ್ಣಾಚಾರ್, ಶೆಟ್ರ ಚೂಡಪ್ಪ, ಕೊಪ್ಪಳ ರುದ್ರಪ್ಪ, ಬೆಣ್ಣೆಹಳ್ಳಿ ಬಸವಲಿಂಗಪ್ಪ, ಲಕ್ಕುಂಡಿ ಶಾಮರಾವ್ ಮತ್ತು ಬಿದರಹಳ್ಳಿ ಜಗನ್ನಾಥರಾವ್ ಇವರುಗಳು ಈಚಲಮರ ಕಡಿಯಲು ಹೋಗಿ ಬಂಧನಕ್ಕೊಳಗಾದರು. ಇವರಿಗೆ ಮೂರು ತಿಂಗಳ ಶಿಕ್ಷೆ ಮತ್ತು ದಂಡ ವಿಧಿಸಲಾಗಿತ್ತು. ೧೯೩೪ರಲ್ಲಿ ಹರಪನಹಳ್ಳಿಗೆ ಮಹಾತ್ಮಾ ಗಾಂಧೀಜಿಯವರು ಬಂದಾಗ ಭವ್ಯವಾಗಿ ಸ್ವಾಗತಿಸಿದರು. ಹರಿಜನೋದ್ಧಾರ ನಿಧಿಗೆ ಹಣ ಸಂಗ್ರಹಿಸುವಲ್ಲಿ ವಸುಪಾಲಪ್ಪನವರು ಪ್ರಮುಖ ಪಾತ್ರವಹಿಸಿದ್ದರು. ದಾವಣಗೆರೆ ಜಿಲ್ಲೆಯಲ್ಲಿ ಮಹಾತ್ಮಾ ಗಾಂಧೀಜಿಯವರ

ತತ್ವಗಳನ್ನು ಬಿತ್ತಿದವರಲ್ಲಿ ಇವರು ಮೊದಲಿಗರು. ಹರಪನಹಳ್ಳಿಯು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಾವಣಗೆರೆ ಜಿಲ್ಲೆಗೆ ಕೇಂದ್ರಬಿಂದುವಾಗಿತ್ತು. ೧೯೪೨ರಲ್ಲಿ "ಆಂಗ್ಲರೇ ಭಾರತ ಬಿಟ್ಟು ತೊಲಗಿರಿ" ಅಥವಾ ಕ್ವಿಟ್ ಇಂಡಿಯಾ ಚಳವಳಿಯು ಹರಪನಹಳ್ಳಿಯಲ್ಲಿ ವಸುಪಾಲಪ್ಪನವರ ಮುಖಂಡತ್ವದಲ್ಲಿ ಉಗ್ರವಾಗಿ ನಡೆಯಿತು. ವಸುಪಾಲಪ್ಪನವರು ಅಪ್ಪಟ ಗಾಂಧಿವಾದಿಯಾಗಿದ್ದರು. ಇವರ ಪೂರ್ವದಲ್ಲಿ ಯಾವ ಚಳವಳಿಯೂ ಹರಪನಹಳ್ಳಿಯಲ್ಲಿ ನಡೆಯಲಿಲ್ಲ.

ಟಿ.ಬಿ. ಕೇಶವರಾಯರು ೧೯೧೬ರಲ್ಲಿ ಗತಿಸಿದ ಗೋಪಾಲಕೃಷ್ಣ ಗೋಖಲೆಯವರ ಸ್ಮರಣಾರ್ಥವಾಗಿ ನಡೆದ ಶೋಕಸಭೆಯಲ್ಲಿ ಬಾಲಗಂಗಾಧರ ತಿಲಕರು ಮಾಡಿದ ಇಂಗ್ಲಿಷ್ ಭಾಷಣವನ್ನು ಕನ್ನಡಕ್ಕೆ ಅನುವಾದ ಮಾಡಿ ತಮ್ಮ ಸ್ನೇಹಿತರಿಗೆ ಹೇಳುತ್ತಿದ್ದರು. ಲಾಲಾ ಲಜಪತ ರಾಯ, ಪಂಡಿತ ಮದನಮೋಹನ ಮಾಳವೀಯ, ಬಿಪಿನ್ ಚಂದ್ರಪಾಲ್, ಗೋಖಲೆ ಮತ್ತು ತಿಲಕರು ಮುಂತಾದ ಅನೇಕ ರಾಷ್ಟ್ರನಾಯಕರ ಜೀವನ ಚರಿತ್ರೆಗಳನ್ನು ಇವರು ತರಿಸಿಕೊಂಡು ಓದುತ್ತಿದ್ದರು. ತಿಲಕರ ಧೈರ್ಯ-ಸ್ಥೈರ್ಯ ದೇಶಭಕ್ತಿಗಳನ್ನು ವಿದ್ಯಾರ್ಥಿಗಳು ಅನುಸರಿಸುವಂತೆ ವಿನಂತಿಸಿದರು. ೧೯೨೩-೨೯ ರವರೆಗೆ ಖಾದಿ ಉತ್ಪನ್ನ ಮತ್ತು ಪ್ರಚಾರ, ಗೋರಕ್ಷಣೆ, ಗೋಶಾಲೆ ಸ್ಥಾಪನೆ ಮುಂತಾದ ಕೆಲಸಕಾರ್ಯಗಳಲ್ಲಿ ತೊಡಗಿದ್ದರು. ೧೯೨೪ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಹೋಗಿದ್ದರು. ನಂತರ ಗಾಂಧೀಜಿಯವರ ದಂಡಿಯಾತ್ರೆ ಆರಂಭವಾದ ಕೂಡಲೇ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. ೧೯೩೬ರಲ್ಲಿ ಹರಪನಹಳ್ಳಿಯಲ್ಲಿ ವಸುಪಾಲಪ್ಪನವರ ನೇತೃತ್ವದಲ್ಲಿ ಸಂಘಟನೆಯು ರಭಸದಿಂದ ನಡೆಯುತ್ತಿತ್ತು. ಬೆಣ್ಣೆಹಳ್ಳಿ, ಬಸವಲಿಂಗಪ್ಪ, ಹಾಲಸಿದ್ದಪ್ಪ ಕೆ., ಗೌಡಪ್ಪನವರು ವಿದ್ಯಾರ್ಥಿಗಳ ಸಂಘಟನೆ ಕಾರ್ಯ ಕೈಗೊಂಡರು. ಕೇಶವರಾಯರು ಟಿ. ಸುಬ್ರಮಣ್ಯಂ ಮತ್ತು ವಿ.ಎಂ. ಗಿರಿಯವರೊಡನೆ ಸೇರಿಕೊಂಡು 'ಕರ್ನಾಟಕ ಕೇಸರಿ' ಎನ್ನುವ ವಾರಪತ್ರಿಕೆಯನ್ನು ೧೯೩೧-೩೨ರಲ್ಲಿ ಬಳ್ಳಾರಿಯಿಂದ ಹೊರಡಿಸಿ ಸ್ವಾತಂತ್ರ್ಯ ಜ್ಯೋತಿ ನಂದದಂತೆ ಪ್ರಚಾರ ಮಾಡಿದರು. ೧೯೩೩ ಸೆಪ್ಟೆಂಬರ್ ತಿಂಗಳಲ್ಲಿ ಖಾದಿ ಮತ್ತು ಸ್ವದೇಶಿ ವಸ್ತು ಪ್ರದರ್ಶನವನ್ನು ಗಡಿನಾಡಗಾಂಧಿ ಖಾನ್ ಅಬ್ದುಲ್‌ಗಫಾರ್‌ಖಾನ್ ಸೊಸೆ ಸೋಫಿಯರ್ ಸೋಮ್‌ಜಿ ನೆರವೇರಿಸಿದರು. ಇದರ ಪ್ರಭಾವದಿಂದ ಜಿಲ್ಲೆಯಲ್ಲಿ ಖಾದಿ ಮತ್ತು ಸ್ವದೇಶಿ ಹೆಚ್ಚಿನ ಪ್ರಚಾರವನ್ನು ಪಡೆದುಕೊಂಡಿತು.

೧೯೪೨ರಲ್ಲಿ ಆಂಗ್ಲರೇ ಭಾರತ ಬಿಟ್ಟು ತೊಲಗಿರಿ ಚಳವಳಿ ಆರಂಭವಾದಾಗ ಇವರು ಅನೇಕ ವಿಧ್ವಂಸಕ ಕೃತ್ಯಗಳನ್ನು ಮಾಡಿದರು. ೧೯೪೨ರಲ್ಲಿ ಇವರನ್ನು ಬಂಧಿಸಿ ವೆಲ್ಲೂರಿಗೆ ಕರೆದೊಯ್ಯಲಾಯಿತು. ಒಂದು ವರ್ಷ ಎಂಟು ತಿಂಗಳ ನಂತರ ಇವರ ಬಿಡುಗಡೆಯಾಯಿತು. ಹರಪನಹಳ್ಳಿಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನದ ಕೊನೆಯವರೆಗೂ ಇವರು ಹೋರಾಟ ಮಾಡಿದರು. ಇವರೊಂದಿಗೆ ಬಿ. ಅನಂತಚಾರ್, ಎ.ಹೆಚ್. ಶಿವಾನಂದ ಸ್ವಾಮಿ, ಬಣಗಾರ ಹೊನ್ನಪ್ಪ, ಮುದುಗಲ್ ನಾಗಪ್ಪ, ಇಜಾರಿ ಶಿರಸಪ್ಪ, ಕಟ್ಟೆ ಸೇತುರಾಮಾಚಾರ್, ಮುದೇನೂರು ಕೊಟ್ರಬಸಪ್ಪ, ಕೆ.ಎಸ್. ವೀರಪ್ಪ

ಮತ್ತು ಶೆಟ್ರ ಪರಮೇಶ್ವರಪ್ಪ ಮುಂತಾದವರು ಸೇರಿಕೊಂಡು ಹರಪನಹಳ್ಳಿ ತಾಲೂಕಿನ ಸ್ವದೇಶಿ ಚಳವಳಿಯು ಚುರುಕಿನಿಂದ ನಡೆಯುವಂತೆ ಮಾಡಿದರು.[೯]

ಶೆಟ್ರ ಚೂಡಪ್ಪನವರು ೧೯೨೪ರಲ್ಲಿ ಬೆಳಗಾವಿ ಕಾಂಗ್ರೆಸ್‌ದಲ್ಲಿ ದುಡಿದು ಅಲ್ಲಿಂದ ಜಿಲ್ಲೆಯ ಸಕಲ ರಾಷ್ಟ್ರೀಯ ಕಾರ್ಯಗಳಲ್ಲಿ ಭಾಗವಹಿಸಿದರು. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಮೂರು ತಿಂಗಳ ಕಠಿಣ ಶಿಕ್ಷೆ ಮತ್ತು ೩೦ ರೂ. ದಂಡ ತೆತ್ತರು. ಬಳ್ಳಾರಿ ಸೆಂಟ್ರಲ್ ಜೈಲು ಮತ್ತು ಮದ್ರಾಸ್ ಜೈಲುಗಳಲ್ಲಿ ಜೈಲುವಾಸ ಅನುಭವಿಸಿ ಬಿಡುಗಡೆ ಹೊಂದಿದರು. ೧೯೩೨ರಲ್ಲಿ ಹರಪನಹಳ್ಳಿ ತಾಲೂಕಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ನಿರ್ಬಂಧಿತ ಕರಪತ್ರ ಹಂಚಿದ್ದಕ್ಕೆ ಹೊಸಪೇಟೆ ನ್ಯಾಯಾಲಯದಲ್ಲಿ ೬ ತಿಂಗಳು ಜೈಲು ಶಿಕ್ಷೆ ವಿಧಿಸಲಾಯಿತು. ಬಳ್ಳಾರಿ ಜೈಲಿನಲ್ಲೂ ಶಿಕ್ಷೆ ಅನುಭವಿಸಿದರು. ನಂತರ ಬಿಡುಗಡೆಯಾದ ಮೇಲೆ ೧೯೩೮ರಲ್ಲಿ ಹರಪನಹಳ್ಳಿಯಲ್ಲಿ ಖಾದಿ ಅಂಗಡಿಯನ್ನು ಸ್ಥಾಪಿಸಿದರು.[೧೦]

ಕೆ.ಎಂ. ಅಣಜಿಮಠರವರು ಬೆಳಗಾವಿ ಕಾಂಗ್ರೆಸಿನ ವಿಚಾರಗಳನ್ನು ಪತ್ರಿಕೆಗಳಲ್ಲಿ ಓದಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ನಂತರ ಸ್ವದೇಶಿ ಚಳವಳಿ ಸೇರಿ ಪರದೇಶಿ ವಸ್ತುಗಳ ಬಹಿಷ್ಕಾರ ಚಟುವಟಿಕೆಯಲ್ಲಿ ಭಾಗವಹಿಸಿದರು. ಮುಂದೆ ಅರಣ್ಯ ಸತ್ಯಾಗ್ರಹ, ಸೇಂದಿ ಅಂಗಡಿ ಪಿಕೆಟಿಂಗ್‌ನಲ್ಲೂ ಭಾಗವಹಿಸಿದರು. ನಂತರ ಮುಂಬೈಗೆ ಹೋಗಿ ೧೯೩೦ರ ಮೇಯಲ್ಲಿ ವಡಾಲಾ ಉಪ್ಪಿನ ಸತ್ಯಾಗ್ರಹ ಶಿಬಿರದಲ್ಲಿ ಸೇರಿದರು. ಯೂಸುಫ್ ಮೆಹ‌ಅಲಿ, ಎಸ್.ಕೆ. ಪಾಟೀಲ್, ಹಂಸಾಮೆಹ್ತಾ ಮುಂತಾದವರ ಆದೇಶದಂತೆ ಕೆಲಸ ಮಾಡಿದರು. ಈ ಸಮಯದಲ್ಲಿ ೩ ತಿಂಗಳು ಶಿಕ್ಷೆ ಆಯಿತು. ಅಲ್ಲಿಂದ ಸಾಬರಮತಿ ಆಶ್ರಮಕ್ಕೆ ತೆರಳಿ ಖಾದಿ ಉತ್ಪಾದನೆಯಲ್ಲಿ ಮೂರು ತಿಂಗಳು ತರಬೇತಿ ಪಡೆದು ೧೯೩೬ರಲ್ಲಿ ಹರಿಹರಕ್ಕೆ ಮರಳಿ ಬಂದರು. ೧೯೩೯ರಲ್ಲಿ ಶಿವಪುರ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧಿತರಾಗಿದ್ದರು. ೧೯೪೨ರಲ್ಲಿ ತಾಲೂಕಿನಲ್ಲೆಲ್ಲ ಅನೇಕ ಭೂಗತ ಹಾಗೂ ವಿಧ್ವಂಸಕ ಕೃತ್ಯಗಳಲ್ಲಿ ಭಾಗವಹಿಸಿದ್ದರು. ೧೯೪೭ರಲ್ಲಿ ತಾಲೂಕು ಕಚೇರಿಯ ಮೇಲೆ ಧ್ವಜ ಹಾರಿಸುವುದಾಗಿ ಪತ್ರ ಬರೆದಿದ್ದರು. ಆದರೆ ಅದರ ಹಿಂದಿನ ದಿವಸ ಇವರನ್ನು ಬಂಧಿಸಲಾಯಿತು. ಜೊತೆಯಲ್ಲಿ ಅಧ್ಯಕ್ಷರಾಗಿದ್ದ ಎಚ್.ಎಂ. ಕಾಶಿನಾಥಯ್ಯ, ಟಿ. ಜಯದೇವಪ್ಪ, ಎಂ. ಮಾಧವನಾಯಕ, ಕೆ. ದಶರಥಶಾಸ್ತ್ರಿ, ಎಂ. ನಾಗಭೂಷಣ, ಜಿ.ಎಂ. ಹನುಮಂತರಾವ್, ಕೆ. ನಂಜುಂಡಯ್ಯ, ಜಿ. ಮುನಿಯಪ್ಪ, ಗೌಡ್ರ ಬಸಪ್ಪ ಮತ್ತು ಎಚ್. ವೀರಭದ್ರಪ್ಪ ಮುಂತಾದವರೂ ಇದ್ದರು.

ಕೆ.ಎಚ್. ಮಹಾದೇವಪ್ಪನವರು ಚಿಕ್ಕವಯಸ್ಸಿನಲ್ಲಿ ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿದರು. ೧೯೩೮ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ವಯಂಸೇವಕರಾಗಿ ಒಂದು ವಾರ ಕೆಲಸ ಮಾಡಿದರು. ಅಲ್ಲಿಂದ ದಾವಣಗೆರೆಯಲ್ಲಿ ೧೯೩೮ರಲ್ಲಿ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಹೆಂಡದಂಗಡಿ ಪಿಕೆಟಿಂಗ್, ಖಾದಿ ಪ್ರಚಾರ, ವಿದೇಶಿ ವಸ್ತುಗಳ ಬಹಿಷ್ಕಾರ, ಅರಣ್ಯ ಸತ್ಯಾಗ್ರಹಕ್ಕೆ

ಸಂಬಂಧಿಸಿದ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ಹರಿಹರದಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಕೆಲಸ ಮಾಡಿದರು. ೧೯೪೨ರಲ್ಲಿ ಹರಿಹರದಲ್ಲಿ ದೂರವಾಣಿ ತಂತಿಗಳನ್ನು ಕತ್ತರಿಸಿದರು. ಈ ಸಮಯದಲ್ಲಿ ಮಹಾದೇವಪ್ಪ ಮತ್ತು ಅವರ ಸ್ನೇಹಿತ ಕೆ. ಚನ್ನವೀರಪ್ಪನವರನ್ನು ಬಂಧಿಸಲಾಯಿತು. ನಂತರ ಹರಿಹರದಲ್ಲಿ ರೈಲುಹಳಿಯನ್ನು ಕಿತ್ತಿದ ಆರೋಪದ ಮೇಲೆ ಚಿತ್ರದುರ್ಗದಲ್ಲಿ ಆರು ತಿಂಗಳು ಡೆಟನ್ಯು ಅಂತ ಇಟ್ಟರು.[೧೧]

ಟಿ.ಎನ್. ಓಬಳಪ್ಪ ಪಂಡಿತ್‌ರವರು ನಿಜಲಿಂಗಪ್ಪ, ಭೀಮಪ್ಪ ನಾಯಕ, ವಾಸುದೇವರೆಡ್ಡಿ ಮತ್ತು ದೊಗ್ಗನಾಳಿನ ಕೊಟ್ರನಂಜಪ್ಪ ಮುಂತಾದ ಕೆಲವು ನಾಯಕರುಗಳ ಜೊತೆ ಸೇರಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಸಭೆ ಸೇರಿಸಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಓಬಳಪ್ಪ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದರು. ಹಳ್ಳಿಗರಲ್ಲಿ ಜವಾಬ್ದಾರಿ ಸರಕಾರದ ಧೋರಣೆಗಳ ಪ್ರಚಾರ ಮಾಡುತ್ತಿದ್ದರು. ತಾಲೂಕು ಕಾಂಗ್ರೆಸ್ ಸಮ್ಮೇಳನವನ್ನು ಆಗಿನ ಕಾಂಗ್ರೆಸ್ ಅಧ್ಯಕ್ಷ ಎಚ್.ಸಿ. ದಾಸಪ್ಪನವರ ನೇತೃತ್ವದಲ್ಲಿ ನಡೆಯಿತು. ೧೦೧ ಜೋಡಿ ಎತ್ತು ಹೂಡಿ ಮೂರು ಮೈಲು ದೂರದಿಂದ ಅಧ್ಯಕ್ಷರ ಮೆರವಣಿಗೆ ಮಾಡಿದರು. ಈ ಸಮಾರಂಭಕ್ಕೆ ಸುತ್ತಲ ಹಳ್ಳಿಯಿಂದ ಸುಮಾರು ೧೨ ಸಾವಿರ ಜನ ಬಂದಿದ್ದರು. ಅವರಿಗೆ ಸ್ವದೇಶಿ ಚಳವಳಿಯ ಮಹತ್ವದ ಕುರಿತು ತಿಳಿಸಲಾಯಿತು. ಸೇಂದಿ ಅಂಗಡಿ ಪಿಕೆಟಿಂಗ್‌ನ್ನು ಸುಮಾರು ೪ ತಿಂಗಳ ಕಾಲ ಒಂದು ದಿನವೂ ಬಿಡದೆ ನಡೆಸಲಾಯಿತು. ಆ ಸಂದರ್ಭದಲ್ಲಿ ಪೋಲಿಸರಿಂದ ವಿಪರೀತ ಕಿರುಕುಳ ಆಯಿತು. ನಂತರ ಎಂ. ಹನುಮಂತಪ್ಪ, ಹನುಮಂತರೆಡ್ಡಿ, ವಿರೂಪಣ್ಣ ಹನುಮಂತಪ್ಪ ಇವರ ಜೊತೆಯಲ್ಲಿ ಒಂದು ತಂಡವನ್ನು ಸಂಘಟಿಸಿ ಇವರ ಮುಂದಾಳತ್ವದಲ್ಲಿ ಬಾಗೆನಾಳು ಎಂಬ ಹಳ್ಳಿಯ ಬಳಿ ಈಚಲಮರ ಕಡಿಯುತ್ತಿದ್ದ ಸಮಯದಲ್ಲಿ ಇವರನ್ನು ಬಂಧಿಸಲಾಯಿತು. ಅಲ್ಲಿಂದ ಚಿತ್ರದುರ್ಗಕ್ಕೆ ಒಯ್ಯುವಾಗ, ದಾರಿಯಲ್ಲಿ ಈಚಲ ಹಗ್ಗ ಕಟ್ಟಿ ಇವರನ್ನು ಪೋಲಿಸರ ಬೆತ್ತದಿಂದ ಹೊಡೆಯುತ್ತ ಎಳೆದುತಂದರು. ಏಳು ದಿನ ರಿಮ್ಯಾಂಡ್ ಆದ ಮೇಲೆ ಒಂದು ವರ್ಷ ಕಠಿಣ ಶಿಕ್ಷೆ, ೧೦೦ ರೂ. ದಂಡ ಆಯಿತು. ಬಿಡುಗಡೆ ಆದ ನಂತರ ೧೯೪೨ರಲ್ಲಿ ಭೂಗತ ಚಟುವಟಿಕೆಗಳಲ್ಲಿ ಕೆಲಸ ಮಾಡಿದರು. ೧೯೪೭ರಲ್ಲಿ ಬಂಧಿತನಾಗದೆ ಚಳವಳಿಯಲ್ಲಿ ಕೆಲಸ ಮಾಡಿದರು. ಭೂಗತ ಕಾರ್ಯಗಳಲ್ಲಿ ಬ್ರಿಟಿಷ್ ಸರಕಾರಕ್ಕೆ ಹೆದರದೆ ಹೋರಾಟ ಮಾಡಿದರು.[೧೨]

ಸ್ವದೇಶಿ ಚಳವಳಿಯನ್ನು ಸಂಘಟಿಸಿದ ಲೋಕೇಶ್ವರಪ್ಪನವರು ಚಳವಳಿ ಪ್ರಾರಂಭವಾದಾಗ ಸತ್ಯಾಗ್ರಹ ಸಮಿತಿಯ ಗುಂಪನ್ನು ಹೊನ್ನಳ್ಳಿಯ ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲಿ ಸ್ವದೇಶಿ ಚಳವಳಿಯ ಬಗ್ಗೆ ಪ್ರಚಾರಕ್ಕೆಂದು ಕಳುಹಿಸಿದರು. ಈ ಸಮಯದಲ್ಲಿ ಟೆಲಿಗ್ರಾಂ ಸಂಪರ್ಕ ಇಲ್ಲದಂತೆ ಮಾಡಲು ತಂತಿ ಕತ್ತರಿಸಿ, ತಂತಿಯ ಸುರುಳಿ ಸಹಿತ ಹಿಂದಿರುಗುತ್ತಿದ್ದರು. ಅಂತಹ ಸಮಯದಲ್ಲಿ ಪೋಲಿಸರು ಅವರನ್ನು ಬಂಧಿಸಿ, ೨೦ ಮೈಲು ದೂರದ ಕಾಡಿನಲ್ಲಿ ಬಿಟ್ಟುಬಂದರು. ಅಲ್ಲಿಂದ ದಾರಿಯಲ್ಲಿ ಬರುವ ಎಲ್ಲ ಹಳ್ಳಿಗಳಲ್ಲೂ ಸ್ವದೇಶಿ ಚಳವಳಿಯ ಬಗ್ಗೆ ಪ್ರಚಾರ ಮಾಡುತ್ತ

ಊರಿಗೆ ಮರಳಿದರು. ನ್ಯಾಮತಿ ಮಾಧ್ಯಮಿಕ ಶಾಲೆಯ ಸೈಕ್ಲೊಸ್ಟೈಲ್ ಯಂತ್ರ ಅಪಹರಿಸಿ, ಅದನ್ನು ಕರಪತ್ರ ತಯಾರಿಸಲು ಬಳಸಿಕೊಂಡರು. ಆ ಸಮಯದಲ್ಲಿ ಅವರನ್ನು ಇನ್ನೊಮ್ಮೆ ಬಂಧಿಸಿ ಶಿಕಾರಿಪುರ ರಸ್ತೆಯ ಅರಣ್ಯದಲ್ಲಿ ಇಡಲಾಯಿತು. ಆ ಸಂದರ್ಭದಲ್ಲಿ ಟಯರುಗಳಿಗೆ ಮೊಳೆ ಹೊಡೆದು ಬಸ್ಸು ಚಲಿಸದಂತೆ ಮಾಡಿ ಹೊನ್ನಾಳಿ ಕಡೆ ನಡೆದುಬಂದರು. ಕಾಗಿನೆಲೆ ಎಂಬ ಗ್ರಾಮಕ್ಕೆ ಮಿಲಿಟರಿ ಬರಲಿದೆಯೆಂದು ತಿಳಿದು, ಆ ಊರಿಗೆ ಸಮೀಪದ ಆಯಕಟ್ಟಿನ ಸೇತುವೆ ನಾಶಮಾಡಿ ಸಂಚಾರ ಸಂಪರ್ಕ ಕಡಿದು ಹಾಕಿದರು. ಹೊನ್ನಾಳಿ ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಖಾದಿ ಪ್ರಚಾರದ ಚಟುವಟಿಕೆ ನಡೆಸಿದರು. ಖಾದಿ ಉತ್ಪಾದನೆಯಲ್ಲಿ ಪೂರ್ಣ ಅನುಭವ ಪಡೆಯಲು ೧೯೪೬ರಲ್ಲಿ ಬದನವಾಳ ಕೇಂದ್ರದಲ್ಲಿ ತರಬೇತಿ ಪಡೆದರು. ಖಾದಿಯ ಮಹತ್ವದ ಕುರಿತು ಜನರಿಗೆ ತಿಳಿಸಲಾಯಿತು.[೨೪]

ಈ ರೀತಿಯಾಗಿ ದಾವಣಗೆರೆ ಜಿಲ್ಲೆಯಾದ್ಯಂತ ಈ ಚಳವಳಿ ವ್ಯಾಪಿಸಿತು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ, ಸುಟ್ಟು ಹಾಕಲಾಯಿತು. ವಿದೇಶಿ ಬಟ್ಟೆಗಳನ್ನು ಯಾರೂ ಉಪಯೋಗಿಸ ಬಾರದು, ಕೇವಲ ಸ್ವದೇಶಿ ಬಟ್ಟೆಗಳನ್ನು ಮಾತ್ರ ಉಪಯೋಗಿಸಬೇಕೆಂದು ಜನರಲ್ಲಿ ಮನವಿ ಮಾಡಲಾಯಿತು. ದಾವಣಗೆರೆ ಜಿಲ್ಲೆಯಾದ್ಯಾಂತ ಪ್ರತಿ ಹಳ್ಳಿ-ಹಳ್ಳಿಗೂ ಚಳವಳಿಗಾರರು ಹೋಗಿ ಖಾದಿ ಬಗ್ಗೆ ಪ್ರಚಾರ ಮಾಡಿದರು. ಪ್ರತಿಯೊಬ್ಬರು ಖಾದಿ ಬಟ್ಟೆಯನ್ನು ಧರಿಸಬೇಕು, ವಿದೇಶಿ ವಸ್ತುಗಳನ್ನು ತಿರಸ್ಕರಿಸಬೇಕು ಎಂಬುದು ಸ್ವದೇಶಿ ಚಳವಳಿಗಾರರ ಮಂತ್ರವಾಗಿತ್ತು. ಈ ಚಳವಳಿಯಲ್ಲಿ ಮೇಲೆ ಹೆಸರಿಸಿದವರಷ್ಟೇ ಅಲ್ಲದೆ ಇನ್ನೂ ಹಲವಾರು ನಾಯಕು ಪಾಲ್ಗೊಂಡರು. ಅವರುಗಳೆಂದರೆ, ದಾವಣಗೆರೆ ತಾಲೂಕಿನಿಂದ ಕೆ.ಟಿ. ಜಂಬಣ್ಣ, ಇಬ್ರಾಹಿಂಸಾಬ್, ಓಂಕಾರಪ್ಪ, ಕೆ.ಹೆಚ್. ರಂಗನಾಥ್, ಕೆ.ಆರ್. ಪಾಂಡುರಂಗರಾವ್, ಗೌಡರ ಸಿದ್ದಮ್ಮ, ಮಲ್ಲಪ್ಪ ಡಿ.ಎನ್. ಅಡಿವೆಪ್ಪ, ಹಳ್ಳೂರು ನಾಗಪ್ಪ ಮತ್ತು ರಾಚಯ್ಯ ಮಳ್ಳೀಮಠ. ಹರಿಹರ ತಾಲೂಕಿನ ಸ್ವದೇಶಿ ಚಳವಳಿಯ ರೂವಾರಿಗಳು ಪ್ರಮುಖರಾದವರು ಎಸ್. ನೀಲಪ್ಪ, ಎಂ.ಜಿ. ಕೊಟ್ರಪ್ಪ, ಕೆ. ಹಾಲಪ್ಪ ಮತ್ತು ಸಿದ್ದಪ್ಪ. ಜಗಳೂರು ತಾಲೂಕಿನಿಂದ ಜಿ. ರುದ್ರಮುನಿಯಪ್ಪ, ಡಿ. ರುದ್ರಪ್ಪ, ಟಿ. ಸಿದ್ಧಬಸಪ್ಪನಾಯಕ, ಜಿ. ನಾಗಮ್ಮ, ಪುಟ್ಟಮ್ಮ, ಎಸ್. ಕೃಷ್ಣರೆಡ್ಡಿ ಮತ್ತು ಚಂದ್ರಶೇಖರಪ್ಪ. ಚನ್ನಗಿರಿ ತಾಲೂಕಿನಿಂದ ಕತ್ತಲಗೆರೆ ರುದ್ರಪ್ಪ, ಎಲ್. ಸಿದ್ದಪ್ಪ, ಎಚ್. ಗುರುಮೂರ್ತಪ್ಪ, ಕುಂದೂರು ರುದ್ರಪ್ಪ, ಬಿ.ಜಿ. ನಾರಾಯಣಶೆಟ್ಟಿ, ಎಸ್. ಲಕ್ಷ್ಮೀಪತಿ ಮತ್ತು ಸೋಮಣ್ಣಶೆಟ್ಟಿ. ಹರಪನಹಳ್ಳಿ ತಾಲೂಕಿನಿಂದ ಅಕ್ಕಸಾಲಿ ಭಾಸ್ಕರಪ್ಪ, ಪದ್ಮಜ್ಜಿ ಸಿದ್ಧಪ್ಪ, ಬೆಳ್ಳುಳ್ಳಿ ಚನ್ನಬಸಪ್ಪ, ಹೊನ್ನಾಳಿ ಹೆಚ್.ವಿ. ರಂಗಪ್ಪ ಮತ್ತು ಹೊನ್ನಾಳಿ ಸಿ. ಈಶ್ವರಪ್ಪ.[೨೫]

ಅಡಿಟಿಪ್ಪಣಿಗಳು

೧. ಶಿವಾನಂದ ಗುಬ್ಬಣ್ಣವರು, **ರಾಷ್ಟ್ರಧರ್ಮ ನಿಷ್ಠೆ ಹರ್ಡೇಕರ್ ಮಂಜಪ್ಪ**, ರಾಷ್ಟ್ರೋತ್ಥಾನ ಪ್ರಕಾಶನ, ಬೆಂಗಳೂರು, ೧೯೮೬, ಪು. ೧೫

೨. ಸೂರ್ಯನಾಥ ಕಾಮತ್, **ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು**, ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ, ಸ್ಮರಣ ಸಂಚಿಕೆ, ೧೯೯೩, ಪು. ೫೧

೩. ಕೊಟಿಗಿ ಸಿದ್ದಲಿಂಗಪ್ಪ, **ಹೋರಾಟದ ನೆನಹು**, ಸ್ಮರಣ ಸಂಚಿಕೆ, ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಮ್ಮೇಳನ, ೧೯೯೬, ಪು. ४೧

೪. ಟಿ. ಗಿರಿಜ, **ಚಿತ್ರದುರ್ಗ ಜಿಲ್ಲಾದರ್ಶಿನಿ**, ರೇಖಾ ಪ್ರಕಾಶನ, ದಾವಣಗೆರೆ, ೧೯೯೧, ಪು. ೫೦೭

೫. ಡಿ. ಲಿಂಗಯ್ಯ, **ಸತ್ಯಗ್ರಹಿಗಳ ಸಂದರ್ಶನ**, ದಿನಕರ ಪ್ರಕಾಶನ, ಬೆಂಗಳೂರು, ೧೯೯೮, ಪು. ೩೪

೬. ಅದೇ, ಪು. ೪೩

೭. ಅದೇ, ಪು. ೪೫

೮. ಎಂ.ಜಿ. ಈಶ್ವರಪ್ಪ, **ಶತಮಾನದ ದಾವಣಗೆರೆ**, ಚಂಪಾಲಾಲ್ ಬಿ. ಡೆಲ್ಹರಿಯಾ, ದಾವಣಗೆರೆ, ೨೦೦೧, ಪು. ೩೭

೯. ಹಿರೇಮಠ ವೀರಭದ್ರಯ್ಯ, **ಹರಪನಹಳ್ಳಿ ತಾಲೂಕು ಸ್ವಾತಂತ್ರ್ಯ ಹೋರಾಟಗಾರರು**, ಶ್ರೀ ಜಗದ್ಗುರು ರೇಣುಕ ಪ್ರಕಾಶನ, ಹರಪನಹಳ್ಳಿ, ೧೯೯೮, ಪು. ೩೪

೧೦. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**, ಸಂಪುಟ ಒಂದು, ಗೀತಾ ಬುಕ್‌ಹೌಸ್, ಮೈಸೂರು, ೧೯೭೭, ಪು. ೯೬೯

೧೧. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**, ಸಂಪುಟ ಎರಡು, ಗೀತಾ ಬುಕ್‌ಹೌಸ್, ಮೈಸೂರು, ೧೯೭೭, ಪು. ೫೭೧

೧೨. ಅದೇ, ಪು. ೬೦೮

೧೩. ಅದೇ, ಪು. ೭೨

೧೪. ಅದೇ, ಪು. ೬೫೧

೧೫. ಅದೇ, ಪು. ४೩

* * *

ಅಧ್ಯಾಯ ೭

ಸಮಾರೋಪ

ಅಧ್ಯಾಯ ೭

ಸಮಾರೋಪ

ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನೊಮ್ಮೆ ಅವಲೋಕಿಸಿದಾಗ ಅದರಲ್ಲಿ ಹಲವಾರು ಮಜಲುಗಳು ಕಂಡುಬರುತ್ತವೆ. ಅವುಗಳಲ್ಲಿ ಸ್ವದೇಶಿ ಚಳವಳಿ ಪ್ರಮುಖವಾದದ್ದು. ಗ್ರಾಮ ಮತ್ತು ನಗರಗಳೆರಡನ್ನು ವ್ಯಾಪಿಸಿದ್ದ ಈ ಚಳವಳಿ ಭಾರತದಾದ್ಯಂತ ಕಂಡುಬಂತು. ಸ್ವದೇಶಿಯ ಮೂಲಕ ಬಂಡವಾಳ ಕೇಂದ್ರಿತ ವಿದೇಶಿ ಆಳ್ವಿಕೆಯನ್ನು ವಿರೋಧಿಸುವ ಹಾಗೂ ಸ್ಥಳೀಯ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಉದ್ದೇಶ ಇದರಲ್ಲಿ ಅಡಕವಾಗಿತ್ತು. ಕೈಗಾರಿಕಾ ಬಂಡವಾಳದ ಏಕಸ್ವಾಮ್ಯವನ್ನು ಮುರಿಯುವುದಕ್ಕೆ ಇದು ಪ್ರಬಲ ಅಸ್ತ್ರವಾಗಿ ಬಳಕೆಯಾಯಿತು. ಮೇಲ್ನೋಟಕ್ಕೆ ಇದೊಂದು ರಾಜಕೀಯ ಘಟನೆಯಾಗಿ ಕಂಡುಬಂದರೂ ಬ್ರಿಟಿಷರನ್ನು ಆರ್ಥಿಕವಾಗಿ ಕ್ಷೀಣಿಸುವಂತೆ ಮಾಡುವ ತಂತ್ರ ಇದರಲ್ಲಿತ್ತು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು, ಸುಟ್ಟು ಹಾಕುವುದು ಮುಂತಾದ ಘಟನೆಗಳು ಬ್ರಿಟಿಷ್ ಸರಕಾರಕ್ಕೆ ಸ್ವಲ್ಪಮಟ್ಟಿನ ಭಯ, ಆತಂಕಗಳನ್ನು ಸೃಷ್ಟಿಸಿದ್ದಂತೂ ನಿಜ. ತಿಲಕ್, ಗಾಂಧೀಜಿ ಮುಂತಾದ ರಾಷ್ಟ್ರನಾಯಕರ ಮುಂದಾಳತ್ವದಲ್ಲಿ ಸ್ವದೇಶಿ ಚಳವಳಿ ಭಾರತದಾದ್ಯಂತ ತುಂಬ ಬಿರುಸಿನಿಂದ ನಡೆಯಿತು.

ಸ್ವದೇಶಿ ಚಳವಳಿಯು ಪ್ರಪ್ರಥಮವಾಗಿ ಬಂಗಾಳದಲ್ಲಿ ಬಾಲಗಂಗಾಧರ ತಿಲಕರ ನೇತೃತ್ವದಲ್ಲಿ ಉಗ್ರ ಸ್ವರೂಪವನ್ನು ಪಡೆದುಕೊಂಡಿತು.. ೧೯೦೫ರಲ್ಲಿ ಸ್ವದೇಶಿ ಚಳವಳಿ ಅಖಿಲ ಭಾರತ ಸ್ವರೂಪವನ್ನು ತಾಳಿತ್ತು. ಆ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯಲ್ಲಿಯೂ ಸಹ ಸ್ವದೇಶಿ ಚಳವಳಿ ಆರಂಭವಾಯಿತು. ಈ ಚಳವಳಿ ಮುಂದೆ ಮಹಾತ್ಮಗಾಂಧೀಜಿಯವರ ಆಗಮನದಿಂದ ಉಗ್ರಸ್ವರೂಪವನ್ನು ಪಡೆದುಕೊಂಡಿತು. ಈ ಚಳವಳಿಯ ಮುಖ್ಯ ಉದ್ದೇಶವೆಂದರೆ ಬ್ರಿಟಿಷ್ ಅರ್ಥವ್ಯವಸ್ಥೆಯನ್ನು ಪ್ರಶ್ನಿಸುವುದು. ಬ್ರಿಟಿಷ ಸಾಮ್ರಾಜ್ಯಶಾಹಿಯ ಅಡಿಪಾಯ ಅದರ ಅರ್ಥವ್ಯವಸ್ಥೆಯಾಗಿತ್ತು. ಅದನ್ನು ಬಲಯುತಗೊಳಿಸಲು ಬ್ರಿಟಿಷ್ ಸರಕಾರ ನಾನಾ ರೀತಿಯ ಪ್ರಯೋಗಗಳನ್ನು ಮಾಡಿತು. ಅದನ್ನು ಮನಗಂಡ ಮಹಾತ್ಮಗಾಂಧೀಜಿ ಸ್ವದೇಶಿ ಚಳವಳಿಯೆನ್ನುವ ಪ್ರತಿ-ತಂತ್ರವನ್ನು ಹೂಡಿದರು. ಇದು ಜನರನ್ನು ಅತಿ ಸುಲಭವಾಗಿ ತಲುಪಬಲ್ಲ ಚಳವಳಿಯಾಗಿತ್ತು. ವಿದೇಶದಲ್ಲಿ ತಯಾರದಂತ ವಸ್ತುಗಳನ್ನು ಸ್ವದೇಶದಲ್ಲಿ ಬಹಿಷ್ಕರಿಸುವುದು, ಪಶ್ಚಿಮದ ತಂತ್ರಜ್ಞಾನ ಆಧಾರಿತ ಉತ್ಪಾದನೆ, ಅದು ಹುಟ್ಟುಹಾಕಬಹುದಾದ ಸಮಾಜ ಮೌಲ್ಯಗಳು ಮುಂತಾದವುಗಳನ್ನು ವಿರೋಧಿಸುವುದು ಸ್ವದೇಶಿಯ ಕಾರ್ಯಕ್ರಮಗಳಾಗಿದ್ದವು. ಭಾರತದ ಅರ್ಥವ್ಯವಸ್ಥೆಯ ಅಡಿಪಾಯ ಇಲ್ಲಿನ ಗ್ರಾಮೀಣ ಉದ್ದಿಮೆಗಳು, ಗುಡಿಕೈಗಾರಿಕೆಗಳು ಮತ್ತು ಸಾಂಪ್ರದಾಯಿಕ ಕಸುಬುಗಳು. ಬ್ರಿಟಿಷ್ ಸರಕಾರ ಇವುಗಳನ್ನು ನಾಶಮಾಡಿ ತನ್ನ ಮಾರುಕಟ್ಟೆ ಕೇಂದ್ರಿತ ಹಾಗೂ ಬಂಡವಾಳಶಾಹಿ ಪ್ರಾಧಾನ್ಯದ ವ್ಯವಸ್ಥೆಯೊಂದನ್ನು ಹುಟ್ಟುಹಾಕಿತು.

ಇಂತಹ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ರಾಷ್ಟ್ರನಾಯಕರು ಸ್ವದೇಶಿ ಎನ್ನುವ ಚಳವಳಿಯನ್ನು ಆರಂಭಿಸಿದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜಾತಿ, ಮತ, ಧರ್ಮ, ವರ್ಣ, ಭಾಷೆ, ವರ್ಗ ಮುಂತಾದ ಎಲ್ಲ ಬಗೆಯ ಭಿನ್ನ-ಬೇಧಗಳನ್ನು ಮರೆತು ಜನರು ಐಕ್ಯಮತದಿಂದ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರು.

ಸ್ವದೇಶಿ ಎಂದರೆ ಭಾರತದಲ್ಲಿ ತಯಾರಾದಂತ ವಸ್ತುಗಳನ್ನು ಮಾತ್ರ ಬಳಸುವುದು ಮತ್ತು ಆ ಮೂಲಕ ರಾಷ್ಟ್ರೀಯತೆಯನ್ನು ಜನರಲ್ಲಿ ಮೂಡಿಸುವುದು ಎಂದರ್ಥ. ದೇಶದ ಬಗ್ಗೆ ಪ್ರೀತಿ ಮತ್ತು ಗೌರವ ಭಾವನೆ ಮೂಡುವಂತೆ ಜಾಗೃತಿಗೊಳಿಸುವ ಹಾಗೂ ಸ್ಥಳೀಯ ಕೃಷಿ ಮತ್ತು ಕೈಗಾರಿಕೆಗಳಿಗೆ ಒತ್ತು ಕೊಡುವ ಕೆಲಸವನ್ನು ರಾಷ್ಟ್ರೀಯ ಮತ್ತು ಸ್ಥಳೀಯ ನಾಯಕರು ಮಾಡಿದರು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು ಹಾಗೂ ವಿದೇಶದಲ್ಲಿ ತಯಾರಾದಂತ ವಸ್ತುಗಳನ್ನು ಯಾರೂ ಉಪಯೋಗಿಸಬಾರದು ಎನ್ನುವ ತೀರ್ಮಾನ ಬ್ರಿಟಿಷ್ ವಸಾಹತು ಧೋರಣೆಗೆ ಒಡ್ಡಿದ ಪ್ರತಿರೋಧವಾಗಿತ್ತು. ದಾವಣಗೆರೆಯಲ್ಲಿ ಈ ಹೋರಾಟ ತುಂಬ ಯಶಸ್ವಿಯಾಗಿ ನಡೆಯಿತು. ಗಾಂಧೀಜಿಯವರು ದೇಶಿ ವಸ್ತುಗಳ ಉತ್ಪಾದನೆ ಮತ್ತು ಬಳಕೆಯ ಮಹತ್ವದ ಕುರಿತು ಜನರಿಗೆ ತಿಳಿಸಿದರು.

ದಾವಣಗೆರೆಯಲ್ಲಿ ನಡೆದ ಸ್ವದೇಶಿ ಚಳವಳಿಯ ಅಧ್ಯಯನ ನಡೆಸುವಾಗ ಪ್ರಮುಖವಾಗಿ ಮೂರು ಹಂತಗಳು ಕಂಡುಬರುತ್ತವೆ. ಅವುಗಳೆಂದರೆ, ಗಾಂಧೀಜಿಯವರ ಆಗಮನಕ್ಕಿಂತ ಪೂರ್ವದಲ್ಲಿದ್ದ ಪರಿಸ್ಥಿತಿ, ಗಾಂಧೀಜಿಯವರ ಆಗಮನದಿಂದ ಆದ ಬದಲಾವಣೆಗಳು ಹಾಗೂ ಗಾಂಧೀಜಿಯವರು ಬಂದುಹೋದ ನಂತರ ದಾವಣಗೆರೆಯಲ್ಲಿ ಸ್ವದೇಶಿ ಪ್ರಜ್ಞೆಯ ಮುಂದುವರಿಕೆ ಮತ್ತು ನಡೆದ ಹೋರಾಟಗಳು. ೧೯೦೫ರಲ್ಲಿ ಸ್ಪಷ್ಟವಾಗಿ ಸ್ವದೇಶಿ ಚಳವಳಿ ಕಂಡುಬಂದಿತಾದರೂ ಅದಕ್ಕೆ ಮುಂಚಿನ ದಶಕಗಳಲ್ಲಿಯೇ ಪೂರ್ವಸಿದ್ಧತೆ ಆಗಿದ್ದನ್ನು ಕಾಣಬಹುದು. ಆದರೆ ೧೯೦೫ರಲ್ಲಿ ಸ್ವದೇಶಿ ಚಳವಳಿ ಉಗ್ರ ಸ್ವರೂಪವನ್ನು ಪಡೆಯಿತು. ಭಾರತೀಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಮೂಲ ಉದ್ದೇಶವಿದ್ದ ಸ್ವದೇಶಿ ಸಂಪೂರ್ಣ ಬದಲಾವಣೆ ಕಂಡಿತು. ಸ್ವದೇಶಿ ಚಳವಳಿಯ ಪ್ರಥಮ ಹಂತ ಎಂಬುದಾಗಿ ಗುರುತಿಸಬಹುದಾಗಿದೆ. ಗಾಂಧೀಜಿಯವರ ಪ್ರವೇಶದಿಂದ ಸ್ವದೇಶಿ ಚಳವಳಿಯು ದೇಶದ ತುಂಬೆಲ್ಲ ಇನ್ನಷ್ಟು ಪ್ರಚಾರವನ್ನು ಪಡೆದುಕೊಂಡು ಪ್ರತಿ ಹಳ್ಳಿ-ಹಳ್ಳಿಗೂ, ಪೇಟೆ-ಪಟ್ಟಣಗಳಿಗೂ ಹರಡಿತು. ಸ್ವದೇಶಿ ಪ್ರಿಯ ಗಾಂಧೀಜಿಯವರು ವಿದೇಶದಲ್ಲಿ ತಯಾರಾದಂತ ವಸ್ತುಗಳನ್ನು ಸ್ವದೇಶದಲ್ಲಿ ಉಪಯೋಗಿಸಬಾರದು ಎಂಬುದಾಗಿ ಉಪದೇಶಿಸಿದರು. ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ ಮೂಲಭೂತವಾಗಿ ಗಾಂಧಿವಾದಿ ಸ್ವರೂಪದ್ದಾಗಿತ್ತು. ಗಾಂಧೀಜಿಯವರು ದಾವಣಗೆರೆಗೆ ಆಗಮಿಸಿದ ನಂತರ ಸ್ವದೇಶಿ ಚಳವಳಿ ಜಿಲ್ಲೆಯಾದ್ಯಂತ ಹರಡಿತು. ಈ ಬೆಳವಣಿಗೆಗಳನ್ನು ಹೋರಾಟದ ಎರಡನೆ ಹಂತ ಎಂಬುದಾಗಿ ಕರೆಯಬಹುದಾಗಿದೆ. ಗಾಂಧೀಜಿಯವರು ಬಂದು ಹೋದ ಮೇಲೆ ಅವರು ಸ್ವಾತಂತ್ರ್ಯದ ಕುರಿತು ಜನರಲ್ಲಿ ಮೂಡಿಸಿದ ಭಾವನೆಗಳು ಇನ್ನಷ್ಟು ಪ್ರಖರಗೊಂಡವು.

ಇದರಿಂದಾಗಿ ದಾವಣಗೆರೆ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಿಗುವಲ್ಲಿಯವರೆಗೆ ಅನೇಕ ಚಳವಳಿಗಳು ಬಿರುಸಿನಿಂದ ನಡೆದವು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ದಾವಣಗೆರೆಗೆ ಗಾಂಧೀಜಿಯವರ ಆಗಮನ ಎರಡು ಬಾರಿ ಆಯಿತು. ಮೊದಲ ಭೇಟಿಯಲ್ಲಿ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ತಿಳಿಹೇಳಿದರು. ಗುಜರಾತಿನಲ್ಲಿ ಅನಾವೃಷ್ಟಿಯಿಂದ ಬಹಳ ಹಾನಿಯಾಗಿದ್ದ ಸಂದರ್ಭದಲ್ಲಿ ಗಾಂಧೀಜಿಯವರು ದೇಶದ ತುಂಬ ಸಂಚರಿಸಿ ಪರಿಹಾರ ಕಾರ್ಯವನ್ನು ಕೈಗೊಂಡರು. ದಾವಣಗೆರೆಯಲ್ಲಿ ಸಹ ಗಾಂಧೀಜಿಯವರಿಗೆ ಪರಿಹಾರ ನಿಧಿಯನ್ನು ಕೊಡಲಾಯಿತು. ಗಾಂಧೀಜಿಯವರ ಸಲಹೆ ಮೇರೆಗೆ ದಾವಣಗೆರೆ ಜಿಲ್ಲೆಯ ನಾಯಕರು ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿದರು. ಎರಡನೇ ಬಾರಿ ಗಾಂಧೀಜಿಯವರು ದಾವಣಗೆರೆಗೆ ಬಂದಾಗ ಹರಿಜನ ಅಭಿವೃದ್ಧಿಯ ಬಗ್ಗೆ ಪ್ರವಾಸ ಕೈಗೊಂಡರು. ದಾವಣಗೆರೆ ಹರಿಜನ ಕೇರಿಯಲ್ಲಿ ಸಂಚರಿಸಿದರು. ನಂತರ ಹರಿಜನ ವಿದ್ಯಾರ್ಥಿನಿಲಯಕ್ಕೆ ಶಂಕುಸ್ಥಾಪನೆ ಮಾಡಿದರು. ಹೀಗೆ ಗಾಂಧೀಜಿಯವರ ಆಗಮನ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು ಕಾಣಿಸಿಕೊಳ್ಳುವುದಕ್ಕೆ ಕಾರಣವಾಯಿತು. ಸ್ವದೇಶಿ ಎನ್ನುವ ಕಲ್ಪನೆಯೇ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗಳನ್ನು ಮೈಗೂಡಿಸಿಕೊಂಡಿರುವಂಥದ್ದು.

ದಾವಣಗೆರೆಯಲ್ಲಿ ನಡೆದ ಸ್ವದೇಶಿ ಚಳವಳಿ ಅಲ್ಲಿನ ಹತ್ತಿ ಉತ್ಪಾದನೆಯಿಂದ ಕರ್ನಾಟಕದಲ್ಲಿಯೇ ಅತ್ಯಂತ ಮಹತ್ವದ್ದಾಗಿ ಕಂಡುಬಂತು. ಹತ್ತಿ ಉತ್ಪಾದನೆ ಮತ್ತು ಗಿರಣಿಗಳಿಂದಾಗಿ ದಾವಣಗೆರೆಯನ್ನು ಕರ್ನಾಟಕದ 'ಮ್ಯಾಂಚೆಸ್ಟರ್' ನಗರವೆಂಬುದಾಗಿ ಕರೆಯಲಾಗುತ್ತಿತ್ತು. ಅಲ್ಲಿ ಆರಂಭಗೊಂಡ ಹತ್ತಿ ಗಿರಣಿಗಳು ಹೊಸ ಕೈಗಾರಿಕಾ ವಾತಾವರಣವೊಂದನ್ನು ಹುಟ್ಟು ಹಾಕಿದವು. ಹತ್ತಿ ಬೆಳೆಯುವ ಪ್ರದೇಶಗಳಲ್ಲೆಲ್ಲ ಸ್ವದೇಶಿ ಚಳವಳಿ ಅತ್ಯಂತ ಚುರುಕಿನಿಂದ ಕೂಡಿತ್ತು. ಖಾದಿ ಉದ್ಯಮವು ಬ್ರಿಟಿಷ್ ವಸಾಹತು ನೀತಿಗೆ ಒಡ್ಡಿದ ಪ್ರಬಲ ಪ್ರತಿರೋಧವಾಗಿತ್ತು. ವ್ಯಾಪಾರಸ್ಥರಾಗಿ ಭಾರತಕ್ಕೆ ಆಗಮಿಸಿದ ಬ್ರಿಟಿಷರು ಕ್ರಮೇಣ ತಮ್ಮ ವಸಾಹತು ನೀತಿಯನ್ನು ಜಾರಿಗೊಳಿಸುವುದರ ಮೂಲಕ ಭಾರತವನ್ನು ತಮ್ಮ ಅಧೀನಕ್ಕೆ ತಂದುಕೊಂಡರು. ಕೃಷಿ ಪ್ರಧಾನ ದೇಶವಾದ ಭಾರತದಲ್ಲಿ ಅವರು ಕೃಷಿಯನ್ನೇ ಅಸ್ತ್ರವನ್ನಾಗಿ ಬಳಸಿಕೊಂಡರು. ಕೃಷಿಯನ್ನು ವಾಣಿಜ್ಯೀಕರಿಸುವುದು ವಸಾಹತು ತಂತ್ರಗಳಲ್ಲೊಂದಾಗಿತ್ತು. ಭಾರತದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು ಬ್ರಿಟಿಷರ ಉದ್ದೇಶವಾಗಿರಲಿಲ್ಲ. ಬ್ರಿಟನ್ನಿನ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾವಸ್ತುಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸುವುದು ಅವರ ಉದ್ದೇಶವಾಗಿತ್ತು. ಈ ಕಾರಣದಿಂದಾಗಿ ಕರಿಮೆಣಸು, ಕಾಫಿ, ರಬ್ಬರ್ ಮುಂತಾದ ಬೆಳೆಗಳಂತೆ ಹತ್ತಿಯೂ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತು.

ಬ್ರಿಟಿಷರು ಭಾರತದಲ್ಲಿ ತಮ್ಮ ರಾಜಕೀಯ ಮತ್ತು ವ್ಯಾಪಾರದ ಲಾಭಕ್ಕಾಗಿ ನಡೆಸಿದ ಹತ್ತಿ ರಾಜಕೀಯ ಗಮನಾರ್ಹವಾದದ್ದು. ಬ್ರಿಟಿಷರು ಹತ್ತಿಯನ್ನು ಬೆಳೆಯುವುದಕ್ಕೆ ವ್ಯಾಪಕ ಬೆಂಬಲ

ನೀಡಿದರು. ಬ್ರಿಟಿಷರು ಮತ್ತು ಅವರಿಗೆ ನೆರವಾದ ಸ್ಥಳೀಯ ಜನರು ಅಥವಾ ಅವರಿಂದ ಲಾಭ ಪಡೆದುಕೊಡವರು ಇದರ ಸಂಪೂರ್ಣ ಲಾಭವನ್ನು ಪಡೆದುಕೊಂಡರು. ಆದರೆ ಇದರಿಂದ ಕೃಷಿಕರಿಗೆ ಮತ್ತು ಕುಶಲಕರ್ಮಿಗಳಿಗೆ ಏನು ಪ್ರಯೋಜನವಾಗಲಿಲ್ಲ. ಶ್ರೀಮಂತ ವರ್ತಕರು ಅನೇಕ ಹತ್ತಿ ಮಿಲ್‌ಗಳನ್ನು ಸ್ಥಾಪಿಸಿಕೊಂಡರು. ಇವರು ಹೊಸ ಹೊಸ ಯಂತ್ರೋಪಕರಣಗಳನ್ನು ಯುರೋಪಿನಿಂದ ಪಡೆದುಕೊಂಡರು. ಈ ಉದ್ದೇಶದಿಂದಾಗಿ ಹತ್ತಿ ಬೆಳೆಯುವ ಹೊಸ ಹೊಸ ಪ್ರದೇಶಗಳು ಕಾಣಿಸಿಕೊಳ್ಳಲಾರಂಭಿಸಿದವು. ಅಲ್ಲಿನ ಭೌಗೋಳಿಕತೆಯೂ ಹತ್ತಿ ಬೆಳೆಯುವುದಕ್ಕೆ ಪೂರಕವಾಗಿತ್ತು. ಸ್ಥಳೀಯ ಹತ್ತಿ ವ್ಯಾಪಾರಸ್ಥರಿಗೆ ಈ ಬದಲಾವಣೆ ಲಾಭದಾಯಕವಾಗಿರಲಿಲ್ಲ. ಕೇವಲ ಶ್ರೀಮಂತ ರೈತರು ಮತ್ತು ಉದ್ದಿಮೆದಾರರು ಇದರ ಪ್ರಯೋಜನವನ್ನು ಪಡೆದುಕೊಂಡರು. ಹೊಸ ತಂತ್ರಜ್ಞಾನ ದೊಂದಿಗೆ ಸಿದ್ಧವಾಗಿ ಭಾರತಕ್ಕೆ ಪ್ರವೇಶಿಸಿದ ಹತ್ತಿ ಬಟ್ಟೆಗಳು ನಯವಾಗಿ ಆಕರ್ಷಕವಾಗಿ ಕಡಿಮೆ ಬೆಲೆಯಿಂದ ಕೂಡಿದ್ದವು. ಇದು ಸ್ಥಳೀಯ ಗ್ರಾಮ ಮತ್ತು ನಗರ ವ್ಯವಸ್ಥೆಗಳೆರಡರ ಮೇಲೂ ಕೆಟ್ಟ ಪರಿಣಾಮಗಳನ್ನು ಬೀರಿತು. ಇಂತಹ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಭಾರತದಲ್ಲಿ ಹೋರಾಟಗಳು ಕಾಣಿಸಿಕೊಂಡವು. ಗಾಂಧೀಜಿಯವರು ತಮ್ಮ ಸ್ವದೇಶಿ ಹೋರಾಟದಲ್ಲಿ ಹತ್ತಿಯನ್ನೇ ಪ್ರಧಾನವಾಗಿ ಆಯ್ಕೆ ಮಾಡಿಕೊಂಡರು. ಸ್ವದೇಶದಲ್ಲಿ ಉತ್ಪಾದನೆಗೊಳ್ಳುವ ಹತ್ತಿ ಬಟ್ಟೆಗಳನ್ನೇ ಬಳಸಬೇಕು ಹಾಗೂ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಬೇಕೆಂದು ಕರೆಕೊಟ್ಟರು. ಹತ್ತಿ ಬೆಳೆಗೆ ಪ್ರಸಿದ್ಧಿಯಾಗಿದ್ದ ದಾವಣಗೆರೆ ಯಲ್ಲಿ ಗಾಂಧೀಜಿ ನೇತೃತ್ವದಲ್ಲಿ ಈ ಸ್ವಗೇಶಿ ಚಳವಳಿ ತುಂಬ ಚುರುಕಿನಿಂದ ಹಾಗೂ ಉಗ್ರವಾಗಿ ನಡೆಯಿತು. ದಾವಣಗೆರೆ ಜಿಲ್ಲೆಯಲ್ಲಿ ಖಾದಿ ಉದ್ದಿಮೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲಾಯಿತು. ಖಾದಿ ಕೇಂದ್ರಗಳು ದಾವಣಗೆರೆಯಲ್ಲಿ ಹುಟ್ಟಿಕೊಂಡವು.

ದಾವಣಗೆರೆ ಜಿಲ್ಲೆಯಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ನಿರಂತರ ಹೋರಾಟಗಳು ನಡೆದವು. ಇದರಲ್ಲಿ ಸಮಾಜದ ಎಲ್ಲ ವರ್ಗದ ಜನರೂ ಭಾಗವಹಿಸಿದರು. ರೈತರು, ಕುಶಲಕರ್ಮಿಗಳು, ಕೈಗಾರಿಕಾ ಕಾರ್ಮಿಕರು ಹಾಗೂ ಮಹಿಳೆಯರು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಧ್ವನಿ ಎತ್ತಿದರು. ಇವರೆಲ್ಲರೂ ಕೆಲವು ಸ್ವದೇಶಿ ಚಳವಳಿಯ ಮುಖಂಡರ ನಾಯಕತ್ವದಲ್ಲಿ ಹೋರಾಟ ನಡೆಸಿದರು. ಖಾದಿ ಸಿದ್ದಪ್ಪ, ಕಾಸಲ ಶ್ರೀನಿವಾಸಶೆಟ್ಟಿ, ಬಳ್ಳಾರಿ ಸಿದ್ದಮ್ಮ, ಇಜಾರಿ ವಸುಪಾಲಪ್ಪ, ಕೊಟಿಗೆ ಸಿದ್ಧಲಿಂಗಪ್ಪ, ಇಟಗಿ ವೇದಮೂರ್ತಿ, ಕೆ.ಟಿ. ಜಂಬಣ್ಣ ಮತ್ತು ಹರ್ಡೇಕರ್ ಮಂಜಪ್ಪ ಮುಂತಾದವರು ಹೋರಾಟಗಳನ್ನು ಸಂಘಟಿಸಿದರು. ಇವರು ಸ್ವದೇಶಿ ಚಳವಳಿಯ ರೂವಾರಿಗಳಾಗಿ ಕಾಣಿಸಿಕೊಂಡರು. ಇವರೆಲ್ಲರೂ ಸ್ವದೇಶಿ ವಸ್ತುಗಳ ಬಳಕೆ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರವನ್ನು ಪ್ರತಿಯೊಬ್ಬರೂ ಮಾಡಬೇಕೆಂದು ಕರೆಕೊಟ್ಟರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಣಿಸಿಕೊಂಡ ಈ ಸ್ವದೇಶಿ ಚಳವಳಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಕೂಡಿತ್ತು. ಈ

ಚಳವಳಿಯಲ್ಲಿ ಪಾಲ್ಗೊಂಡ ಪ್ರತಿಯೊಬ್ಬರು ಮೇಲಿನ ಉದ್ದೇಶಗಳ ಈಡೇರಿಕೆಗಾಗಿ ಶ್ರಮಿಸಿದರು. ಸ್ವದೇಶಿ ಕಲ್ಪನೆ ಬ್ರಿಟಿಷ್ ವಸಾಹತುಶಾಹಿ ಧೋರಣೆಯನ್ನು ವಿರೋಧಿಸಿ ಹುಟ್ಟಿಕೊಂಡಿದ್ದು. ಹಾಗಾಗಿ ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ಇದು ನಿರಂತರವಾಗಿ ಕಂಡುಬಂದಿತು. ಆದರೆ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಕಂಡುಬಂದ ಸ್ವದೇಶಿ ಕಲ್ಪನೆಯು ಭಿನ್ನವಾಗಿತ್ತು. ಇದು ಪಕ್ಷ ರಾಜಕೀಯ ಮತ್ತು ಧಾರ್ಮಿಕ ಹಿತಾಸಕ್ತಿಗಳಿಂದ ಕೂಡಿರುವಂತಹದು. ಇದು ದೇಶದ ಸಮಗ್ರತೆಗೆ ಅಪಾಯಕಾರಿಯಾದ ಬೆಳವಣಿಗೆ. ಹೀಗಾಗಿ ಸ್ವದೇಶಿ ಎಂದ ಮಾತ್ರಕ್ಕೆ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಸಂದರ್ಭಗಳಲ್ಲಿ ನಡೆದಿದ್ದು ಒಂದೇ ಮಾದರಿಯದ್ದು ಎಂಬುದಾಗಿ ಗ್ರಹಿಸುವುದು ತಪ್ಪಾಗುತ್ತದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಂಡುಬಂದ ಸ್ವದೇಶಿ ಚಳವಳಿ ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸುವ ಹಾಗೂ ಇಲ್ಲಿನ ಸ್ಥಳೀಯ ಕೃಷಿ ಮತ್ತು ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಕೂಡಿತ್ತು. ಇದಕ್ಕೆ ಗಾಂಧೀಜಿಯಂತವರ ಸಮರ್ಥ ನಾಯಕತ್ವ ದೊರಕಿತು. ಈ ಕಾರಣಗಳಿಂದಾಗಿ ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಸ್ವದೇಶಿ ಚಳವಳಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿತು.

* * *

ಆಧಾರಗ್ರಂಥಗಳು

೧. ಅಯೋಧ್ಯಸಿಂಗ್, (ಅನು.). ಬಿ. ವಿಷ್ಣುಮೂರ್ತಿ, **ಭಾರತದ ರಾಷ್ಟ್ರೀಯ ಚಳವಳಿ**, ಭಾರತೀ ಪ್ರಕಾಶನ, ಮೈಸೂರು, ೧೯೮೫

೨. ಆ್ಯಂಟನಿಗ್ರಾಂಸಿ, **ಸೆಲೆಕ್ಷನ್ ಫ್ರಂ ದ ಪ್ರಿಸನ್ ನೋಟ್‌ಬುಕ್ಸ್**, ಕ್ವಿಂಟಿನ್ ಹೋರೆ ಗಿಯೋಫ್ರಿನಾವೆಲ್ ಸ್ಮಿತ್, ಲಂಡನ್, ೧೯೭೧

೩. ಇಕ್ಬಾಲ್ ಅಹಮದ್ ಕೆ.ಆರ್., **ಚನ್ನಗಿರಿ ದರ್ಶನ**, ಭಾಗ-ಎರಡು, ಪ್ರಿಯದರ್ಶಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೦

೪. ಈಚನೂರು ಶಾಂತ, **ಮಹಾತ್ಮ ಗಾಂಧೀಜಿ**, ಪೃಥ್ವಿ ಪ್ರಕಾಶನ, ಬೆಂಗಳೂರು, ೧೯೯೭

೫. ಈಶ್ವರಪ್ಪ ಎಂ.ಜಿ., **ಶತಮಾನದ ದಾವಣಗೆರೆ**, ಚಂಪಾಲಾಲ್ ಬಿ. ಡೆಲ್ಲರಿಯಾ, ದಾವಣಗೆರೆ, ೨೦೦೧

೬. ಕೃಷ್ಣಚೈತನ್ಯ, (ಅನು.). ಛೈರರಾಜ, **ಭಾರತದ ಸ್ವಾತಂತ್ರ್ಯ ಕಥೆ**, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೧೯೭೮

೭. ಗಿರಿಜ ಟಿ., **ದಾವಣಗೆರೆ : ಇದು ನಮ್ಮ ಜಿಲ್ಲೆ**, ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧

೮. ಗಿರಿಜ ಟಿ., ಚಿತ್ರದುರ್ಗ ಜಿಲ್ಲಾದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ, ೧೯೯೧

೯. ಚಂದ್ರಶೇಖರ ಎಸ್., (ಸಂ.). **ಕರ್ನಾಟಕ ಚರಿತ್ರೆ ಸಂಪುಟ-೭**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೦. ಚಂದ್ರಶೇಖರ್ ಎಸ್., (ಅನು.). ಸಿ. ನಾಗಣ್ಣ, **ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೧. ಚನ್ನಬಸವೇಶ್ವರ, ಬಳ್ಳಾರಿ ಜಿಲ್ಲಾ **ದರ್ಶನ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೮

೧೨. ಚಂದ್ರಶೇಖರ ಟಿ.ಆರ್., **ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ**, ಶ್ರೀ ಸಿದ್ಧವೀರ ಶಿವಚಾರ್ಯ ಜ್ಞಾನ ಪ್ರಕಾಶನ, ಪುರ, ೧೯೯೪

೧೩. ತಂಬಂಡ ವಿಜಯ್ ಪೂಣಚ್ಚ (ಸಂ.). **ಚರಿತ್ರೆ ವಿಶ್ವಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೪. ತೆಂಡೂಲ್ಕರ್ ಡಿ.ಜಿ. **ಮಹಾತ್ಮ**, ಸಂಪುಟ-೨೩, ಪಬ್ಲಿಕೇಷನ್ ಡಿವಿಜನ್, ಮಿನಿಸ್ಟ್ರಿ ಆಫ್ ಇನ್‌ಫಾರ್‌ಮೇಶನ್ ಅಂಡ್ ಬ್ರಾಡ್‌ಕಾಸ್ಟಿಂಗ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ೧೯೭೫

೧೫. ತಾರಾಚಂದ್, (ಅನು.), ಜಿ.ಎಸ್. ದೀಕ್ಷಿತ್, **ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ**, ಸಂಪುಟ-ಎರಡು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

೧೬. ದಸ್ತಗೀರ್ ಎಮ್., **೧೮೫೭ರ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮ**, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ೧೯೯೭

೧೭. ನರಸಿಂಹ ದಾಬಡೆ, **ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೧೮. ನಾರಾಯಣ ಶಾಸ್ತ್ರಿ, **ರಾಷ್ಟ್ರೀಯ ಮಹಾಪುರುಷರು**, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೮

೧೯. ನಾರಾಯಣರಾವ್ ವಿ.ಎಸ್., **ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ**, ಐ.ಬಿ.ಎಚ್. ಬೆಂಗಳೂರು, ೧೯೮೦

೨೦. ಪರಮೇಶ್ವರ ಎನ್.ಎಸ್., ಎಸ್. ಶಂಕರ್, **ಹತ್ತಿ:ಬಿಳಿ ಬಂಗಾರ**, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ೧೯೮೭

೨೧. ಫ್ರಾನ್ಸಿಸ್ ಬುಕನನ್, **ಎ ಜರ್ನಿ ಫ್ರಂ ಮದ್ರಾಸ್ ಥ್ರೋ ದ ಕಂಟ್ರೀಸ್ ಆಫ್ ಮೈಸೂರು, ಕೆನರಾ ಆಂಡ್ ಮಲಬಾರ್**, ಏಷಿಯನ್ ಏಜ್ಯುಕೇಷನಲ್ ಸರ್ವಿಸಸ್, ನ್ಯೂಡೆಲ್ಲಿ, ೧೯೮೮, ಸಂಪುಟ I, (ಪಸ್ಟ್ ಪಬ್ಲಿಕೇಷನ್ ೧೮೦೭), ಪು. ೩೩೦

೨೨. ಬಸವರಾಜ ಮಲಶೆಟ್ಟಿ, **ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೨೩. ಬಸಯ್ಯ ಕೆ., ಕೆ.ಟಿ. ರಾಮಸ್ವಾಮಿ ಅಯ್ಯಂಗರ್, **ಗಾಂಧಿ-ತಿಲಕ್**, ಮೋಹನ್ ಪ್ರಕಾಶನ, ಮೈಸೂರು, ೧೯೬೮

೨೪. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್ ಡೇ, (ಅನು.), ಆರ್.ಎಲ್. ಅನಂತರಾಮಯ್ಯ, **ಸ್ವಾತಂತ್ರ್ಯದ ಹೋರಾಟ**, ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ, ಹೊಸ ದೆಹಲಿ, ೧೯೭೨

೨೫. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್ ಡೇ, **ಫ್ರೀಡಮ್ ಸ್ಟ್ರಗಲ್**, ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ, ಹೊಸ ದೆಹಲಿ, ೧೯೭೨

೨೬. ಬಿಪನ್ ಚಂದ್ರ ಮತ್ತಿತರರು, **ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್**, ಪೆಂಗ್ವಿನ್ ಬುಕ್ಸ್, ನ್ಯೂಡೆಲ್ಲಿ, ೧೯೮೮

೨೭. ಮುಜುಂದಾರ್ ಆರ್.ಸಿ., (ಅನು.), ಎ.ವಿ. ನರಸಿಂಹಮೂರ್ತಿ, **ಸ್ವಾತಂತ್ರ್ಯ ಸಂಗ್ರಾಮ**, ಭಾಗ-ಒಂದು, ಸಂಪುಟ-೨೩, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೯೮

೨೮. ಮಜುಮ್‌ದಾರ್ ಪಿ.ಆರ್., ಆರ್.ಕೆ. ಭರದ್ವಾಜ್, ಆರ್.ಸಿ. ಚೌಧುರಿ, **ಭಾರತ ಸ್ವಾತಂತ್ರ್ಯ ಸಂಗ್ರಾಮ**, ಚೇತನ ಬುಕ್‌ಹೌಸ್, ಮೈಸೂರು, ೧೯೯೭

೨೯. ಮೋ.ಕ. ಗಾಂಧೀ, (ಅನು.). ಸ್ವಾ.ರಾ. ಕುಲಕರ್ಣಿ, **ನನ್ನ ಕಲ್ಪನೆಯ ಸಮಾಜವಾದ**, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೮೭

೩೦. ಮಾಯಾದೇವಿಶರ್ಮ ಚರಂತಿಮಠ, **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ** ನಾರಿ, ಮಾಯಾಪ್ರಿಯ ಪ್ರಕಾಶನ, ರಾಯಚೂರು, ೧೯೯೮

೩೧. ಮಾರ್ಕ್ಸ್, ಎಂಗೆಲ್ಸ್, **ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ**, ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ, ಮಾಸ್ಕೋ, ೧೯೮೦

೩೨. ಮೈಸೂರು ಸ್ಟೇಟ್ ಗೆಜೆಟಿಯರ್, **ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್**, ಗವರ್ನ್‌ಮೆಂಟ್ ಪ್ರೆಸ್, ಬೆಂಗಳೂರು, ೧೯೭೪

೩೩. ರಂಗಸ್ವಾಮಯ್ಯ ಆರ್. **ಸಂಕ್ಷಿಪ್ತ ಚರಿತ್ರೆ**, ಚೇತನ ಬುಕ್‌ಹೌಸ್, ಮೈಸೂರು, ೨೦೦೧

೩೪. ರಣಜಿತ್‌ಗುಹಾ, **ಸಬಾಲ್ಟರ್ನ್ ಸ್ಟಡೀಸ್**, ಸಂಪುಟ ೧ ರಿಂದ ೬, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, ೧೯೯೮

೩೫. ರಾಮಸ್ವಾಮಿ ಎಸ್.ಆರ್., **ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು**, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೧೯೯೮

೩೬. ಲಿಂಗಯ್ಯ ಡಿ., **ಸತ್ಯಾಗ್ರಹಿಗಳ ಸಂದರ್ಶನ**, ದಿನಕರ ಪ್ರಕಾಶನ, ಬೆಂಗಳೂರು, ೧೯೯೮

೩೭. ವೀರಭದ್ರಯ್ಯ ಹಿರೇಮಠ, **ಹರಪನಹಳ್ಳಿ ತಾಲೂಕು ಸ್ವಾತಂತ್ರ್ಯ ಹೋರಾಟಗಾರರು**. ಶ್ರೀ ಜಗದ್ಗುರು ರೇಣುಕ ಪ್ರಕಾಶನ, ಹರಪನಹಳ್ಳಿ, ೧೯೯೮

೩೮. ವಿನ್ಸೆಂಟ್‌ಷೀನ್, (ಅನು.). ವಿ.ಎಸ್. ನಾರಾಯಣರಾವ್, **ಮಹಾತ್ಮಗಾಂಧಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭

೩೯. **ಹೋರಾಟದ ನೆನಪು**, ಸ್ಮರಣ ಸಂಚಿಕೆ, ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಮ್ಮೇಳನ, ೧೯೯೬

೪೦. ಶಂಕರನಾರಾಯಣರಾವ್ ಎಸ್.ಪಿ., **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು**, ನವಕರ್ನಾಟಕ ಪಬ್ಲಿಕೇಷನ್, ಪ್ರೈವೆಟ್ ಲಿಮಿಟೆಡ್, ೧೯೯೧

೪೧. ಶಂಕರನಾರಾಯಣರಾವ್ ಎಸ್.ಪಿ., **ಸ್ವಾತಂತ್ರ್ಯದ ಗುರಿ ಭಾರತದ ದಾರಿ**, ನವಕರ್ನಾಟಕ ಪಬ್ಲಿಕೇಷನ್, ಪ್ರೈವೆಟ್ ಲಿಮಿಟೆಡ್, ೧೯೯೨

೪೨. ಶ್ರೀನಿವಾಸಮೂರ್ತಿ ಎ.ಪಿ., **ಭಾರತದ ಸ್ವಾತಂತ್ರ್ಯ ಚಳವಳಿ** ೧೮೫೭-೧೯೪೭, ಅಭ್ಯುದಯ ಪ್ರಕಾಶನ, ಬೆಂಗಳೂರು, ೧೯೮೭

೪೩. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ, **ಚಂದ್ರವಳ್ಳಿ,** ಜಿಲ್ಲಾ ಕೌನ್ಸಿಲ್ ಇತಿಹಾಸ ಸಂಶೋಧನ, ಚಿತ್ರದುರ್ಗ, ೧೯೭೬

೪೪. ಶ್ರೀನಿವಾಸಮೂರ್ತಿ ಹೆಚ್.ವಿ., ಆರ್. ರಾಮಕೃಷ್ಣನ್, **ಸಮಗ್ರ ಕರ್ನಾಟಕ ಚರಿತ್ರೆ,** ಓರಿಯಂಟ್ ಲಾಂಗಮನ್ ಲಿಮಿಟೆಡ್, ಬೆಂಗಳೂರು, ೧೯೯೫

೪೫. ಶಿವಾನಂದ ಗುಬ್ಬಣ್ಣ, **ರಾಷ್ಟ್ರಧರ್ಮ ನಿಷ್ಠೆ : ಹರ್ಡೇಕರ್ ಮಂಜಪ್ಪ,** ರಾಷ್ಟ್ರೋತ್ಥಾನ ಪ್ರಕಾಶನ, ಬೆಂಗಳೂರು, ೧೯೮೬

೪೬. ಶೇಷಾದ್ರಿ ಬಿ., ಟಿ.ಆರ್. ಚಂದ್ರಶೇಖರ್, **ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೮

೪೭. ಶೇಷಗಿರಿರಾವ್ ಎಲ್.ಎಸ್., **ಭಾರತದ ಸ್ವಾತಂತ್ರ್ಯ ಸಂಗ್ರಾಮ,** ಸಪ್ನ ಬುಕ್‌ಹೌಸ್, ಬೆಂಗಳೂರು, ೧೯೯೭

೪೮. ಸತ್ಯನ್ ಬಿ.ಎನ್., **ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್,** ಗವರ್ನ್‌ಮೆಂಟ್ ಪ್ರೆಸ್, ೧೯೬೭

೪೯. ಸದಾಶಿವಪ್ಪ ಕುಂ.ಬಾ., **ಹಲವು ಹನ್ನೊಂದು ಹರಪನಹಳ್ಳಿ,** ಮಾಲತೇಶ ಪ್ರಕಾಶನ, ಹರಪನಹಳ್ಳಿ, ೨೦೦೨

೫೦. ಸಿದ್ದಪ್ಪನಹಳ್ಳಿ ಕೃಷ್ಣಶರ್ಮ, **ಗಾಂಧಿ ಮತ್ತು ಕರ್ನಾಟಕ,** ಮೈಸೂರು ರಾಜ್ಯ ಗಾಂಧಿ ಸ್ಮಾರಕ ನಿಧಿ, ಗಾಂಧೀಭವನ, ಬೆಂಗಳೂರು, ೧೯೭೦

೫೧. ಸೂರ್ಯನಾಥ ಯು. ಕಾಮತ್, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್,** ಭಾಗ-ಎರಡು, ೧೯೮೫

೫೨. ಸೂರ್ಯನಾಥ ಯು. ಕಾಮತ್, **ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು,** ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು, ೧೯೯೩

೫೩. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ-೧, ಗೀತಾಬುಕ್‌ಹೌಸ್, ಮೈಸೂರು, ೧೯೭೪

೫೪. ಸೂರ್ಯನಾಥ ಕಾಮತ್, ಅದೇ, ಸಂಪುಟ-೨, ಗೀತಾ ಬುಕ್‌ಹೌಸ್, ಮೈಸೂರು, ೧೯೭೭

೫೫. ಸೂರ್ಯನಾಥ ಕಾಮತ್, ಅದೇ, ಸಂಪುಟ-೩, ಗೀತಾಬುಕ್‌ಹೌಸ್, ಮೈಸೂರು, ೧೯೮೦

೫೬. ಸುಬ್ಬಣ್ಣ ಕೆ.ವಿ., **ಸ್ವರಾಜ್ಯದ ಹಾದಿ ಹೆಜ್ಜೆಗಳು,** ಕರ್ನಾಟಕ ಸಂಘ, ಪುತ್ತೂರು, ದ.ಕ. ೧೯೯೮

೫೭. ಸುಮಿತ್ ಸರ್ಕಾರ್, **ಮಾಡರ್ನ್ ಇಂಡಿಯಾ,** ನ್ಯೂಡೆಲ್ಲಿ, ೧೯೮೩

೫೮. ಸುಮಿತ್ ಸರ್ಕಾರ್, **ದಿ ಸ್ವದೇಶಿ ಮೂವ್‌ಮೆಂಟ್ ಇನ್ ಬೆಂಗಾಳ್,** ೧೯೦೩-೧೯೦೮, ನ್ಯೂಡೆಲ್ಲಿ, ೧೯೭೩

ಸ್ವಾತಂತ್ರ್ಯ ಹೋರಾಟಗಾರರ ನೇರ ಸಂದರ್ಶನ

೧. ಕುಂ.ಬಾ. ಸದಾಶಿವಪ್ಪ, ೩.೧೧.೨೦೦೪

೨. ಎಲ್. ಭೋಜನಾಯ್ಕ, ೬.೧೧.೨೦೦೪

೩. ರಾಚಯ್ಯ ಮಳಿಮಠ, ೧೨.೧೧.೨೦೦೪

೪. ಎ. ಭಾಸ್ಕರಾಚಾರ್, ೧೫.೧೧.೨೦೦೪

೫. ಬೆಳ್ಳುಳ್ಳಿ ಚನ್ನಬಸಪ್ಪ, ೧೬.೧೧.೨೦೦೪

೬. ಪದ್ಮಜ್ಜಿ ಸಿದ್ದಪ್ಪ, ೨೦.೧೧.೨೦೦೪

ನಿಯತಕಾಲಿಕೆಗಳು

೧. ಧನುರ್ಧಾರಿ ಪತ್ರಿಕೆ

೨. ಭಾರತೀಯ ರಾಷ್ಟ್ರೀಯತೆ

೩. ಪ್ರಜಾವಾಣಿ

೪. ಸಂಯುಕ್ತ ಕರ್ನಾಟಕ

೫. ದ ಹಿಂದೂ

೬. ಡೆಕ್ಕನ್ ಹೆರಾಲ್ಡ್

೭. ಜನತಾವಾಣಿ

೮. ವಿಜಯ ಕರ್ನಾಟಕ



ಮಹಾತ್ಮಗಾಂಧಿಯವರು ಆದಿಕರ್ನಾಟಕ ಹಾಸ್ಟೆಲ್‌ಗೆ ಮಾಡಿದ ಶಿಲಾನ್ಯಾಸ



ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು



ಹುತಾತ್ಮರ ವೀರಗಲ್ಲು



ದಾವಣಗೆರೆಯ ಮಹಾತ್ಮಗಾಂಧಿ ಸ್ಮಾರಕ ಮಂದಿರ

MEHABOOB PRINTERS
1st Ward, Chittawadgi, HOSPET-583 211.